ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಆಗಸ್ಟ್ 25, 2010 ರೂ. 12/-

ಕಾಶ್ಮೀರ ಮಹಿಳೆಯರ ಕೈಲಿ ಕಲ್ಲು

ಳ್ಳಾರಿಗೆ ರ್ತಾಳೆ

ಬ್ರಾಹ್ಮಣರ ಮನೆಯಲ್ಲಿ ಪೂಜೆ ರೆಡ್ಡಿ ಮನೆಯಲ್ಲಿ 'ಲಕ್ಷ್ಮಿ'




ಕಳ್ಳರ ನಾಯಕಿ



ಪ್ರಿಯಾಂಕಾ ಕೊಲೆ ಸಾಫ್ಟ್‌ವೇರ್ ಲೋಕದ ಹಾರ್ಡ್‌ಕೋರ್ ಕ್ರಿಮಿನಲ್

ಕಾರ್ಪೋರೇಟರ್ ಉಮೇಶ್ ಶೆಟ್ಟಿ ರಗಳೆ

ಅಡಿಕೆ ತೋಟಗಾರರ TSS ದಿವಾಳಿ



ಪ್ರೀತಿಯ ವಿದಾಯ

- ರಹಮತ್ ತರೀಕೆರೆ
- ಬಸವರಾಜ ಕಲ್ಗುಡಿ
- ಗೌರಿ ಲಂಕೇಶ್

ಕಾಶ್ಮೀರಿ ತಾಯಿ ಎಸೆಯುತ್ತಿರುವ ಕಲ್ಲು ನಮ್ಮೊಳಗಿರುವ ಪ್ರಭುತ್ವಕ್ಕೂ ಬಡಿಯಬೇಕು!



ಚಾರ್ವಾಕ



ಶಿವಸುಂದರ್

ಕಾಶ್ಮೀರದ ನಿಶಸ್ತ್ರ ಯುವಜನತೆ ಜೀವದ ಹಂಗು ತೊರೆದು ಎಕೆ-47, ಟ್ಯಾಂಕರ್ ಇನ್ನಿತ್ಯಾದಿಗಳಿಂದ ಸಜ್ಜಿತರಾಗಿರುವ ಭಾರತ ಸರ್ಕಾರದ ಸೈನಿಕರ ವಿರುದ್ಧ ಬೀದಿಕಾಳಗ ನಡೆಸುತ್ತಿದೆ. ಒಂದು ಕೈಯಲ್ಲಿ ಎಳೆ ಮಗುವನ್ನು ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಕಲ್ಲನ್ನು ತೆಗೆದುಕೊಂಡು ತಮ್ಮನ್ನು ಕೊಲ್ಲಲು ಬರುತ್ತಿರುವ ಸಿಆರ್‌ಪಿಎಫ್ ಸೈನಿಕರತ್ತ ಬೀಸುತ್ತಿರುವ ತಾಯಂದಿರು, ತೊಟ್ಟುಮಕ್ಕಳೂ ಸಹ ಕಳೆದ ಎರಡು ತಿಂಗಳಿಂದ ನಡೆಯುತ್ತಿರುವ ಈ ಜನಸಂಗ್ರಾಮದಲ್ಲಿ ಸರಿಸಮವಾಗಿ ಭಾಗವಹಿಸುತ್ತಿದ್ದಾರೆ. ಆದರೆ ಅವರು ಎಸೆಯುತ್ತಿರುವ ಕಲ್ಲು ಕೇವಲ ಸೈನಿಕರ ಮೇಲೆ ಮಾತ್ರ ಎಂದು ತಿಳಿದುಕೊಂಡರೆ ತಪ್ಪಾದೀತು! ಕಾಶ್ಮೀರದ ಕರಾಳ ಕಥೆಗಳಿಗೆ ಕಿವಿಗೊಡದೆ ಜಡ್ಡುಗಟ್ಟಿ ಕೂತಿರುವ ನಮ್ಮೆಲ್ಲರ ಸಂವೇದನೆಗಳನ್ನೂ ಆ ಕಲ್ಲೆಸೆತ ಗುರಿ ಮಾಡಿಕೊಂಡಿದೆ!

ಕಳೆದ ಜೂನ್ 10ರಂದು ಪ್ರಾರಂಭವಾದ ಕಾಶ್ಮೀರಿ ಜನತೆಯ ಈ ನಿಶಸ್ತ್ರ ಪ್ರತಿರೋಧದ ಮೇಲೆ ಭಾರ'ದ ಸೈನ್ಯ ಗುಂಡನ್ನು, ಅಶ್ರುವಾಯು ಸೆಲ್‌ಗಳನ್ನು ಹಾಕಿ ಈಗಾಗಲೇ 50ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಇದರಲ್ಲಿ 9 ವಯಸ್ಸಿನ ಹುಡುಗರಿಂದ ಹಿಡಿದು 70 ವಯಸ್ಸಿನ ಮುದುಕರೂ ಇದ್ದಾರೆ.

ಇಂಥಾ ಪರಿಸ್ಥಿತಿ ಬೇರೆ ಯಾವುದೇ ರಾಜ್ಯದಲ್ಲಿ ಉದ್ಭವವಾಗಿದ್ದರೂ ಭಾರತೀಯ ನಾಗರಿಕ ಸಮಾಜ ಇಷ್ಟು ನಿರಾತಂಕವಾಗಿರುತ್ತಿತ್ತೇ? ಹೀಗಾಗಿಯೇ ಕಾಶ್ಮೀರಿ ವಿಶ್ವವಿದ್ಯಾಲಯದ ಅಧ್ಯಾಪಕ ಗುಲ್ ಮಹಮದ್ ವಾನಿ "ಈ ದೇಶದಲ್ಲಿ ಕಾಶ್ಮೀರದಲ್ಲಿ ಬಿಟ್ಟರೆ ಬೇರಿನ್ಯಾವ ಭಾಗದಲ್ಲೂ ಚಳವಳಿಗಾರರು ಸಾಯಬಹುದೆಂದು ಗೊತ್ತಿದ್ದರೂ ಗುಂಡಿಗೆ ಎದೆಯೊಡ್ಡಿ ಭದ್ರತಾ ಪಡೆಗಳತ್ತ ಮುನ್ನುಗ್ಗುವುದಿಲ್ಲ, ಕಾಶ್ಮೀರದಲ್ಲಿರುವುದು ರಾಜಕೀಯ ಸಮಸ್ಯೆ. ಅದಕ್ಕೆ ರಾಜಕೀಯ ಪರಿಹಾರವೇ ಬೇಕು. ದಿಲ್ಲಿ ದೊರೆಗಳು ಇದನ್ನು ಎಷ್ಟು ಬೇಗ ಅರ್ಥಮಾಡಿಕೊಳ್ಳುತ್ತಾರೋ ಅಷ್ಟು ಒಳ್ಳೆಯದು." ಎಂದು ಹೇಳುತ್ತಾರೆ.

ಜೂನ್ 10ರಂದು ತುಫೈಲ್ ಎಂಬ ಹದಿಹರೆಯದ ಯುವಕನನ್ನು ಸಿಆರ್‌ಪಿಎಫ್ ಹತ್ಯೆ ಮಾಡಿದ್ದರ ವಿರುದ್ಧ ಪ್ರಾರಂಭವಾದ ಕಾಶ್ಮೀರಿ ಜನತೆಯ ಒಕ್ಕೊರಲ ಪ್ರತಿರೋಧದ ಹಿಂದೆ ಕಾಶ್ಮೀರಿಗಳ ಮೇಲಾಗಿರುವ ದ್ರೋಹ ಮತ್ತು ದಮನಗಳ ಕರಾಳ ಇತಿಹಾಸವಿದೆ. ಅದನ್ನು ಅರ್ಥಮಾಡಿಕೊಳ್ಳದೆ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಪರಿಹಾರವನ್ನೂ ಹುಡುಕಲು ಸಾಧ್ಯವಿಲ್ಲ.

ಕಾಶ್ಮೀರ ಕಣಿವೆ ಪ್ರಧಾನವಾಗಿ ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶ. ಜಮ್ಮುವಿನ ಮುಖ್ಯ ಭಾಗಗಳಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಜಮ್ಮುವಿನ ದೋಡಾ ಪ್ರದೇಶದಲ್ಲಿ ಹಿಂದೂ-ಮುಸ್ಲಿಮರಿಬ್ಬರೂ ಸಮಪ್ರಮಾಣದಲ್ಲಿ ಸೌಹಾರ್ದಯುತವಾಗಿ ಜೀವಿಸಿಕೊಂಡು ಬಂದಿದ್ದಾರೆ. ಲಡಕ್‌ನಲ್ಲಿ ಬೌದ್ಧಧರ್ಮೀಯ ಗುಡ್ಡಗಾಡು ಜನ ವಾಸಿಸುತ್ತಾರೆ. ಆದರೆ ಬ್ರಿಟಿಷರ ಕಾಲದಲ್ಲಿ ಇವೆಲ್ಲಾ ಏಕಾಡಳಿತಕ್ಕೆ ಬಂದು ಬ್ರಿಟಿಷರು ಇಡೀ ಪ್ರಾಂತ್ಯವನ್ನು 19ನೇ ಶತಮಾನದ ಕೊನೆಯಲ್ಲಿ ರಾಜಾ ಹರಿಸಿಂಗ್ ಎಂಬ ಡೋಗ್ರಾ ರಾಜನ ವಶಕ್ಕೆ ಒಪ್ಪಿಸಿದರು. ಎಲ್ಲಾ ರಾಜರಂತೆ ಈ ರಾಜನೂ ಜನಪೀಡಕನಾಗಿದ್ದ. ಕಾಶ್ಮೀರಿ ರೈತರು ಪ್ರಧಾನವಾಗಿ ಮುಸ್ಲಿಮರೇ ಆಗಿದ್ದರು. ಆದರೆ ಹಿಂದೂ ಮುಸ್ಲಿಂ ಎಂಬ ಭೇದಭಾವವಿಲ್ಲದೆ ಶೇಕ್ ಅಬ್ದುಲ್ಲಾರ ನೇತೃತ್ವದಲ್ಲಿ ರೈತ ವಿಮೋಚನೆಗಾಗಿ ಹೋರಾಟ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಅವರ ಸಂಘಟನೆಗೆ ನ್ಯಾಷನಲ್ ಮುಸ್ಲಿಂ ಕಾನ್ಫರೆನ್ಸ್ ಎಂಬ ಹೆಸರಿಟ್ಟಿದ್ದರೂ ನಂತರ ಅದು ನ್ಯಾಷನಲ್ ಕಾನ್ಫರೆನ್ಸ್ ಎಂದಾಯಿತು.

1947ರಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವಾಗ ಭಾರತ-ಪಾಕಿಸ್ತಾನ ವಿಭಜನೆ ಮಾಡಿದ್ದಲ್ಲದೆ ತಮ್ಮ ಪರೋಕ್ಷ ಆಡಳಿತದಲ್ಲಿದ್ದ ರಾಜಸಂಸ್ಥಾನಗಳಿಗೆ ಅವರು ಇಷ್ಟಪಡುವ ದೇಶಗಳಿಗೆ ಸೇರುವ ಅವಕಾಶ ನೀಡಿದರು. 1948ರಲ್ಲಿ ರಾಜಾ ಹರಿಸಿಂಗನ ವಿರುದ್ಧ ಶೆಖ್ ಅಬ್ದುಲ್ಲಾ ನೇತೃತ್ವದಲ್ಲಿ ಮುಸ್ಲಿಂ ರೈತಾಪಿ ಮತ್ತು ಹಿಂದೂ ಮಧ್ಯಮ ವರ್ಗ ಎಲ್ಲರೂ ಸೇರಿದ ಬೃಹತ್ ಹೋರಾಟ ನಡೆಯುತ್ತಿತ್ತು, ಅದೇ ಸಮಯದಲ್ಲಿ ಪಾಕಿಸ್ತಾನದ ಚಿತಾವಣೆಯಿಂದ ಕಾಶ್ಮೀರದ ಮೇಲೆ ಉತ್ತರ ಭಾಗದ ಆದಿವಾಸಿಗಳ ದಾಳಿ ನಡೆಯಿತು. ಆಗ ಭಾರತದ ಸಹಾಯ ಕೇಳಿದ ಹರಿ ಸಿಂಗ್ ತಾತ್ಕಾಲಿಕವಾಗಿ ಭಾರತದೊಡನೆ ಶರತ್ತುಬದ್ಧವಾಗಿ ವಿಲೀನವಾಗಲು ಒಪ್ಪಿಕೊಂಡ. ಆದರೆ ಆ ಶರತ್ತಿನ ಪ್ರಕಾರ ಈ ದಾಳಿಯನ್ನು ಹಿಮ್ಮೆಟ್ಟಿಸಿದ ನಂತರ ಕಾಶ್ಮೀರಿ ಜನರ ಒಪ್ಪಿಗೆಯನ್ನು ಕೇಳಲು ಒಂದು "ಜನಾಭಿಪ್ರಾಯ ಸಂಗ್ರಹಣೆ" (ಪ್ಲೆಬಿಸೈಟ್) ಮಾಡುವ ಭರವಸೆಯನ್ನು ಪ್ರಧಾನಿ ನೆಹರೂ ರಾಜಾ ಹರಿ ಸಿಂಗನಿಗೂ, ಶೇಕ್ ಅಬ್ದುಲ್ಲಾರಿಗೂ, ವಿಶ್ವಸಂಸ್ಥೆಗೂ, ಭಾರತದ ಸದನಕ್ಕೂ ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಕಾಶ್ಮೀರಕ್ಕೆ ಸ್ವಾಯತ್ತತೆ ಕಲ್ಪಿಸುವ ಆರ್ಟಿಕಲ್ 370ನ್ನೂ 1949ರಲ್ಲಿ ಸಂವಿಧಾನಕ್ಕೆ ಸೇರಿಸಲಾಯಿತು. ಅಂದರೆ ರಕ್ಷಣೆ, ಸಂಪರ್ಕ ಮತ್ತು ಕರೆನ್ಸಿಯನ್ನು ಬಿಟ್ಟರೆ ಮಿಕ್ಕೆಲ್ಲಾ ವಿಷಯಗಳಲ್ಲಿ ಕಾಶ್ಮೀರ ಸ್ವಾಯತ್ತತೆ-ಸ್ವಯಂಆಡಳಿತ ಹೊಂದಿರುತ್ತದೆ ಎಂದರ್ಥ. ಅಂದರೆ ನ್ಯಾಯ, ಚುನಾವಣೆ, ಪ್ರತ್ಯೇಕ ಸುಪ್ರೀಂ ಕೋರ್ಟು, ಧ್ವಜ ಇನ್ನಿತ್ಯಾದಿಗಳನ್ನು ಪ್ರತ್ಯೇಕವಾಗಿ ಹೊಂದಿರಬಹುದಾದ ಅವಕಾಶ. ಆದರೆ ವಾಸ್ತವವೇನೆಂದರೆ ಈ ವಿಶೇಷ ಅಧಿಕಾರವಿರಲಿ ಕಳೆದ 60 ವರ್ಷಗಳಲ್ಲಿ ಕಾಶ್ಮೀರಕ್ಕೆ ಕರ್ನಾಟಕ ಹಾಗೂ ಇತರ ರಾಜ್ಯಗಳಿಗಿರುವಷ್ಟು ಅಧಿಕಾರವೂ ಸಿಕ್ಕಿಲ್ಲ, ಸಿಗದಂತ ಮಾಡಲಾಗಿದೆ. ಅದಕ್ಕೆಂದೇ 1953ರಲ್ಲಿ ಈ ಆರ್ಟಿಕಲ್ 370ರ ಪ್ರಾಮಾಣಿಕ ಅನುಷ್ಠಾನಕ್ಕೆ ಒತ್ತಾಯಿಸುತ್ತಿದ್ದ ಚುನಾಯಿತ ನಾಯಕ ಶೇಕ್ ಅಬ್ದುಲ್ಲಾರನ್ನು ನೆಹರೂ ಸರ್ಕಾರ ಮೋಸದಿಂದ ಸೆರೆಮನೆಗೆ ದೂಡಿ ಅಲ್ಲಿ ತನ್ನ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು.

ಇಲ್ಲಿಂದ ಶುರುವಾದ ಭಾರತ ಪ್ರಭುತ್ವದ ದ್ರೋಹದ ಕಥೆ ಈವರೆಗೂ ಮುಂದುವರೆಯುತ್ತಲೇ ಇದೆ. ಈ ಮಧ್ಯೆ ಒಮ್ಮೆ ತಾತ್ಕಾಲಿಕವಾಗಿ ಬಿಡುಗಡೆಯಾಗಿದ್ದ ಶೇಕ್ ಅಬ್ದುಲ್ಲಾರನ್ನು ಮತ್ತೆ 1965ರಲ್ಲಿ ಜೈಲಿಗೆ ತಳ್ಳಲಾಯಿತು. ಅಂತಿಮವಾಗಿ ಅವರು ದೆಹಲಿ ಹೇಳುವಂತೆ ಕೇಳುವವರೆಗೆ ಸೆರೆಮನೆಯೇ ಗತಿಯಾಯಿತು. 1953ರಿಂದ ಈವರೆಗೆ ನಡೆದಿರುವ ಎಲ್ಲಾ ಚುನಾವಣೆಗಳೂ ರಿಗ್ ಆಗಿದ್ದವೆಂದು ಕೇಲವ್ರೊಮ್ಮೆ ಸರ್ಕಾರ ಹಾಗೂ ಎಲ್ಲಾ ಸ್ವತಂತ್ರ ಅಧ್ಯಯನಗಳು ಸ್ಪಷ್ಟಪಡಿಸಿವೆ. 1984ರಲ್ಲಿ ಫರೂಕ್ ಅಬ್ದುಲ್ಲಾ ಸರ್ಕಾರವನ್ನು ರಾಜ್ಯಪಾಲ ಜಗ್‌ಮೋಹನ್ ವಜಾ ಮಾಡಿ ಕೇಂದ್ರಾಡಳಿತವನ್ನು ಸ್ಥಾಪಿಸಿದರು. ಹೀಗಾಗಿ ಸಾರಾಂಶದಲ್ಲಿ ಆರ್ಟಿಕಲ್ 370 ಕೊಡುವ ಸ್ವಾಯತ್ತತೆ ಇರಲಿ ಇತರೆ ರಾಜ್ಯಗಳಿಗಿದ್ದ ಕನಿಷ್ಠ ಪ್ರಾತಿನಿಧಿಕ ಆಡಳಿತವನ್ನೂ ಕಾಶ್ಮೀರಿಗಳು ಅನುಭವಿಸಲಿಲ್ಲ, 1987ರಲ್ಲಿ ನಡೆದ ಚುನಾವಣೆಯಲ್ಲಿ ಎಷ್ಟರ ಮಟ್ಟಿಗೆ ರಿಗ್ಗಿಂಗ್ ನಡೆಯಿತೆಂದರೆ ಆ ಚುನಾವಣೆಯಲ್ಲಿ ದೆಹಲಿ ಮಾಡಿದ ದ್ರೋಹ ಮತ್ತು ವಂಚನೆಯಿಂದ ಹತಾಶಗೊಂಡವರಿಂದಲೇ 1989ರ ನಂತರ ಮಿಲಿಟೆಂಟ್ ಹೋರಾಟ ಪ್ರಾರಂಭವಾಯಿತು. ಆದರೂ ಇದರಿಂದ ಏನೂ ಪಾಠ ಕಲಿಯದ ಕೇಂದ್ರದಲ್ಲಿದ್ದ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಚುನಾವಣೆಗಳನ್ನೇ ಕಾಶ್ಮೀರಿ ಜನ ಭಾರತದ ಆಳ್ವಿಕೆ ಒಪ್ಪಿಕೊಂಡಿರುವುದಕ್ಕೆ ಸಾಕ್ಷಿ ಎಂದು ನಂಬಿಸಲಾರಂಭಿಸಿದರು. ಹಾಗೂ ದೆಹಲಿಯ ದ್ರೋಹದ ವಿರುದ್ಧ ಧ್ವನಿ ಎತ್ತಿದವರನ್ನು ಕ್ರೂರವಾಗಿ ಸಾಯಿಸಲಾರಂಭಿಸಿದರು.

ಒಂದು ಅಂದಾಜಿನ ಪ್ರಕಾರ ಕಳೆದ 20 ವರ್ಷಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಕಾಶ್ಮೀರಿ ಯುವಜನತೆ ಹತರಾಗಿದ್ದಾರೆ. 50,000 ಕ್ಕೂ ಹೆಚ್ಚು ಜನ ಕಣ್ಮರೆಯಾಗಿದ್ದಾರೆ. ನೂರಾರು ಹಳ್ಳಿಗಳ ಮಹಿಳೆಯರು ಸಾಮೂಹಿಕ ಬಲಾತ್ಕಾರಕ್ಕೆ ಗುರಿಯಾಗಿದ್ದಾರೆ. ಲಕ್ಷಾಂತರ ಕಾಶ್ಮೀರಿ ಯುವಕರಿಗೆ ಭಾರತದ ಸೈನಿಕರು ಊಹಿಸಲಸಾಧ್ಯವಾದ ಚಿತ್ರಹಿಂಸೆ ಕೊಟ್ಟಿದ್ದಾರೆ.

ಈಗ ಬೀದಿಯಲ್ಲಿ ಕಾಳಗ ನಡೆಸುತ್ತಿರುವ ಕಾಶ್ಮೀರಿ ಯುವಜನಾಂಗ 1989ರ ನಂತರದ ಮಿಲಿಟೆಂಟ್ ಹೋರಾಟದ ಅವಧಿಯಲ್ಲಿ ಬೆಳೆದವರು. ಪಟಾಕಿ ಸದ್ದಿನ ಬದಲಿಗೆ ಗುಂಡುಗಳ ಸದ್ದನ್ನು ಕೇಳಿಕೊಂಡು ಬೆಳೆದವರು, ಜಾತ್ರೆ-ಹಬ್ಬಗಳ ಬದಲಿಗೆ ಸಾಮೂಹಿಕ ಪ್ರತಿಭಟನೆ, ಶವ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾ ಬೆಳೆದವರು. ಕರ್ಫ್ಯೂಗಳ ಕಾರಣಕ್ಕೆ ಸಹಜ ಬದುಕನ್ನೂ ಕನಸುಗಳನ್ನೂ ಕಳೆದುಕೊಂಡವರು. ಹೀಗಾಗಿ ಈ ಯುವಜನಾಂಗದ ಮಟ್ಟಿಗೆ ಭಾರತವೆಂದರೆ ಕೇವಲ ದಮನ, ದ್ರೋಹಗಳ ಒಟ್ಟು ಮೊತ್ತವಾಗಿ ಕಾಣುತ್ತದೆ. ಅವರ ಮನಸ್ಸಿನಲ್ಲಿ ಕಳೆದ ಆರು ದಶಕಗಳಿಂದ ಭಾರತ ಪ್ರಭುತ್ವ ಒಂದೇ ಸಮನೆ ಮಾಡುತ್ತಿರುವ ಗಾಯಗಳಿಂದ ಕೀವು ಸೋರುಗಟ್ಟುತ್ತಿದೆ.

ಇದು ಅತ್ಯಂತ ಸಂಕ್ಷಿಪ್ತವಾಗಿ ಭಾರತ ಕಾಶ್ಮೀರಕ್ಕೆ ಬಗೆದಿರುವ ದ್ರೋಹದ ಕಥೆ. ಇದರಲ್ಲಿ ಬಿಟ್ಟುಹೋಗಿರುವ ಹಲವು ಸಂಗತಿಗಳಿವೆ. ಉದಾಹರಣೆಗೆ ಕಾಶ್ಮೀರಿ ಉಗ್ರಗಾಮಿಗಳು ಅಮಾಯಕ ಕಾಶ್ಮೀರಿಗಳನ್ನು ಕೊಂದಿರುವ ಕಥೆಯಿದೆ. ಅಂಥ ದ್ರೋಹಿ ಉಗ್ರಗಾಮಿಗಳನ್ನು ಭಾರತದ ಸೈನ್ಯವೇ ಬಳಸಿಕೊಂಡಿರುವ ಕಥೆಯಿದೆ. ಈ ಪ್ರಕ್ರಿಯೆಯಲ್ಲಿ ವಿದೇಶೀ ಮುಸ್ಲಿಂ ಉಗ್ರಗಾಮಿಗಳು ಕಾಶ್ಮೀರಕ್ಕೆ ಬಂದು ಕಾಶ್ಮೀರದ ಆಜಾದಿ ಹೋರಾಟವನ್ನು ಒಂದು ಇಸ್ಲಾಮಿಕ್ ಹೋರಾಟವನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ ವಿಫಲವಾದ ಕಥೆಯಿದೆ. ಪಕ್ಕದ ಪಾಕಿಸ್ತಾನ ಕಾಶ್ಮೀರದಲ್ಲಿರುವ ಪ್ರಕ್ಷುಬ್ಧತೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಮಾಡುತ್ತಲೇ ಇರುವ ಪ್ರಯತ್ನಗಳ ಕಥೆ ಇದೆ. ಎಲ್ಲವೂ ಇದೆ. ಆದರೆ ಇವೆಲ್ಲವೂ ಉಪಕಥೆಗಳಷ್ಟೆ. ಅವು ಪ್ರಧಾನ ಕಥೆಯಾದ ಭಾರತದ ದ್ರೋಹದಿಂದ ಉಂಟಾದ ವಿಕೃತ ಪರಿಣಾಮದ ಕಥೆಗಳು. ಆದರೆ ಕಾಶ್ಮಿರಿಗಳು ಭಾರತದ ಬಗ್ಗೆ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವಂತಾಗಿರುವುದೇ ಈ ಮಹಾ ಕಥನದ ತಾತ್ಪರ್ಯ. ಅದಕ್ಕೆ ಪ್ರಧಾನ ಕಾರಣ ಭಾರತದ ಪ್ರಭುತ್ವ.

ಹೀಗೆ ಒಂದು ಜನಾಂಗವೇ ಸಂಪೂರ್ಣವಾಗಿ ಪರಾಯೀಕರಣವಾದ ನಂತರ ಬಲವಂತದಿಂದ ಅದನ್ನು ಭಾರತ ಒಕ್ಕೂಟದಲ್ಲಿ ಹಿಡಿದಿಟ್ಟುಕೊಳ್ಳಲು ಸಾಧ್ಯವೇ? ಮನುಷ್ಯರಿಗೆ ಪರಮಾಪ್ತವಾದ ಪ್ರಾಣವನ್ನೇ ಬಲಿಗೊಡಲು ಜನರು ಸಿದ್ಧವಿರುವಾಗ ಎಷ್ಟು ದೊಡ್ಡ ಸೈನ್ಯ ತಾನೇ ಅಂಥ ಹೋರಾಟವನ್ನು ಹತ್ತಿಕ್ಕಲು ಸಾಧ್ಯ? ಒಂದು ಕೈಯ್ಯಲ್ಲಿ ಮಗುವನ್ನು ಇಟ್ಟುಕೊಂಡು ಮತ್ತೊಂದು ಕೈಯಲ್ಲಿ ಕಲ್ಲು ಎತ್ತಿಕೊಂಡು ತಾಯಂದಿರು ಬೀದಿಗೆ ಇಳಿಯುತ್ತಿದ್ದಾರೆಂದರೆ ಕಾಶ್ಮೀರಿಗಳಿಂದ ಇನ್ನೆಷ್ಟು ಸಹನೆಯನ್ನು ನಿರೀಕ್ಷಿಸಲು ಸಾಧ್ಯ?

ಇನ್ನಾದರೂ ಭಾರತ ಪ್ರಭುತ್ವ ಮತ್ತು ಭಾರತದ ನಾಗರಿಕ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ.

1. ಮೊಟ್ಟಮೊದಲಿಗೆ ಪ್ರತಿ ಹತ್ತು ಕಾಶ್ಮೀರಿಗಳಿಗೊಬ್ಬರಂತೆ ಇರುವ ಭಾರತದ ಸೈನಿಕರನ್ನು (5 ಲಕ್ಷ ಸೈನಿಕರು ಕೇವಲ ಶ್ರೀನಗರ ಮತ್ತು ಆಸುಪಾಸಿನಲ್ಲಿದ್ದಾರೆ) ಹಿಂತೆಗೆದುಕೊಂಡು ಸಾಮಾನ್ಯ ವಾತಾವರಣವನ್ನು ನಿರ್ಮಿಸಬೇಕಿದೆ.
2. ಸೈನಿಕರಿಗೆ ಯಾರನ್ನು ಬೇಕಾದರೂ ಕೊಂದು ಹಾಕುವ ಅಧಿಕಾರ ಕೊಡುವ AFSPA ಕಾಯಿದೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕಿದೆ. ಈವರೆಗೆ ಅಮಾಯಕ ಕಾಶ್ಮೀರಿಗಳನ್ನು ಕೊಂದುಹಾಕಿದ ಸೈನಿಕರಿಗೆ ಮತ್ತು ಪೊಲೀಸರಿಗೆ ಸೂಕ್ತ ಶಿಕ್ಷೆ ಕೊಡುವ ಕ್ರಮಗಳು ಪ್ರಾರಂಭವಾಗಬೇಕಿದೆ.
3. ನಂತರದಲ್ಲಿ ಕಾಶ್ಮೀರಿ ಜನ ಎಲ್ಲಿರಬೇಕೆಂಬ ಮತ್ತು ಹೇಗಿರಬೇಕೆಂಬ ತೀರ್ಮಾನವನ್ನು ಅವರೇ ಮುಕ್ತವಾಗಿ ಮಾಡಿಕೊಳ್ಳುವ ಹಕ್ಕನ್ನು ಅವರಿಗೆ ಕೊಡಬೇಕಿದೆ. ಯಾವುದೇ ಒಕ್ಕೂಟದಲ್ಲಿ ಘಟಕಗಳು ಸ್ವತಂತ್ರವಾಗಿ ಸ್ವಇಚ್ಛೆಯಿಂದ ವಿಲೀನಗೊಂಡರೆ ಮಾತ್ರ ಒಕ್ಕೂಟವಾಗಿ ಉಳಿಯುತ್ತವೆಯೇ ವಿನಃ ಬಲವಂತ ಮತ್ತು ದಮನ ಮಾಡಿದರೆ ಒಕ್ಕೂಟವಿರಲಿ ಒಂದು ಕುಟುಂಬವೇ ಒಟ್ಟಿಗೆ ಇರಲು ಸಾಧ್ಯವಿಲ್ಲ. ಈ ಸರಳ ಸತ್ಯ ಅರ್ಥವಾಗದೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡುವ ಯೋಜನೆ ರೂಪಿಸುವುದರಿಂದಲೋ ನಾರಾಯಣಮೂರ್ತಿ ಸಮಿತಿ ಮಾಡುವುದರಿಂದಲೋ ಕಾಶ್ಮೀರದ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ.

ಏಕೆಂದರೆ ಅದು ಆರ್ಥಿಕ ಸಮಸ್ಯೆ ಅಲ್ಲ, ಒಂದು ರಾಜಕೀಯ ಸಮಸ್ಯೆ. ಅದಕ್ಕೆ ರಾಜಕೀಯ ಪರಿಹಾರ ಬೇಕು. ಪ್ರಾಮಾಣಿಕವಾದ ರಾಜಕೀಯ ಪರಿಹಾರ ಬೇಕು. ಭಾರತದ ನಾಗರಿಕ ಎಂದು ಹೇಳಿಕೊಳ್ಳುವ ಪ್ರತಿಯೊಬ್ಬರಿಗೂ ತಮ್ಮ ಸರ್ಕಾರ ಪ್ರಾಮಾಣಿಕವಾಗಿ ಮತ್ತು ಪ್ರಜಾತಾಂತ್ರಿಕವಾಗಿ ನಡೆದುಕೊಳ್ಳುವಂತೆ ಒತ್ತಾಯ ತರುವ ಜವಾಬ್ದಾರಿ ಇದೆ. ಇಲ್ಲದಿದ್ದರೆ ನಾವು ಹಾಕುವ ಓಟು ನಮ್ಮ ಬೆರಳಿಗೆ ಕಪ್ಪು ಶಾಯಿಯನ್ನೂ ಮಾತ್ರವಲ್ಲ, ರಕ್ತವನ್ನೂ ಮೆತ್ತುತ್ತದೆ!

ನೋ ಕಾಮೆಂಟ್ಸ್

"ಫ್ರಾನ್ಸ್‌ನಲ್ಲಿ ಮುಸ್ಲಿಂ ಮಹಿಳೆಯರು ವಿಚಿತ್ರ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಒಂದು ವೇಳೆ ಅವರು ಬುರ್ಖಾ ಹಾಕಲಿಲ್ಲ ಎಂದರೆ ಮನೆಯಲ್ಲಿ ನಿರ್ಬಂಧ ಎದುರಿಸಬೇಕು. ಹಾಕಿದರೆ ಪ್ರಭುತ್ವದಿಂದ ನಿರ್ಬಂಧ ಎದುರಿಸಬೇಕು. ಒಟ್ಟಿನಲ್ಲಿ ಒಂದು ಜೈಲಿನಿಂದ ಮತ್ತೊಂದು ಜೈಲೇ ಆ ಮಹಿಳೆಯರ ಗತಿಯಾಗುತ್ತಿದೆ."

- ಪ್ರೊ. ಅಸ್ಗರ್ ಅಲಿ ಇಂಜನಿಯರ್

"ರಾಜ್ಯ ಬಿಜೆಪಿಯಲ್ಲಿ ಮತ್ತೆ ಬಿರುಕು ಮೂಡಿದೆ. ಸಚಿವರಾದ ಜನಾರ್ದನ ರೆಡ್ಡಿ ಮತ್ತು ರೇಣುಕಾಚಾರ್ಯರ ನಡುವೆ ಜಂಗೀ ಕುಸ್ತಿ ನಡೀತಿದೆ. ಇದಕ್ಕೆ ಈಶ್ವರಪ್ಪನವರೇ ರೆಫರಿ. ಈ ಕುಸ್ತಿಯಲ್ಲಿ ರೆಡ್ಡಿ ಗೆದ್ದರೆ ಕೂಡಲೇ ಸರ್ಕಾರ ಬೀಳಲಿದೆ."

- ಜನಾರ್ದನ ಪೂಜಾರಿ

"ರಾಜ್ಯಪಾಲರು ತಮ್ಮ ವ್ಯಾಪ್ತಿಯಲ್ಲಿ ಒಳ್ಳೆ ಕೆಲಸವನ್ನೇ ಮಾಡಿದ್ದಾರೆ. ಅದನ್ನು ಪ್ರಶ್ನಿಸುವ ಹಕ್ಕು ಸಚಿವತ್ರಯರಿಗಿಲ್ಲ. ಕೆಲವು ಆಟಗಾರರು ಔಟಾದರೆ ತಾವಾಗಿಯೇ ಹೊರಹೋಗುತ್ತಾರೆ. ಕೆಲವು ಆಟಗಾರರನ್ನು ಅಂಪೈರೇ ಕಳಿಸಬೇಕಾಗುತ್ತದೆ."

- ಪ್ರೊ. ರವಿವರ್ಮ ಕುಮಾರ್

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾವೂ ಏನನ್ನೂ ಬಚ್ಚಿಡುತ್ತಿಲ್ಲ, ನಾವು ಪ್ರತಿಯೊಂದು ಪೈಸೆಗೂ ಲೆಕ್ಕ ಇಟ್ಟಿದ್ದೇವೆ."

- ಕಲ್ಮಾಡಿ, ಕಾಮನ್‌ವೆಲ್ತ್ ಕೂಟದ ತಯಾರಿಗಳ ಮುಖ್ಯಸ್ಥ

ಹಿಂದೂತ್ವವೇ ಒಂದು ಟೆರರಿಸಂ ಆಗಿರುವಾಗ!

"ಹಿಂದೂತ್ವ ಟೆರರಿಸಂ ಎಂಬುದಿಲ್ಲ, ಬೇಕಿದ್ದರೆ ಅದನ್ನು ಕೌಂಟರ್ ಇಸ್ಲಾಮಿಕ್ ಟೆರರಿಸಂ ಎಂದು ಕರೆಯಬಹುದು."

- ರಾಮ ಮಾಧವ್, ಆರೆಸ್ಸೆಸ್ ಮುಖ್ಯಸ್ಥ

ಪ್ರಜೆಗಳು ಪ್ರಭುಗಳಾಗುವುದನ್ನು ಬಂಡವಾಳ ಶಾಹಿಗಳು ಯಾವತ್ತೂ ಒಪ್ಪುವುದಿಲ್ಲ!

"ಗಣಿಗಾರಿಕೆಗೆ ವಶಪಡಿಸಿಕೊಳ್ಳುವ ಜಮೀನಿನ ಮಾಲೀಕರಿಗೆ ಕಂಪನಿಯಲ್ಲಿ ಪಾಲು ನೀಡುವ ಬದಲು ಸೂಕ್ತ ಪರಿಹಾರ ನೀಡುವುದೇ ಉತ್ತಮ. ಪರಿಹಾರದ ಬದಲಿಗೆ ಕಂಪನಿಯಲ್ಲಿ ಶೇ.26ರಷ್ಟು ಪಾಲು ನೀಡುವ ಪ್ರಸ್ತಾಪವನ್ನು ಮಿಟ್ಟಲ್‌ನಂಥ ಉದ್ಯಮಿಗಳೂ ಮತ್ತು FICCI ನಂಥ ಉದ್ಯಮಿಗಳ ಕೂಟವೂ ತಿರಸ್ಕರಿಸಿದೆ."

- ವರದಿ

.ರಂ. ಕುರಿತು ಕೆಲವು ನೆನಪುಗಳು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

.ವಂ. ನಾಗರಾಜ್ ಅವರು ನನಗೆ ಗುರುವಾಗಿರಲಿಲ್ಲ. ಂದೂ ನನ್ನೊಂದಿಗೆ ಸಾಹಿತ್ಯ ಕುರಿತು ಚರ್ಚಿಸಿರಲಿಲ್ಲ. ದರೆ ಅವರೊಂದಿಗಿನ ನನ್ನ 'ಒಡನಾಟ'ವೆಲ್ಲ ಹೆಚ್ಚಾಗಿ ದ್ದು ನಾನು 10-12 ವರ್ಷದ ಬಾಲಕಿ ಆಗಿದ್ದಾಗ. ಪ್ಪನ ಹಲವಾರು ಶಿಷ್ಯರಲ್ಲಿ ಪ್ರಮುಖರಾಗಿದ್ದ ಕಿ.ರಂ. ಆಗ ಗೋವಿಂದಪ್ಪ ರಸ್ತೆಯಲ್ಲಿದ್ದ ನಮ್ಮ ಮನೆಗೆ ಬಾರಿ ಬರುತ್ತಿದ್ದರು. ಅದೆಷ್ಟೋ ರಾತ್ರಿಗಳನ್ನು ಮನೆಯಲ್ಲೇ ಕಳೆಯುತ್ತಿದ್ದರು. ಮಕ್ಕಳಾದ ನಮ್ಮ ರಲ್ಲಿ ಅವರು ಹೆಚ್ಚಾಗಿ ಹಚ್ಚಿಕೊಂಡಿದ್ದು ನನ್ನ ತಮ್ಮ ನನ್ನು.

ೊದಲನೆ ಮಹಡಿಯಲ್ಲಿದ್ದ ನಮ್ಮ ಮನೆಯ ಹಿಂದೆ ತಾರಸಿ ಇತ್ತು. ಆ ತಾರಸಿಯ ಮೇಲೆಯೇ ನಮ್ಮ ದ ಅದೆಷ್ಟೋ ಬೆಳದಿಂಗಳ ರಾತ್ರಿಗಳಲ್ಲಿ ಅಕ್ಕಿ —ಎಣ್ಣೆಗಾಯಿ ಪಲ್ಯ ಇರುತ್ತಿದ್ದ ವಿಶೇಷ ಊಟದ ದುದಲ್ಲಿ ತೊಡಗುತ್ತಿದ್ದದ್ದು. ಅಂತಹ ವಿಶೇಷ ಊಟದ ಕ್ಕೆ ಕಿ.ರಂ. ಕಾಯಂ ಆಹ್ವಾನಿತರಾಗಿರುತ್ತಿದ್ದರು. ನಾವು ಲ್ಲಾ ಒಂದು ಕಡೆ ಅಮ್ಮನ ಸುತ್ತ ಗಿರಕಿ ಹೊಡೆಯುತ್ತಿದ್ದರೆ ಯು ಇನ್ನೊಂದು ಕಡೆ ಅಪ್ಪ, ಕಿ.ರಂ. ಮತ್ತು ರು ಸಿಗರೇಟು ಸೇದುತ್ತಾ, ಹರಟೆ ಹೊಡೆಯುತ್ತಾ ಕಳೆಯುತ್ತಿದ್ದರು.

ಗಿನ ದಿನಗಳಲ್ಲಿ ಕಿ.ರಂ. ಅವರು ತಮ್ಮ ಫ್ರೆಂಡ್ ವಿಜಯಲಕ್ಷ್ಮಿಯವರೊಂದಿಗೆ ನಮ್ಮ ಬರುತ್ತಿದ್ದದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ದ್ದ ಬೆಕ್ಕಿನ ಕಣ್ಣಿನ ವಿಜಯಲಕ್ಷ್ಮಿ ಅವರು ಕ್ಕಳಾದ ನಮಗೆ ಅಪ್ರತಿಮ ಸುಂದರಿಯಂತೆ ತ್ತಿದ್ದರು. ಕಿ.ರಂ. ಜೊತೆಗಿನ ಸ್ನೇಹ ವಿಜಯಲಕ್ಷ್ಮಿ ಕುಟುಂಬದವರಿಗೆ ಆಗ ಇಷ್ಟವಿರಲಿಲ್ಲವಾದ್ದರಿಂದ ಬ್ಬರು ನಮ್ಮ ಮನೆಯಲ್ಲಿ ಭೇಟಿ ಆಗುತ್ತಿದ್ದರು. ಅಲ್ಲ, ಅಲ್ಲಿಂದ ಕಿ.ರಂ. ಜೊತೆ ಸಿನಿಮಾಗೆಂದೂ, ನಲ್ಲಿ ಸುತ್ತಾಡಲೆಂದೂ ಹೊರಡುವ ಮುನ್ನ ಲಕ್ಷ್ಮಿ ಅವರು ಮನೆಯಿಂದ ಮರೆಮಾಚಿ ತ್ತಿದ್ದ ಚೆನ್ನಾಗಿದ್ದ ಸೀರೆಯನ್ನು ನಮ್ಮ ಮನೆಯಲ್ಲೇ , ಶೃಂಗಾರ ಮಾಡಿಕೊಂಡು ಹೊರಡು ತ್ತಿದ್ದರು. ಕೊನೆಗೂ ವಿಜಯಲಕ್ಷ್ಮಿ ಅವರ ಬದವರಿಗೆ ಗೊತ್ತಾಗಿ ದೊಡ್ಡ ರಾದ್ಧಾಂತವಾಗುವ ನನ್ನ ಅಪ್ಪ ಮತ್ತು ಅಮ್ಮನೇ ನಿಂತು ಕಿ.ರಂ. ವಿಜಯಲಕ್ಷ್ಮಿ ಅವರಿಬ್ಬರ ಮದುವೆ ಸಿದ್ದರು.

ದುವೆಯಾದ ನಂತರ ಕಿ.ರಂ. ನಮ್ಮ ಮನೆಗೆ ವುದು ಸಹಜವಾಗಿಯೇ ಕಡಿಮೆ ಆಯಿತು. ರ ನಾನು ಅವರನ್ನು ಹಲವು ಬಾರಿ ಅಲ್ಲಲ್ಲಿ ಆಗಿದ್ದೆ.

ರಂ. ಅವರೊಂದಿಗೆ ಮತ್ತೆ ನನ್ನ ಸಂಪರ್ಕ ಟ್ಟಿದ್ದು ಅಪ್ಪ ಹೋದ ನಂತರ. 2000ದಲ್ಲಿ ಪರ ಯಾವುದೋ ಪ್ರತಿಭಟನೆಯಲ್ಲಿ ಅವರನ್ನು ಭೇಟಿ ಆದಾಗ "ಲಂಕೇಶರಿಗೆ ಒಂದು ಲೇಖನ ಕೊಡುವುದಾಗಿ ಹೇಳಿದ್ದೆ. ಸದ್ಯದಲ್ಲೇ ಅದನ್ನು ಕೊಡುತ್ತೇನೆ" ಎಂದರು.

ಲೇಖನಕ್ಕಾಗಿ ನಾನು ಅವರಿಗೆ ಹಲವಾರು ಬಾರಿ ಮಾಡಿ ಕೇಳಿದೆ; ಮುಖಾಮುಖಿ ಸಿಕ್ಕಾಗಲೆಲ್ಲ ುತ್ತಿದ್ದೆ. ಕೊನೆಗೆ ಆ ಲೇಖನ ಬೇಡ, ಬೇರೆ ಯಾವು ೂ ಲೇಖನ ಬರೆದು ಕೊಡಿ ಎಂದೂ ಲೆಕ್ಕವಿಲ್ಲದಷ್ಟು ಕೇಳಿದೆ. ಕೊನೆಯವರೆಗೂ ಅವರು ಯಾವ ನವನ್ನೂ ಕೊಡಲೇ ಇಲ್ಲ.

ದರೆ ಕಿ.ರಂ. ಅವರಿಂದ ಅಪ್ಪನ ಬಗ್ಗೆ ಬರೆಸಲೇಬೇಕು ಹಠ ನನ್ನಲ್ಲಿತ್ತು. ಅವರಿಗೆ ನೀಲು ಎಂಬ ಾಮದಡಿ ಅಪ್ಪ ಬರೆಯುತ್ತಿದ್ದ ಕವನಗಳು ತುಂಬಾ ಂಬುದು ನನಗೆ ಗೊತ್ತಿತ್ತು, ಆದ್ದರಿಂದಲೇ ನೀಲು ಕಾವ್ಯದ ಮೊದಲನೆ ಸಂಗ್ರಹವನ್ನು 2007ರಲ್ಲಿ ಪ್ರಕಟಿಸಲು ನಾನು ತಯಾರಿ ನಡೆಸುತ್ತಿದ್ದಾಗ ಅದಕ್ಕೆ ಕಿ.ರಂ. ಅವರೇ ಮುನ್ನುಡಿ ಬರೆಯಬೇಕೆಂದು ನಿರ್ಧರಿಸಿದೆ. ಆದರೆ ಕಿ.ರಂ. ಎಂದೂ ಹೇಳಿದ್ದ ಸಮಯದೊಳಗೆ ಬರೆದು ಕೊಡುವುದಿಲ್ಲ ಎಂದು ಆಗಲೇ ಬಹಳಷ್ಟು ಜನ ನನಗೆ ಹೇಳಿದ್ದರಿಂದ ನನ್ನೊಳಗೆ ಅಳುಕು ಇದ್ದೇ ಇತ್ತು. ಆದರೂ ಆ ಪುಸ್ತಕ ಅಪ್ಪನ ಹುಟ್ಟುಹಬ್ಬದಂದೇ ಬಿಡುಗಡೆ ಆಗಬೇಕೆಂದೂ, ಅದಕ್ಕೆ ಅವರು ಆದಷ್ಟು ಬೇಗ ಮುನ್ನುಡಿ ಬರೆದು ಕೊಡಬೇಕೆಂದೂ ಅವರನ್ನು ಕೇಳಿದೆ. ಅವರು ಕೂಡಲೇ ಒಪ್ಪಿದರಲ್ಲದೆ ಮುನ್ನುಡಿಯನ್ನು ಬೇಗನೆ ಬರೆದುಕೊಟ್ಟರು. ಅಷ್ಟು ಮಾತ್ರವಲ್ಲ, ಮುನ್ನುಡಿ ಕಂಪೋಸ್ ಆದ ನಂತರ ಅವರೇ ನಮ್ಮ ಆಫೀಸಿಗೆ ಬಂದು ಅದರ ಪ್ರೂಫ್ ಕೂಡ ಅವರೇ ನೋಡಿಹೋಗಿದ್ದರು. ಆದರೂ ಅವರಿಗೆ ಸಮಾಧಾನ ವಾಗಿರಲಿಲ್ಲ, ಇನ್ನೇನು ಪುಸ್ತಕ ಪ್ರಿಂಟಿಗೆ ಹೋಗಬೇಕು, ಆಗ ತಮ್ಮ ಶಿಷ್ಯ ರಂಗನಾಥ್ ಜೊತೆ ನಮ್ಮ ಆಫೀಸಿಗೆ ಬಂದು ಕಿ.ರಂ. ಮತ್ತೊಮ್ಮೆ ಮುನ್ನುಡಿಯನ್ನು ಓದಿ, "ರಂಗನಾಥ್, ಇಲ್ಲಿ ಈ ಪದಕ್ಕಿಂತ ಇನ್ನೊಂದು ಪದವಿದ್ದರೆ



ಸೂಕ್ತ ಅಲ್ಲವೇ'' ಎಂದೆಲ್ಲ ಚರ್ಚಿಸಿ ಹಲವು ಬದಲಾವಣೆಗಳನ್ನು ಮಾಡಿದ ನಂತರವೇ ಅವರಿಗೆ ಸಮಾಧಾನ ಆಗಿದ್ದು.

ಕಿ.ರಂ. ಅವರನ್ನು ನಮ್ಮ ಸಂಸ್ಥೆಯ ಹಲವು ಕಾರ್ಯಕ್ರಮಗಳಿಗೆ ಆಹ್ವಾನಿಸಿದ್ದಾಗ ಸಹಜವಾಗಿಯೇ "ನಿಮ್ಮನ್ನು ಕರೆದುಕೊಂಡು ಬರಲು ವಾಹನವನ್ನೋ ಅಥವಾ ಯಾರನ್ನಾದರೋ ಕಳುಹಿಸಲೇ?" ಎಂದು ಕೇಳಿದರೆ ಅವರಿಗೆ ಕೋಪವೇ ಬರುತ್ತಿತ್ತು. "ಅದೆಲ್ಲ ಬೇಡ. ನಾನು ಕಾರ್ಯಕ್ರಮ ಶುರುವಾಗುವ ಹೊತ್ತಿಗೆ ಅಲ್ಲಿಗೆ ಬರುತ್ತೇನೆ'' ಎಂದು ಹೇಳುತ್ತಿದ್ದರು. ಹಾಗೆಯೇ ಸರಿಯಾದ ಸಮಯಕ್ಕೆ ಹಾಜರಾಗಿ ಅದ್ಭುತವಾಗಿ ಮಾತನಾಡುತ್ತಿದ್ದರು. ಕಳೆದ ವರ್ಷ ನಮ್ಮ ಪಾರ್ವತೀಶ ಬರೆದಿರುವ `some ಪದ' ಪುಸ್ತಕವನ್ನು ಬಿಡುಗಡೆ ಮಾಡಬೇಕೆಂದು ಕಿ.ರಂ. ಅವರನ್ನು ಕೇಳಿದ್ದರು. ಆ ಕಾರ್ಯಕ್ರಮಕ್ಕೂ ಕಿ.ರಂ. ಎಂದಿನಂತೆ ತಮ್ಮ ಪಾಡಿಗೆ, ಸರಿಯಾದ ಸಮಯಕ್ಕೆ ಪ್ಯಾಂಟ್ ಮತ್ತು ಉದ್ದನೆ ಜುಬ್ಬ ತೊಟ್ಟು, ಹೆಗಲ ಮೇಲೆ ಕಾಟನ್ ಬ್ಯಾಗ್ ನೇತು ಹಾಕಿಕೊಂಡು ಬಂದಿದ್ದರು. ಅಂದು ಕಿ.ರಂ. ಅವರು ಒಂದು ಭಾಷೆಯ ಪದ ಹೇಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಗಡಿ, ಸಂಸ್ಕೃತಿ, ವರ್ಗ ತರಹದ ಮಿತಿಗಳನ್ನು ಮೀರಿ ಸಂಚರಿಸುತ್ತದೆ ಎಂಬುದರ ಬಗ್ಗೆ ಅದ್ಭುತವಾಗಿ ಮಾತನಾಡಿದ್ದರು. ಎಂದಿನಂತೆ ಅವರ ಆ ಭಾಷಣದಲ್ಲೂ ಹಾಸ್ಯದ ಲೇಪನದೊಂದಿಗೆ ಸೂಕ್ಷ್ಮವಾದ ಒಳನೋಟಗಳೂ ಇದ್ದವು. ಅವತ್ತಿನ ಸಭೆಗೆ ಹಾಜರಾಗಿದ್ದವರಲ್ಲಿ ಹೆಚ್ಚಿನ ಜನ ಸಾಹಿತ್ಯದ ವಿದ್ಯಾರ್ಥಿಗಳಾಗಿರದಿದ್ದರೂ ಅವರೆಲ್ಲರಿಗೆ ಮೆಚ್ಚುಗೆ ಆಗುವಂತೆ, ಇಷ್ಟವಾಗುವಂತೆ, ಅರ್ಥವಾಗುವಂತೆ ಇತ್ತು ಕಿ.ರಂ. ಭಾಷಣ.

ಅಪ್ಪ ಇದ್ದಿದ್ದರೆ ಕಳೆದ ಮಾರ್ಚ್ 8ಕ್ಕೆ ಅವರಿಗೆ 75 ವರ್ಷ ತುಂಬುತ್ತಿತ್ತು. ಆಗ 'ಲಂಕೇಶ್-75' ಎಂಬ ಎರಡು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳೋಣ ಎಂದು ನಮ್ಮ ತಂಡ ನಿರ್ಧರಿಸಿದಾಗ, ನಮ್ಮ ಕೋರಿಕೆಯ ಮೇರೆಗೆ ಆ ಕಾರ್ಯಕ್ರಮದ ರೂಪುರೇಷೆಗಳು ಹೇಗಿರಬೇಕೆಂದು ನಿರ್ಧರಿಸಿದವರು ಕಿ.ರಂ. ಅವರೇ. ಅವರು ಮತ್ತು ನಾವು ಹಲವಾರು ಬಾರಿ ಫೋನ್‌ನಲ್ಲಿ ಚರ್ಚಿಸಿ, ನಮ್ಮ ಆಫೀಸು ಮತ್ತು ಅವರ ಮನೆಯಲ್ಲಿ ಭೇಟಿ ಆಗಿ ಮಾತನಾಡಿದೆವಲ್ಲದೆ, ಪ್ರತಿ ಗೋಷ್ಠಿಯ ವಿಷಯ ಏನಾಗಿರಬೇಕೆಂದೂ, ಅದರಲ್ಲಿ ಯಾರು ಭಾಗವಹಿಸಿದರೆ ಚೆಂದ ಎಂದೂ ಕಿ.ರಂ. ಸೂಚಿಸಿದ್ದರು.

ಅಪ್ಪ ಬಹಳ ಇಷ್ಟಪಡುತ್ತಿದ್ದ ವ್ಯಕ್ತಿ ಕಿ.ರಂ. ಆಗಿದ್ದರಿಂದ; ಮತ್ತು ಎಂದೂ ಜಗಳವಾಡದೇ ಇದ್ದ ಪ್ರಾಯಶಃ ಏಕೈಕ ವ್ಯಕ್ತಿಯೂ ಕಿ.ರಂ. ಆಗಿದ್ದರಿಂದ ಅವರೇ 'ಲಂಕೇಶ್ -75' ಕಾರ್ಯಕ್ರಮದ ಉದ್ಘಾಟನಾ ಗೋಷ್ಠಿಯಲ್ಲಿ ಸುಮಾರು ನಲವತ್ತು ನಿಮಿಷಗಳ ವಿಶೇಷ ಉಪನ್ಯಾಸ ನೀಡುವುದೆಂದು ನಮ್ಮ ತಂಡ ನಿರ್ಧರಿಸಿತ್ತು. ಆದರೆ ಕೊನೆ ಗಳಿಗೆಯಲ್ಲಿ ನಮ್ಮೊಂದಿಗೆ ಆ ಕಾರ್ಯಕ್ರಮದ ಯೋಜನೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಕೂಡ ಕೈಜೋಡಿಸಿದ್ದರಿಂದ "ನಮ್ಮ ನಿಯಮದ ಪ್ರಕಾರ ಎಲ್ಲರೂ ತಲಾ ಇಪ್ಪತ್ತು ನಿಮಿಷ ಮಾತನಾಡಬೇಕು. ವಿಶೇಷ ಉಪನ್ಯಾಸ ಎಂಬುದೆಲ್ಲ ನಮ್ಮಲ್ಲಿ ಇಲ್ಲ" ಎಂದಿತು ಅಕಾಡೆಮಿ.

ಹಾಗೇ ಆಗಲಿ ಎಂದು ನಾವು ಒಪ್ಪಿಕೊಂಡಿದ್ದರೂ ಆ ಕಾರ್ಯಕ್ರಮದ ದಿನ ಇತರರಿಗೆ ಕಡಿಮೆ ಸಮಯವನ್ನು ನಿಗದಿಪಡಿಸಿ ಕಿ.ರಂ. ಅವರಿಗೆ ನಾವು ಯೋಜಿಸಿದ್ದಂತೆಯೇ ನಲವತ್ತು ನಿಮಿಷಗಳನ್ನು ನಿಗದಿಪಡಿಸಿದ್ದೆವು. ಅಂದು ಕಿ.ರಂ. ತಮ್ಮ ಭಾಷಣದಲ್ಲಿ ತಮ್ಮ ಮೇಷ್ಟ್ರು ಪಿ. ಲಂಕೇಶರ ಸಾಹಿತ್ಯ ಮತ್ತು ಸಾಮಾಜಿಕ ಕಾಳಜಿಗಳ ಬಗ್ಗೆ ಎಷ್ಟು ವಿಸ್ತೃತರಾಗಿ ಮಾತನಾಡಿದರೆಂದರೆ ಅವರ ಭಾಷಣವೇ ಎರಡೂ ದಿನಗಳ ಇತರೆ ಗೋಷ್ಠಿಗಳಿಗೆ ಬುನಾದಿಯನ್ನಲ್ಲದೆ ದಿಕ್ಕುದೆಶೆಗಳನ್ನೂ ತೋರಿತ್ತು.

'ಲಂಕೇಶ್ 75' ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಯುವ ಜನಾಂಗವನ್ನು ನೋಡಿ ಕಿ.ರಂ. ಎಷ್ಟು ಉತ್ಸುಕರಾಗಿದ್ದರೆಂದರೆ, ಕಾರ್ಯಕ್ರಮ ಮುಗಿದ ನಂತರ ನನಗೆ ಫೋನ್ ಮಾಡಿ "ಎಷ್ಟೊಂದು ಜನ ಹೊಸ ಹುಡುಗರು ಬಂದಿದ್ದರು. ಅವರೆಲ್ಲ ಲಂಕೇಶ್ ಹೋದ ನಂತರ ಸೃಷ್ಟಿ ಆಗಿರುವ ಹೊಸ ಚಿಗುರುಗಳು. ಅವರನ್ನೆಲ್ಲ ಈ ಕಾರ್ಯಕ್ರಮದ ನಂತರ ನಾವು ನಿರ್ಲಕ್ಷಿಸಬಾರದು. ಅವರೊಂದಿಗೆ ಸದಾ ಸಂಪರ್ಕ ಇಟ್ಟುಕೊಂಡು, ಅವರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ, ಅವರನ್ನೆಲ್ಲ ಬೆಳೆಸಬೇಕು. ಆ ದಿಕ್ಕಿನಲ್ಲಿ ನಾವು ಚಿಂತಿಸಬೇಕು. ಮನೆಗೆ ಬಾ, ಅಂತಹ ಯೋಜನೆಯನ್ನು ರೂಪಿಸೋಣ" ಎಂದಿದ್ದರು. ಅವರ ಆ ಉತ್ಸಾಹ ಕಂಡು ನಾನು ಬೆರಗಾಗಿದ್ದೆ.

ಇವತ್ತು ನನ್ನನ್ನು ಕಾಡುತ್ತಿರುವ ಒಂದು ವಿಷಾದದ ಸಂಗತಿ ಬಗ್ಗೆ ಹೇಳಲೇಬೇಕು. 'ಲಂಕೇಶ್ -75' ಕಾರ್ಯಕ್ರಮವನ್ನು ರೂಪಿಸುತ್ತಿದ್ದಾಗ ನಮ್ಮ ಪಾರ್ವತೀಶ ಅವರು ಈ ವರ್ಷದಿಂದಲೇ 'ಲಂಕೇಶ್ ಪ್ರಶಸ್ತಿ' ಎಂಬುದನ್ನು ನಮ್ಮ ತಂಡ ಘೋಷಿಸಬೇಕು ಎಂದೂ, ಅಂತಹ ಪ್ರಶಸ್ತಿಯನ್ನು ಸ್ವೀಕರಿಸುವ ಅರ್ಹತೆ ಇರುವ ಪ್ರಥಮ ವ್ಯಕ್ತಿ ಕಿ.ರಂ. ಆಗಿದ್ದಾರೆಂದೂ ಒತ್ತಾಯ ಮಾಡಿದರು. ಪಾರ್ವತೀಶ ಅವರ ಅಭಿಪ್ರಾಯದೊಂದಿಗೆ ನಮ್ಮ ತಂಡದ ಯಾರಲ್ಲೂ ಭಿನ್ನಾಭಿಪ್ರಾಯವಿರಲಿಲ್ಲ, ಆದರೆ ಅಷ್ಟೊತ್ತಿಗಾಗಲೇ ಸಾಕಷ್ಟು ಸಮಯದ ಒತ್ತಡವನ್ನೂ ಮತ್ತು ಆರ್ಥಿಕ ಬಿಕ್ಕಟ್ಟನ್ನೂ ನಾವು ಎದುರಿಸುತ್ತಿದ್ದರಿಂದ; ಮತ್ತು ಲಂಕೇಶ್ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿ ಕೇವಲ ಒಂದು ವರ್ಷದ ಪ್ರಶಸ್ತಿ ಆಗದೆ ಅದನ್ನು ಭವಿಷ್ಯದಲ್ಲೂ ನಡೆಸಿಕೊಂಡು ಹೋಗುವ ವ್ಯವಸ್ಥೆ ಇದೆಯೇ ಎಂಬ ಆತಂಕವೂ ಇದ್ದುದರಿಂದ ಅದರ ಬಗ್ಗೆ ಮುಂದೆ ಯೋಚಿಸೋಣ ಎಂದು ಕೈಬಿಟ್ಟಿದ್ದೆವು.

ಆದರೀಗ....


ಸಾಹಿತ್ಯದ ಬಗ್ಗೆ, ಸಮಾಜದ ಬಗ್ಗೆ, ಹೊಸ ಪೀಳಿಗೆಯ ಬಗ್ಗೆ ಲಂಕೇಶರಷ್ಟೇ ಕಾಳಜಿ ಹೊಂದಿದ್ದ, ಲಂಕೇಶರಂತೆಯೇ ಚಿಂತಿಸುತ್ತಿದ್ದ, ಲಂಕೇಶರಂತೆಯೇ ಸಹಸ್ರಾರು ಜನರಿಗೆ 'ಮೇಷ್ಟ್ರು' ಆಗಿದ್ದ, ಎಲ್ಲ ರೀತಿಯಲ್ಲೂ 'ಲಂಕೇಶ್ ಪ್ರಶಸ್ತಿ'ಗೆ ಸೂಕ್ತರಾಗಿದ್ದ ಕಿ.ರಂ. ಲಂಕೇಶರಂತೆಯೇ ಎಲ್ಲರನ್ನು ಅಗಲಿದ್ದಾರೆ. ಲಂಕೇಶರಂತೆಯೇ ನಮ್ಮ ಸಾಹಿತ್ಯಕ–ಸಾಂಸ್ಕೃತಿಕ–ಸಾಮಾಜಿಕ ಬದುಕಿನಲ್ಲಿ ತುಂಬಲಾಗದಂತಹ ಒಂದು ದೊಡ್ಡ ಕಂದಕವನ್ನು ಬಿಟ್ಟುಹೋಗಿದ್ದಾರೆ.

ಕಿ.ರಂ. ಎಂದೂ ಪ್ರಶಸ್ತಿಗಳಿಗೆ, ಸನ್ಮಾನಗಳಿಗೆ ಆಶಿಸಿದ ವ್ಯಕ್ತಿ ಅಲ್ಲ. ಆದರೂ ನನಗನ್ನಿಸುವಂತೆ ಅವರು ಇಷ್ಟಪಡುತ್ತಿದ್ದ ಲಂಕೇಶ್ ಮೇಷ್ಟ್ರು ಹೆಸರಲ್ಲಿ ಪ್ರಶಸ್ತಿಯನ್ನು ಸ್ಥಾಪಿಸಿ ಕಿ.ರಂ. ಅವರಿಗೆ ಅದನ್ನು ಮೊದಲು ನೀಡಿದ್ದರೆ ಅವರಿಗಿಂತ ನನಗೆ, ನಮ್ಮ ತಂಡಕ್ಕೆ ಮತ್ತು ಕಿ.ರಂ. ಅವರ ಸಹಸ್ರಾರು ಶಿಷ್ಯರಿಗಂತೂ ತುಂಬಾ ಸಂತೋಷವಾಗುತ್ತಿತ್ತು.

ಅವತ್ತಿನ ಒತ್ತಡದಲ್ಲಿ ಅಂತಹ ಪ್ರಶಸ್ತಿ ಸ್ಥಾಪಿಸುವುದು ಅಸಾಧ್ಯ ಎನ್ನಿಸಿದ್ದರೂ ಇವತ್ತು ಅವನ್ನೆಲ್ಲ ಮೀರಬಹುದಿತ್ತು ಅನ್ನಿಸುತ್ತಿದೆ. ಬದುಕು ಎಂಬುದು ಇಂತಹ ವಿಪರ್ಯಾಸಗಳಿಂದ ಕೂಡಿರುವುದೇ ಆಗಿದೆಯಲ್ಲವೇ....

ಕಳೆದ ಭಾನುವಾರ ಕಿ.ರಂ. ಅವರನ್ನು ಕೊನೆ ಬಾರಿಗೆ ನೋಡುವಾಗ ಅವರಿಗೆ ಸಲ್ಲಬೇಕಿದ್ದ ಈ ಪುಟ್ಟ ಗೌರವವನ್ನು ನೀಡಲಾಗಲಿಲ್ಲವಲ್ಲ ಎಂಬ ಕೊರಗು ಕಾಡುತ್ತಿತ್ತು....





ಕಿ.ರಂ. ಕನ್ನಡ ಕಾವ್ಯ ಲೋಕದ ಮಾಯಾಕಿನ್ನರಿ

ನನ್ನ 35 ವರ್ಷದ ಕಿ.ರಂ. ನಾಗರಾಜ ಅವರ ಜೊತೆಗಿನ ಒಡನಾಟವು ಎಷ್ಟು ಗಾಢವಾದದ್ದು ಎನ್ನುವುದನ್ನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅವರ ಅಗಲಿಕೆ ಎಂಬ ಬಾಣವು ಆಳದಲ್ಲಿ ನನ್ನನ್ನು ಘಾಸಿಗೊಳಿಸಿದೆ ಎನ್ನುವುದು ನೋವಿನಲ್ಲಿ ಸಂಕಟಪಡುತ್ತಿರುವ ಈ ಒಳಗಿನ ಜೀವಕ್ಕೇ ಗೊತ್ತು. ನಮಗೆ ಆತ್ಮೀಯವಾಗಿರುವ ಜೀವವು ಎಲ್ಲೇ ಇರಲಿ, ಭೌತಿಕವಾಗಿ ಇದೆ ಎನ್ನುವ ಮನದೊಳಗಿನ ಭಾವನೆಯೇ ಎಷ್ಟು ಸಂತೃಪ್ತಿಯನ್ನು ಕೊಡುತ್ತದೆ ಎನ್ನುವುದು ಅಂತಹದ್ದನ್ನು ಕಳೆದುಕೊಂಡಾಗಲೇ ಅರಿವಿಗೆ ಬರುತ್ತದೆ.

ಮನುಷ್ಯ ಸಂಬಂಧದಲ್ಲಿ ಆತ್ಮೀಯತೆ ಎನ್ನುವುದು ಹಲವಾರು ಕಾರಣಗಳಿಂದಾಗಿ ಉಂಟಾಗುತ್ತದೆ. ಕಿರಂ ಅವರು, ಮನುಷ್ಯನ ವ್ಯಕ್ತಿತ್ವವನ್ನು ಪಾರದರ್ಶಕವಾಗಿ ಇಡುವ ಉತ್ಕೃಷ್ಟ ಮೌಲ್ಯಗಳ ಮೊತ್ತವಾಗಿದ್ದರು. ನಿಸ್ವಾರ್ಥತತೆ, ಜಾತಿ ಮತ ಪಂಥಗಳಾಚೆಗಿನ ಮನುಷ್ಯಪ್ರೀತಿ, ತಪ್ಪು ಎನ್ನುವುದನ್ನು ಕಂಡರೆ ತೀವ್ರವಾಗಿ ಪ್ರತಿಭಟಿಸುವ ಮನೋಭಾವ, ತನ್ನನ್ನು ಹೊಗಳುವ ಯಾವುದೇ ಮಾತುಗಳನ್ನು ಮುಜುಗರದಿಂದ ತಳ್ಳಿ ಹಾಕುವ ಭಾವ, ಉತ್ಕೃಷ್ಟವಾದದ್ದನ್ನು ಕಂಡರೆ ಎಲ್ಲರ ಸಂಗಡ ಹಂಚಿಕೊಳ್ಳುವ ಉತ್ಸಾಹ, ದೌರ್ಜನ್ಯಕ್ಕೆ ಒಳಗಾದವರ ಬಗೆಗೆ ತೀವ್ರವಾಗಿ ಸ್ಪಂದಿಸುವುದು-ಹೀಗೆ ಒಂದೇ, ಎರಡೇ ಹೇಳುತ್ತಾ ಹೋದರೆ ಈ ಗುಣಗಳೆಂಬ ಮಣಿಗಳ ವಿಶಾಲ ಸರಮಾಲೆಯನ್ನೇ ಹೆಣೆಯಬಹುದು. ಈ ಎಲ್ಲ ಮೌಲ್ಯಗಳು ಕಿರಂ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳು. ಇಂಥ ವ್ಯಕ್ತಿತ್ವದಿಂದಾಗಿಯೇ ಕಿರಂ ಅಗಾಧ ಸಾಮುದಾಯಿಕ ಪ್ರೀತಿಯನ್ನು ಗಳಿಸಿಕೊಂಡಿದ್ದರು. ನನಗಂತೂ ಇಂತಹದ್ದರಿಂದಾಗಿಯೇ ಅವರು ಜೀವದ ಭಾಗವಾಗಿದ್ದರು.

ಕಿ.ರಂ. ಅವರ ಸಾಹಿತ್ಯದ ಬಗೆಗಿನ ಅಗಾಧ ಪ್ರೀತಿ, ಬೌದ್ಧಿಕ ಚಿಂತನೆಯ ಸೂಕ್ಷ್ಮತೆ ಹಾಗೂ ಪ್ರಗತಿಪರ ಚಳವಳಿಗಳ ಜೊತೆಗಿನ ಗಾಢ ಸ್ಪಂದನೆಗಳು, ಅವರ ಈ ವ್ಯಕ್ತಿತ್ವದ ವಿವಿಧ ಆಯಾಮಗಳಂತೆ ಹರಡಿಕೊಂಡಿದ್ದವು.

ಸೃಜನಶೀಲ ಸಾಹಿತ್ಯದ ಬಗೆಗಿನ ಗಾಢವಾದ ಒಲವು, ಕಿರಂ ಹಾಗೂ ಕೆ.ವಿ.ನಾರಾಯಣ ಅವರ ಜೊತೆಗಿನ ನನ್ನ ಸಂಬಂಧವು ಹೆಚ್ಚು ನಿಕಟವೂ, ಆತ್ಮೀಯವೂ ಆಗುವಂತೆ ಮಾಡಿದ್ದವು ಎಂದೇ ಹೇಳಬೇಕು. ನಾವು ಜೊತೆಗಿದ್ದ ಆ 70ರ ದಶಕವು ಕನ್ನಡದ ನವ್ಯ ಸಾಹಿತ್ಯದ ಪರಾಕಾಷ್ಠತೆಯ ಕೊನೆಯ ಕಾಲ. ನಾವೆಲ್ಲರೂ ಎಡಪಂಥೀಯ ಸಾಹಿತ್ಯ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿಯೂ, ಸೃಜನಶೀಲ ಸಾಹಿತ್ಯಕ್ಕೇ ವಿಶಿಷ್ಟವಾದ ಜೀವನವನ್ನು ನೋಡುವ ಬಹುಮುಖಿ ಆಯಾಮಗಳ ಭಾಷೆಯ ಹುಡುಕಾಟವನ್ನು ಮುಖ್ಯವೆಂದು ತಿಳಿದಿದ್ದೆವು. ಕಾವ್ಯ ಭಾಷೆಯ ಸೂಕ್ಷ್ಮಗಳನ್ನು ಕಿರಂ ಅವರು ತಮ್ಮ ಅಗಾಧ ವ್ಯುತ್ಪತ್ತಿ ಮತ್ತು ಕಲ್ಪನಾಶಕ್ತಿಯಿಂದ ಹುಡುಕಬಲ್ಲವರಾಗಿದ್ದರು. ಮೇಲುನೋಟಕ್ಕೆ ಸಾಮಾನ್ಯ ಕಾವ್ಯವೆಂದು ಕಾಣುವ ಕಾವ್ಯದಲ್ಲಿ ಕಿರಂ ಅವರು ಅಸಾಮಾನ್ಯವೆಂದು ಕಾಣುವ ಭಾಷಿಕ ಕ್ರಿಯಾಶೀಲತೆಯನ್ನು ಕಾಣಬಲ್ಲವರಾಗಿದ್ದರು. ಕಾವ್ಯವನ್ನು ಹೊಳೆಯಿಸುವ ಸ್ಪರ್ಶಮಣಿಯೂ ಆಗಿದ್ದರು. ಪಂಪನಂತಹ ಕ್ಲಾಸಿಕ್ ಕವಿಯಿಂದ ಹಿಡಿದು, ವಚನಕಾರರು, ಹರಿಹರ, ಕುಮಾರವ್ಯಾಸನಂತಹ ದೇಸಿ ಕವಿಗಳು ಹಾಗೂ ಆಧುನಿಕ ಕನ್ನಡ ಕಾವ್ಯ ಪರಂಪರೆ ಅವರಿಗೆ ಕನ್ನಡದ ಜೀವಸತ್ವವನ್ನು ಹಿಡಿದಿಟ್ಟಿರುವ ಅಗಾಧವಾದ ಅಕ್ಷಯಪಾತ್ರೆಯಂತೆ ಕಾಣುತ್ತಿತ್ತು. ಕನ್ನಡ ಮಣ್ಣಿನ ಅಲೆಮಾರಿ ಜನಪದ ಕವಿಗಳೂ ಈ ಅಕ್ಷಯ ಪಾತ್ರೆಯ ಮಹತ್ವದ ಭಾಗಗಳಾಗಿದ್ದರು. ಕನ್ನಡದ ಸೃಜನಶೀಲ ಚಿಂತನೆಯ ಬಹುಮುಖದ ನೆಲೆಗಳನ್ನು ವರ್ತಮಾನದ ತುರ್ತಿನಲ್ಲಿ ತೋರಿಸುವ ತುಡಿತವು ಕಿರಂ ಅವರ ಕಾವ್ಯವನ್ನು ಕುರಿತ ಮಾತುಗಳಲ್ಲಿ ಅತೀ ತೀವ್ರವಾಗಿ ಕಾಣುತ್ತಿದ್ದ ಅಂಶವಾಗಿತ್ತು. ಕನ್ನಡದ ಈ ವಿಶಾಲ ಹರಹಿನ ಕಾವ್ಯವನ್ನು ಕಿರಂ ಅವರಷ್ಟು ತನ್ಮಯವಾಗಿ ವಿವರಿಸಿ, ವ್ಯಾಖ್ಯಾನಿಸಿ, ಆಸ್ವಾದಿಸುತ್ತಿದ್ದ ಇನ್ನೊಬ್ಬರನ್ನು ನಾನು ಕಾಣೆ.

1975ನೆಯ ಇಸವಿಯಲ್ಲಿ ಕವಿ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕಾವ್ಯದ ಕವನಗಳು ಇನ್ನೂ ಮುದ್ರಿತವಾಗಿರಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಮರಗಳ ಕೆಳಗೆ ಕುಳಿತು ಸಿದ್ಧಲಿಂಗಯ್ಯನವರ ಬಾಯಲ್ಲಿ ಜೋರಾಗಿ ಆ ಕವನಗಳನ್ನು ಓದಿಸಿದ್ದವರು ಕಿರಂ ನಾಗರಾಜ. ಆ ಕಾವ್ಯ ಭಾಷೆಯ ಹೊಸತನವು ಕನ್ನಡ ಕಾವ್ಯಕ್ಕೇ ತಿರುವನ್ನು ಕೊಟ್ಟ ಹೊಸ ಭಾಷೆ. ಆ ಬಗ್ಗೆ ಅತ್ಯಂತ ಉತ್ಸಾಹ ತಳೆದಿದ್ದ ಕಿರಂ ಅವರು ಅದರ ಮೊದಲ ಮುದ್ರಣಕ್ಕೂ ಕಾರಣರಾದವರು.

ಸಾಹಿತ್ಯವನ್ನು ವರ್ತಮಾನದ ಎಲ್ಲ ಸಂಕಷ್ಟಗಳಿಗೂ ಮುಖಾಮುಖಿಯಾಗಿಸುವ, ವಿಮರ್ಶಿಸುವ ಚೈತನ್ಯವಿರುತ್ತದೆ ಎನ್ನುವ ನಂಬಿಕೆ ಕಿರಂ ಅವರಲ್ಲಿ ಗಾಢವಾಗಿ ನೆಲೆಯಾಗಿತ್ತು. ನಮ್ಮ ಕಾಲದ ರಾಜಕೀಯ ಪ್ರಭುತ್ವದ ಅಸಾಂಗತ್ಯವನ್ನೂ ಸಾಮಾಜಿಕ ವೈಷಮ್ಯಗಳನ್ನೂ ಕಟುವಾಗಿ ಟೀಕಿಸುತ್ತಿದ್ದ ಕಿರಂ ಅವರಿಗೆ ಕನ್ನಡ ಸಾಹಿತ್ಯದ ಅನ್ವೇಷಕ, ವಿಮರ್ಶಾತ್ಮಕ ಆಯಾಮಗಳು ಸಾಕಷ್ಟು ದ್ರವ್ಯಗಳನ್ನು ಒದಗಿಸುತ್ತಿದ್ದವು. ಕನ್ನಡ ಬದುಕಿಗೆ, ಬದುಕುವ ಲೌಕಿಕ ನೆಲೆಯನ್ನೂ, ಆಧ್ಯಾತ್ಮಿಕ ಆಯಾಮವನ್ನೂ ಕನ್ನಡ ಸಾಹಿತ್ಯ ಪ್ರಪಂಚವು ಯಥೇಚ್ಛವಾಗಿ ಕೊಡುತ್ತದೆ ಎನ್ನುವುದು ಕಿರಂ ಅವರ ಚಿಂತನೆಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಇಂಥ ತಿಳಿವಳಿಕೆಯನ್ನು ಸಾಹಿತ್ಯದಲ್ಲಿ ಆಸಕ್ತ ತರುಣ ಪ್ರಪಂಚಕ್ಕೆ ದತ್ತವಾಗಿಸುವುದು ಮುಖ್ಯವೆಂದು ಕಿರಂ ಅವರು ಚೆನ್ನಾಗಿ ತಿಳಿದಿದ್ದರು.

ದುಂಬಿಗಳಂತೆ ಕಿರಂ ಅವರ ಸುತ್ತ ಸುಳಿದಾಡುತ್ತಿದ್ದ ವಿದ್ಯಾರ್ಥಿಗಳು, ಸಾಹಿತ್ಯಲೋಕದ ಸೂಕ್ಷ್ಮಗಳನ್ನು ಅರಿಯುವುದು ಮುಖ್ಯವೆಂದು ಭಾವಿಸಿದ್ದರು. ಇಂಥವರಿಗೆ ಇವರು ಮಧು ಕೊಡುವ ಹೂವಾಗಿದ್ದರು. ಕಿರಂ ಅವರಿಂದ ಇಂಥ ಒಳನೋಟಗಳನ್ನು ಗ್ರಹಿಸಿ ತಮ್ಮ ಅಧ್ಯಯನಕ್ಕಾಗಿ ಬಳಸಿಕೊಳ್ಳುವ ಅವಕಾಶವನ್ನು ಇವರು ಬಿಟ್ಟವರಲ್ಲ.

ಕಿ.ರಂ.

ಹರಡಿಕೊಂಡ ಪುಸ್ತಕಗಳನ್ನು
ಜೋಡಿಸಬೇಕು
ಕಿ.ರಂ. ಇಲ್ಲ


ಬನಶಂಕರಿ ಚಿತಾಗಾರದಲ್ಲಿ
ಸಿಕ್ಕರು ಕಿ.ರಂ.
ಒಂದು ಚಿಂತನೆಯಾಗಿ

ಅವರ ಮಕ್ಕಳು ಯಾರು?
ಇಲ್ಲಿ
ಎಲ್ಲರ ಕಣ್ಣಲ್ಲು ನೀರು

ಲಂಕೇಶ್, ಡಿ.ಆರ್., ಕಿ.ರಂ.
ಚಿಂತನೆಯ ಮಡಕೆಯಾದ
ನೀರು ಮಣ್ಣು ಚಕ್ರ

ತುಂಬಿದ ಕೊಡ
ತುಳುಕುತ್ತಿದೆ
ಬೆಳಕು.

● ಡಾ.ಸಿ. ರವೀಂದ್ರನಾಥ್



ಕರ್ನಾಟಕದ ಉದ್ದಗಲಗಳಲ್ಲಿ, ಬೇರೆ ಬೇರೆ ವಿಶ್ವವಿದ್ಯಾಲಯಗಳು, ಕಾಲೇಜುಗಳು ಹಾಗೂ ಅಸಂಖ್ಯಾತ ಶೈಕ್ಷಣಿಕ ಸಂಘಸಂಸ್ಥೆಗಳಲ್ಲಿ ಕಿರಂ ಅವರು ಕನ್ನಡ ಕಾವ್ಯ ಚೈತನ್ಯವನ್ನು ಕುರಿತಂತೆ ಆಡಿದ ಮಾತುಗಳು ಅಸಂಖ್ಯಾತ. ಕನ್ನಡ ಕಾವ್ಯವನ್ನು ವರ್ತಮಾನದ ಬದುಕಿನ ಸೂಕ್ಷ್ಮ ಸಮಸ್ಯೆಗಳ ಒಳನೋಟವಾಗಿ ಬಳಸುವಂತೆಯೇ, ಕಾವ್ಯಭಾಷೆಯ ಸೂಕ್ಷ್ಮಗಳನ್ನು ನೋಡುವ ಕಲೆ ಕಿರಂ ಅವರಿಗೆ ಚೆನ್ನಾಗಿ ಸಿದ್ಧಿಸಿತ್ತು.

ಕನ್ನಡ ಸಾಹಿತ್ಯ ಸಮುದಾಯ ಕಿರಂ ಅವರನ್ನು 'ಮೌಖಿಕ ಪರಂಪರೆಯ ಮುಂದುವರಿಕೆಯ ಏಕಾಂಗ ವ್ಯಕ್ತಿ' ಎಂದು ಗುರುತಿಸಿದೆ. ಬರಹದ ಮೂಲಕ ತನ್ನ ಹೆಸರನ್ನು ಚರಿತ್ರೆಯಲ್ಲಿ ಗಟ್ಟಿಗೊಳಿಸಿಕೊಳ್ಳಬೇಕು ಎನ್ನುವ ಮನಃಸ್ಥಿತಿ ಕಿರಂ ಅವರಿಗಿರಲಿಲ್ಲ. ಬರಹಕ್ಕೆ ವ್ಯಕ್ತಿವಿಶಿಷ್ಟ ಛಾಯೆ ಪ್ರಬಲವಾಗಿರುತ್ತದೆ. ಆದರೆ ಮಾತಿಗೆ, ಕೇಳುವವನಲ್ಲಿ ಪರಿಣಾಮಗೊಳ್ಳುವ ಗುಣವಿರುತ್ತದೆ. ಮಾತಿನ ಈ ಸಾಮುದಾಯಿಕ ಗುಣವನ್ನು ಕಿರಂ ಬಲವಾಗಿ ನಂಬಿದ್ದರು. ತಮ್ಮ ಮಾತುಗಾರಿಕೆ ಹಾಗೂ ಭಾಷಣದ ಯಾವುದೇ ಸಂದರ್ಭದಲ್ಲಿಯೂ ಕಿರಂ ಅವರು ಮಾತಿಗೆ ಪ್ರೇರಣೆಯಾದ ಕಾವ್ಯವನ್ನು ಹಾಗೂ ಪರಿಣಾಮಿಗಳಾದ ಸಾಹಿತ್ಯವನ್ನು ಗ್ರಹಿಸುವ ಸಮುದಾಯವನ್ನು, ಅತ್ಯಂತ ಪ್ರೀತಿ, ಗೌರವದಿಂದ ನೆನೆಯುತ್ತಿದ್ದರು. ತನ್ನ ಮಾತು ಇವೆರಡರ ನಡುವಣ ಸಂಬಂಧದಲ್ಲಿ ಹುಟ್ಟಿದ್ದೆಂದೂ ಇವರು ನಂಬಿದ್ದರು. ಹೀಗಾಗಿ ಅವರ ಮಾತುಗಳಿಗೆ ಆ ಕೇಳುವ ಕ್ಷಣದಲ್ಲೇ ಕೇಳುವವನ ಪ್ರಜ್ಞೆಯಲ್ಲಿ ಮೂರ್ತಗೊಳ್ಳುವ ಅಪರೂಪದ ಶಕ್ತಿ ಸಾಧ್ಯವಾಗುತ್ತಿತ್ತು. ಬಟ್ಟೆಯ ಚೀಲವನ್ನು ಹೆಗಲಿಗೆ ಹಾಕಿಕೊಂಡು, ಚೀಲದಲ್ಲಿ ತಮ್ಮ ಟಿಪ್ಪಣಿಗಳನ್ನೂ, ಪುಸ್ತಕಗಳನ್ನೂ ಸೇರಿಸಿಕೊಂಡು ಹೊರಡುತ್ತಿದ್ದ ಇವರು, ಸಾಹಿತ್ಯ ಚಿಂತನೆಯ ಪ್ರಸಾರದ ಆಧುನಿಕ ಸಂತನಂತೆ ಕಾಣುತ್ತಿದ್ದರು.

ಅನೇಕ ಪ್ರಗತಿಪರ ಚಳವಳಿಗಳಲ್ಲಿ ಕಿರಂ ಅವರದು ಪ್ರಮುಖ ಪಾತ್ರವಾಗಿರುತ್ತಿತ್ತು. ಆಧುನಿಕ ರಾಜಕಾರಣದ ಅನೇಕ ನೀತಿನಿಯಮಗಳನ್ನು ಕಿರಂ ಅವರು ಸ್ಪಷ್ಟ ನಿಲುವುಗಳಲ್ಲಿ ವಿಮರ್ಶಿಸಿ ಟೀಕಿಸುತ್ತಿದ್ದರು. 20ನೆಯ ಶತಮಾನದ 70ರ ದಶಕದಲ್ಲಿ ಮೂಡಿಬಂದ ಎಡಪಂಥೀಯ ವಿಚಾರಧಾರೆಯ 'ಸಮುದಾಯ' ಸಂಘಟನೆಯಲ್ಲಿ ಕಿರಂ ಅವರದ್ದು ಪ್ರಧಾನ ಪಾತ್ರವಾಗಿತ್ತು. 'ಸಮುದಾಯ'ವೆನ್ನುವ ಹೆಸರನ್ನು ಸೂಚಿಸಿ ಅದು ಕ್ರಿಯಾತ್ಮಕವಾಗುವ ಅನೇಕ ದಿಕ್ಕುಗಳನ್ನು ಸೂಚಿಸುವಲ್ಲಿ ಕಿರಂ ಅವರು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ್ದರು. ಎಮರ್ಜೆನ್ಸಿಯ ಸಂದರ್ಭದಲ್ಲಿ ಅಧಿಕಾರಶಾಹಿಯ ದೌರ್ಜನ್ಯವನ್ನು ಧಿಕ್ಕರಿಸುವ 'ಆಪತ್ಕಾಲಿನ ಕವಿತೆಗಳು' ಎಂಬ ಕವನಸಂಕಲನವನ್ನು ಇವರು ಸಂಪಾದಿಸಿದ್ದರು.

ಗೋಕಾಕ್ ಭಾಷಾ ಚಳವಳಿಯ ಸಂದರ್ಭದಲ್ಲಿ ಆದ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದೆಂದು ತೋರುತ್ತದೆ. ಕನ್ನಡ ಭಾಷೆಯು ಶಿಕ್ಷಣದಲ್ಲಿ ಸಂಸ್ಕೃತದ ಬದಲಿಗೆ ಕಡ್ಡಾಯ ಭಾಷೆಯಾಗಿ ರೂಪುಗೊಳ್ಳಬೇಕೆಂಬ ಈ ಚಳವಳಿ ಕರ್ನಾಟಕದ ಉದ್ದಗಲಗಳಲ್ಲಿ ಸರ್ವವ್ಯಾಪಿಯಾಗಿ ಹಬ್ಬಿತ್ತು. ಅತ್ಯಂತ ಸೂಕ್ಷ್ಮವಾಗಿ ಗೋಕಾಕ್ ವರದಿಯು ಇಂಗ್ಲಿಷ್ ಪರವಾಗಿದೆ ಎಂಬ ಗುಮಾನಿ ನಮ್ಮನ್ನು ಕಾಡುತ್ತಿತ್ತು. ಕಿರಂ, ನಾನು, ಬಹುಶಃ ಎಚ್.ಎಸ್.ಶಿವಪ್ರಕಾಶ್ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಈ ಕುರಿತು ಒಂದು ಪತ್ರವನ್ನು ಪ್ರಕಟಿಸಿದ್ದೆವು. ಕಿರಂ ಮತ್ತು ನನ್ನನ್ನು ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರು ಧಿಕ್ಕಾರ ಕೂಗುವುದಕ್ಕಾಗಿ ಹುಡುಕಿದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಯಾವುದು ಸಮುದಾಯದ ಹಿತದ ಪರವೋ, ಅದರ ಪರವಾಗಿ ಮುನ್ನುಗ್ಗಿ ಮಾತನಾಡುವುದು ಕಿರಂ ಅವರ ವ್ಯಕ್ತಿತ್ವಕ್ಕೇ ಹೇಳಿಟ್ಟ ಅಂಶವಾಗಿತ್ತು. ಶಿಕ್ಷಣದ ಮೊದಲಿನಿಂದಲೇ ಇಂಗ್ಲಿಷ್ ಭಾಷೆಯ ಕಲಿಕೆಯ ಅವಶ್ಯಕತೆಯನ್ನು ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಕಡ್ಡಾಯ ಮಾಡಬೇಕೆಂಬ ಚಳವಳಿಯ ಪರವಾಗಿ ತೀವ್ರವಾದ ವಾದವನ್ನು ಕಿರಂ ಅವರು ಮಾಡಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ.. ಇತ್ತೀಚೆಗೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಲ್.ಬಸವರಾಜು ಅವರು ಮಠಾಧೀಶರ ವಿರುದ್ಧ ತಾತ್ವಿಕವಾದ ವಿರೋಧವನ್ನು ವ್ಯಕ್ತಪಡಿಸಿದಾಗ, ಸಮ್ಮೇಳನದಲ್ಲಿ ಎಲ್. ಬಸವರಾಜು ಅವರ ಪರವಾಗಿ, ಮಾತನಾಡಿದ ಕಿರಂ ಅವರು - ಮಠಗಳು ಸಾಂಸ್ಥಿಕವಾದ ಶಕ್ತಿಯಾಗಿ ಹಿಡಿಯುತ್ತಿರುವ ರಾಜಕೀಯ ಸ್ವರೂಪವನ್ನು ಕಟುವಾದ ವಿಮರ್ಶೆಗೆ ಗುರಿ ಮಾಡಿದ್ದರು.

ಕಿರಂ ಅವರು ಎರಡು ನಾಟಕಗಳನ್ನು ರಚಿಸಿದ್ದಾರೆ. 'ಕಾಲಜ್ಞಾನಿ ಕನಕ' ಹಾಗೂ 'ನೀಗಿಕೊಂಡ ಸಂಸ'. ಕನ್ನಡದ ಇಬ್ಬರು ಮಹತ್ವದ ಬರಹಗಾರರೂ, ಸಾಮಾಜಿಕ ಚಿಂತಕರೂ ಆಗಿದ್ದ ಇವರನ್ನು ನಿಮಿತ್ತವಾಗಿಟ್ಟುಕೊಂಡು ಬರೆದ ಈ ನಾಟಕಗಳು ಪ್ರಸ್ತುತ ಸನ್ನಿವೇಶದ ಸಾಮಾಜಿಕ ಹಾಗೂ ಪ್ರಭುತ್ವಗಳಿಗೆ ಕನ್ನಡಿ ಹಿಡಿಯುತ್ತವೆ. ಅನೇಕ ಪ್ರಯೋಗಗಳನ್ನು ಕರ್ನಾಟಕದಾದ್ಯಂತ ಕಂಡ ಈ ನಾಟಕಗಳು ಬಹಳ ಜನಪ್ರಿಯವಾಗಿವೆ. ಕನ್ನಡದ ರಂಗಕರ್ಮಿ, ನಿರ್ದೇಶಕರಾಗಿದ್ದ ಸಿ.ಜಿ.ಕೆ.ಯವರ ಅತೀವ ಒತ್ತಾಸೆಯಿಂದ ಇವು ಕೊನೆಗೂ ಬರಹದ ರೂಪಕ್ಕೆ ಬಂದವು.

ಜ್ಞಾನವನ್ನೂ, ನಡಾವಳಿಯನ್ನೂ ಸಮುದಾಯದಲ್ಲಿ ಹಂಚುವುದನ್ನೇ ಅರ್ಥಪೂರ್ಣವಾದ ಕ್ರಿಯೆಯನ್ನಾಗಿ ಮಾಡಿಕೊಂಡ ಕಿರಂ ಅವರು, ಸಂತನಂತೆ ಕೊಟ್ಟವರೇ ಹೊರತು, ತಮ್ಮ ಸ್ವಂತದ ಹೆಸರಿಗಾಗಿ ಬಳಸಿಕೊಂಡವರಲ್ಲ. ಅವರು ಬೇಡಿದ್ದು ಏನಿದ್ದರೂ ನಮ್ಮ ಸಾಹಿತ್ಯ ಪರಂಪರೆಯಿಂದಲೇ. ಅಲ್ಲಿಂದ ಬೇಡಿದ್ದನ್ನು ವರ್ತಮಾನಕ್ಕೆ ಹಂಚಿದವರು ಅವರು.

ಕಿರಂ ಅವರ ಒಡನಾಟ ಯಾರಿಗೆ ಆಗಲೀ ಆಪ್ಯಾಯಮಾನವಾದ ಅನುಭವವನ್ನು ನೀಡುತ್ತಿತ್ತು. ಲೌಕಿಕ ಬದುಕಿನ ಲಘುವಾದ, ಚೆಲುವಾದ ಕ್ಷಣಗಳನ್ನು ಅವರ ಹತ್ತಿರ ಯಾರಾದರೂ ಕಳೆಯಬಹುದಿತ್ತು. ಅಲೌಕಿಕದ ಬೆಳಕು ಅಲ್ಲಿಯೂ ಕಾಣುತ್ತಿತ್ತು. ಕರ್ನಾಟಕದ ಸೀಮೆಸೀಮೆಗಳ ತಿಂಡಿ, ತೀರ್ಥಗಳು ಅವರ ಬಾಯಿಯಲ್ಲಿ ಪರಿಚಿತವಾಗಿದ್ದವು. ಬೆಂಗಳೂರಿನ ಯಾವ ಮೂಲೆಯಲ್ಲಿ ಒಳ್ಳೆಯ ದೋಸೆ, ಇಡ್ಲಿ ಸಿಗುತ್ತದೆ ಎನ್ನುವುದನ್ನು ಅವರು ಬಲ್ಲವರಾಗಿದ್ದರು. ಸ್ವತಃ ಅವರಿಗೆ ನಾಲಗೆಯ ಬಯಕೆ ಕಡಿಮೆ. ದೇಹವು ಬಯಸಿದರೂ, ಅದನ್ನು ಪೂರೈಸಿಕೊಳ್ಳಲಾಗದ ಹಲವಾರು ಕ್ಷಣಗಳು ಅವರ ಬದುಕಿನಲ್ಲಿ ಘಟಿಸಿವೆ. ತಿಂದಿಗೆ ಕರೆದುಕೊಂಡು ಹೋದವರಿಗೆ ತಿನ್ನಿಸುವುದು ಇವರ ಸುಖದ ಕೆಲಸಗಳಲ್ಲಿ ಒಂದಾಗಿತ್ತು. ಕರ್ನಾಟಕದ ಆಯುರ್ವೇದ ವೈದ್ಯ ಪದ್ಧತಿಯ 'ತಾರಾನಾಥ ಔಷಧಾಲಯ' ಅವರ ಆಪ್ತ ಸಖಿಯಂತೆ ಇತ್ತು. ಅವರು ಅಶ್ವಗಂಧವನ್ನು ಪೀಡಿಸಿ ಪಡೆಯುತ್ತಿದ್ದುದ್ದನ್ನು ನಾನು ಕಂಡು ಬಲ್ಲೆ. ಅವರ ಮೂಲಕ 'ಭೃಂಗರಾಜ'ದ ಪರಿಚಯ ನನಗೆ ಆಗಿತ್ತು. ಕನ್ನಡದ ದೇಸೀ ಪದ್ಧತಿಗಳನ್ನು ಕಿರಂ ಅವರು ಚೆನ್ನಾಗಿ ತಿಳಿದಿದ್ದರು. ಅವರ ತಂದೆ ರಂಗಪ್ಪ ಊದಿನಕಡ್ಡಿಯಲ್ಲಿ ಸೂಕ್ಷ್ಮ ಸುಗಂಧವನ್ನು ಬೆರೆಸಿ ರಾಷ್ಟ್ರಖ್ಯಾತಿಯ ಸುಗಂಧಕಡ್ಡಿಗಳನ್ನು ಪ್ರಯೋಗದ ಮೂಲಕ ಕಂಡುಹಿಡಿದ ಖ್ಯಾತಿ ಇದ್ದವರು. ನೋಡಲು ಚಡ್ಡಿ ಹಾಕಿ ಸಾಮಾನ್ಯನಾಗಿಯೇ ಇದ್ದ ಅವರು ಈ ಪ್ರತಿಭೆಯನ್ನು ಪಡೆದದ್ದು- ಅದರ ಸೂಕ್ಷ್ಮಗಳನ್ನು ಕಿರಂ ಕಲಿಯಲು ಪ್ರಯತ್ನಿಸಿದ್ದರು.

ಕನ್ನಡವೆಂದರೆ ಪ್ರಾಣವೆಂಬಂತೆ ಇದ್ದ ಕಿರಂ ಕೊನೆಗೂ, ಹೀಗೆಯೇ ಕನ್ನಡಕ್ಕಾಗಿ ತನ್ನ ಜೀವವನ್ನು ಕಾವ್ಯದ ಮೂಲಕ ತೆತ್ತ ಬೇಂದ್ರೆಯವರ, ಶ್ರಾವಣ ಕಾಲದ ಕಾವ್ಯದ ಬಗ್ಗೆ ಮಾತನಾಡುತ್ತಲೇ ಅಂತಿಮ ಉಸಿರು ಎಳೆದರು. ಲೌಕಿಕ ಜೀವನದ ಪ್ರೇಮದ ಆತಂಕಗಳನ್ನು ಕಾವ್ಯವಾಗಿಸಿದ ಬೇಂದ್ರೆ, ರಾಜಕಾರಣದ ಅಧಃಪತನವನ್ನು ಬಿಸಿ ಉಸಿರಿನಿಂದಲೇ ಎಂಬಂತೆ ಬರೆಯುತ್ತಿದ್ದ ಅಡಿಗ, ಲೌಕಿಕದಲ್ಲಿ ಆಧ್ಯಾತ್ಮಿಕ ಬಯಕೆ ಅನಿವಾರ್ಯವೆನಿಸಿದ ಅಲ್ಲಮ- ಈ ಮೂವರು ಕಿರಂ ಅವರ ಪ್ರಾಣದೈವದಂತೆ ಇದ್ದರು. ಇವರ ಜಪವನ್ನು ಮಾಡದ ದಿನವೇ ಇಲ್ಲದಂತೆ ಇದ್ದ ಕಿರಂ ಕಾವ್ಯವನ್ನು ರಸದಂತೆ, ಮಂತ್ರದಂತೆ ಅಂತರ್ಯದಲ್ಲಿ ರಕ್ತಗತವಾಗಿಸಿಕೊಂಡವರು. ಕನ್ನಡದ ಚೈತನ್ಯ ಎಲ್ಲಿದೆ, ಅದನ್ನು ಹುಡುಕುವುದು ಹೇಗೆ ಎನ್ನುವುದನ್ನು ಸದಾಕಾಲ ಸಾರುತ್ತ ಹೋದವರು. ಅವರ ಅಂತಿಮಯಾತ್ರೆಯಲ್ಲಿ ಬೇಂದ್ರೆಯವರ ಶ್ರಾವಣದ ಕವನಗಳೇ ಕಣ್ಣೀರು ಕರೆದಂತೆ, ನಿಧಾನವಾಗಿ ಮಳೆ ಅವರ ಮೇಲೆ ಬೀಳುತ್ತಿತ್ತು.

ಈಗ ಅವರಿಲ್ಲದ ನನಗೆ, ನನ್ನ ಆತ್ಮದ ಒಂದು ಭಾಗವೇ ಇಲ್ಲದಂತೆ ಶೂನ್ಯ ಆವರಿಸಿದೆ. ವಿಸ್ತಾರವಾದ ಶೂನ್ಯವನ್ನು ಬಿಟ್ಟು ಬಯಲಿಗೆ ನಡೆದಿದ್ದಾರೆ ಕಿರಂ, ಜೋಳಿಗೆಯನ್ನು ಹಾಕಿಕೊಂಡು....

● ಬಸವರಾಜ ಕಲ್ಗುಡಿ

ಕಿ.ರಂ. ಮೂರು ಪಾನ ಪ್ರಸಂಗಗಳು




ಕಿರಂ ತಮ್ಮ ಮಾನವೀಯ ಪ್ರೀತಿಗೂ, ...ದ ಹುಚ್ಚಿಗೂ ಹೆಸರಾಗಿರುವಂತೆ ...ಪ್ರಿಯತೆಗೂ ಖ್ಯಾತರಾಗಿದ್ದರಷ್ಟೆ. ಕಾವ್ಯ ... ಪಾನ ಎರಡೂ ಅವರಿಗೆ ಅಮಲಿನ ...ಗಳೇ ಆಗಿದ್ದವು. ಇವು ರಾತ್ರಿಗೋಷ್ಠಿಗಳ ...ಲ್ಲಿ ಪರಸ್ಪರ ಬೆರೆತು ಉಕ್ಕಿ ನೊರೆಗರೆಯು...ು. ಕಿರಂ ಅವರ ವಿದ್ವತ್ತು, ಮನುಷ್ಯ... ಹಾಸ್ಯಪ್ರಜ್ಞೆಗಳ ಭಾಗವಾಗಿಯೇ ಈ ...ಷ್ಠಿಗಳೂ ಇದ್ದವು. ಅಂತಹ ಮೂರು ...ಗಗಳು ನೆನಪಾಗುತ್ತಿವೆ.

...1992. ಕರ್ನಾಟಕದ ನಾನಾ ಭಾಗ...ದ ಬಂದಿದ್ದ ನಾವು ಕೆಲವರು, ಹೊಸ...ಯ ಯಾವಯಾವುದೊ ಗಲ್ಲಿಗಳಲ್ಲಿ ...ವಾಗಿದ್ದೆವು. ನಾನು ಮತ್ತು ಬಾನು, ... ಮೂರು ದಿನ ಒಟ್ಟಿಗೆ ರಜೆ ಬರಲು, ಬೆಂಗಳೂರಿಗೆ ...ಗಲು ಹೊಸಪೇಟೆ ಬಸ್‌ಸ್ಟ್ಯಾಂಡಿನಲ್ಲಿ ಬಸ್ಸಿಗೆ ಕಾಯು...ು. ಡಿಸೆಂಬರಿನ ಚಳಿ. ರಾತ್ರಿ 11 ಗಂಟೆ ಆಗಿತ್ತು, ...ಳಗೆ ಹಾದಿರುವ ಬಸವ ಕಾಲುವೆಯ ಪಕ್ಕದ ... ಮನೆಯಲ್ಲಿ ಬಾಡಿಗೆಗಿದ್ದ ಕಿರಂ, ಗೋಷ್ಠಿ ...ಗಿಸಿಕೊಂಡು, ಮೈಮೇಲೆ ಒಂದು ಶಾಲನ್ನು ...ದಿಕೊಂಡು, ಬಸ್‌ಸ್ಟ್ಯಾಂಡಿನ ಮೂಲಕ ಹಾದು, ತಮ್ಮ ...ಯುತ್ತ ಒಬ್ಬರೇ ಹೊರಟಿದ್ದರು. ನಾನಿದ್ದವನು 'ಇದು ...ಡುವ ಸಮಯವಲ್ಲ' ಎಂದುಕೊಂಡು ಅಡಗಲು ...ಿದೆ. ಆದರೆ ಅವರು ನನ್ನನ್ನು ಹೇಗೊ ಪತ್ತೆ ಮಾಡಿ, ... ಬಂದು, "ಶರಣು ಶರಣಾರ್ಥಿ ಶಿಶುನಾಳ ...ಬರಿಗೆ" ಎಂದು ನೆಲ ಮುಟ್ಟಿ ನಮಸ್ಕಾರ ಮಾಡಿದರು. ... ಮುಂದೆ ಬಂದು ನಾಟಕೀಯವಾಗಿ ನೆಲವನ್ನು ...ಗಳಿಂದ ಮುಟ್ಟಿ ನಮಸ್ಕರಿಸಿದೆ. "ಏನ್ರೀ, ಬಚ್ಚಿಟ್‌ಕೋತಿ...?" ಎಂದು ಗದರಿಸಿ, ನಮ್ಮ ಪ್ರಯಾಣದ ಬಗ್ಗೆ ಕೇಳಿ...ದುಕೊಂಡರು. ಆಹೊತ್ತು ಏನೊ ಕಾರಣದಿಂದ ...ಾಣಿಕರ ಜಂಗುಳಿಯಿತ್ತು, ಎರಡು ಮೂರು ಬಸ್ಸು...ದೂ ಸೀಟು ಸಿಕ್ಕಿರಲಿಲ್ಲ. ನಾನು ಬಸ್ಸು ಬಂದೊಡನೆ ...ಗಳ ಬಳಿ ಹೋಗಿ, ಒಂದು ಟವೆಲ್ಲನ್ನು ಹಿಡಿದು ...ುದಂತೆ ಹಾರಿಸುತ್ತ ಸೀಟು ಹಿಡಿಯಲು ಯತ್ನಿಸುತ್ತಿದ್ದೆ. ...ಬಾನುವನ್ನು ಮಗಳಂತೆ ಪ್ರೀತಿಸುತ್ತಿದ್ದ ಅವರು "ನಿಮ್ಮನ್ನು ... ಹತ್ತಿಸಿಯೇ ಹೋಗುತ್ತೇನೆ" ಎಂದು ನಿಂತರು. ...ು ನಡೀರಿ ಸಾರ್, ರಾತ್ರಿ ಸುಮಾರು ಹೊತ್ತಾಗಿದೆ" ...ದೂ ಕೇಳಲಿಲ್ಲ, ಬಸ್ಸು ಬಂದೊಡನೆ ಸೀಟು ಹಿಡಿಯಲು ... ಶಾಲಿನ ಮೂಲಕ ಯತ್ನಿಸತೊಡಗಿದರು.

...11 ಗಂಟೆ ಹೊತ್ತಿಗೆ ಗಂಗಾವತಿಯಿಂದ ಸೂಪರ್ ...ಒಂದು ಬಂದಿತು. ಅದೂ ತುಂಬಿತುಳುಕುತ್ತಿತ್ತು, ...ಸಲ ಮಾತ್ರ ಕಿರಂ ಮುಂಭಾಗದ ಚಕ್ರದ ಮೇಲೆ ...ತ್ತಿ, ಡ್ರೈವರ್ ಬಾಗಿಲಿನಿಂದ ಒಳಗೆ ನುಸುಳಿದವರೇ, ...ರ್ ಹಿಂದುಗಡೆ ಇರುವ ಎರಡು ಸೀಟುಗಳ ಮೇಲೆ ... ಶಾಲನ್ನು ಹಾಸಿ, ಕಿಟಕಿಯೊಳಗಿಂದ ತಲೆಹಾಕಿ ನಮ್ಮನ್ನು ...ಸಿ ಕರೆದರು. ನಮ್ಮ ಬ್ಯಾಗುಗಳನ್ನು ಕಿಟಕಿ ಮೂಲಕ ...ದುಕೊಂಡು ಸೀಟಿನ ಮೇಲಿಟ್ಟರು. ನಾವು ಹೋಗಿ ...ೆವು. ಆದರೆ ಅವು ಆಗಲೇ ರಿಸರ್ವ್ ಆಗಿದ್ದ ಸೀಟು... ಸೀಟುಗಳ ಮಾಲೀಕರು ಮೂತ್ರಕ್ಕೆಂದು ಕೆಳಗಿಳಿದು ...ಗಿದ್ದರು. ಕಂಡಕ್ಟರ್ ನಮ್ಮನ್ನು ನೋಡಿದವನೇ "ಏಳ್ರೀ ಸರ, ಇವಕ್ಕ ರಿಜರ್ವೇಶನ್ ಆಗ್ಯದ" ಎಂದು ಎಬ್ಬಿಸಿದನು. ಮೇಷ್ಟರಿಗೆ ಭಯಂಕರ ಸಿಟ್ಟು ಬಂದಿತು. "ಏ ರಹಮತ್ ನಾನು ಹೇಳ್ತಿದ್ದೇನೆ, ಕೂತ್ಕೊಳ್ರಿ, ಏಳಬೇಡಿ" ಎಂದು ಅಪ್ಪಣೆ ಮಾಡಿ, ಕಂಡಕ್ಟರ್ ಜತೆ ಜಗಳಕ್ಕೆ ನಿಂತರು. "ಹೆಂಗಯ್ಯ ಎಬ್ಬಿಸಿದೆ? ಇವರು ಕನ್ನಡದ ವಿಮರ್ಶಕ. ದೂರದ ಊರುಗಳಿಂದ ಬಂದು ವಿಶ್ವವಿದ್ಯಾಲಯದಲ್ಲಿ ಕನ್ನಡದ ಕೆಲ್ಸ ಮಾಡ್ತಿದೀವಿ. ನಿನಗೆ ಎರಡು ಸೀಟು ಕೊಡೋಕೆ ಆಗಲ್ವೇ? ಎಮ್ಮೆಲ್ಲೆ ಸೀಟುಗಳು ಎಲ್ಲಿದಾವೆ, ಯಾರಿಗೆ ಕೊಟ್ಟೆ?" ಎಂದು ಜಗಳ ಶುರುಮಾಡಿದರು. ಕಂಡಕ್ಟರಿಗೆ ವಿಮರ್ಶಕ ಎಂದರೆ ಅರ್ಥವಾಗಲಿಲ್ಲ. ಅವನು ನನ್ನತ್ತ ನೋಡುತ್ತ "ಏ, ನಿಮಗ ಗೊತ್ತಾಗಲ್ವೇನ್ರಿ ಸೀಟಿಲ್ಲ ಅಂದರ. ರಿಸರ್ವೇಶನ್ ಸೀಟವು. ನನ್ನ ತಲಿ ತಿನ್ನಬ್ಯಾಡ್ರಿ, ಏಳ್ರಿ" ಎಂದು ಹೇಳಿದ. ನಾವು ಬೇರೆದಾರಿಯಿಲ್ಲದೆ ಕೆಳಕ್ಕಿಳಿದೆವು. ಮೇಷ್ಟರಿಗೆ ರೋಷಾವೇಶ ಬಂದಿತು. "ಅವರನ್ನ ಯಾಕೆ ಕೆಳಗಿಳಿಸಿದೆ? ಬಸ್ಸನ್ನು ಹೆಂಗೆ ಮುಂದಕ್ಕೆ ಬಿಡ್ತೀಯಾ ನೋಡ್ತೀನಿ" ಎಂದು ಬಸ್ಸಿನ ಮುಂದೆ ಧರಣಿ ಆರಂಭಿಸಿದರು. ಜನರೆಲ್ಲ ಬಸ್ಸಿನ ಮುಂದೆ ಹಾವಾಡಿಗರ ಆಟಕ್ಕೆ ನೆರೆದಂತೆ ಸುತ್ತುವರೆದು ಮಂಡಲ ಮಾಡಿದರು. ನಡುವೆ ಮೇಷ್ಟರ ಪ್ರತಿಭಟನೆ. ನಾನು 'ದೇವರೇ! ಭೂಮಿ ಬಾಯಿಬಿಡಬಾರದೇ' ಎಂದು ಚಡಪಡಿಸುತ್ತ ಮೇಷ್ಟ್ರಿಗೆ ಸಮಾಧಾನ ಮಾಡುತ್ತ "ಸಾರ್ ನಾನು ಬೇರೆ ಬಸ್ಸಿಗೆ ಹೋಗ್ತೀನಿ" ಎಂದರೂ ಕೇಳಲಿಲ್ಲ, ಇದೇ ಬಸ್ಸಿಗೆ ಹೋಗಬೇಕು ಎಂದು ಹಠ ಹಿಡಿದರು. ಬಸ್ಸು ಹೊರಡುವ ಟೈಮು ಮೀರುತ್ತಿತ್ತು, ಪ್ರಯಾಣಿಕರು ನಮ್ಮ ಮೇಲೆ ಸಿಡುಕುತ್ತಿದ್ದರು. ಅಷ್ಟರಲ್ಲಿ ಡ್ರೈವರ್ ಬಂದು ಕಂಡಕ್ಟರ್ ಕಿವಿಯಲ್ಲಿ ಏನೋ ಹೇಳಿದನು. ಆಗ ಕಂಡಕ್ಟರ್ "ಸದ್ಯ ಹತ್ಕೋರಿ, ಮುಂದೆ ಕೂಡ್ಲಿಗಿಗೆ ಎರಡು ಸೀಟು ಖಾಲಿಯಾಗ್ತವ" ಎಂದು ನಮ್ಮನ್ನು ಹತ್ತಿಸಿಕೊಂಡನು. ಬಸ್ಸು ಹೊರಟಿತು. ಮೇಷ್ಟರು ನಮಗೆ ಸ್ವರ್ಗದಲ್ಲಿ ಸೀಟು ದೊರಕಿಸಿ ಕೊಟ್ಟ ಸಂತೋಷದಲ್ಲಿ ಕೈಬೀಸಿದರು. ಈ ಹಗರಣಕ್ಕೆ ಕಾರಣವಾದ ನಮ್ಮನ್ನು ಪ್ರಯಾಣಿಕರು ದುರುದುರು ನೋಡತೊಡಗಿದರು. ಧರ್ಮದೇಟು ಬೀಳಲಿಲ್ಲ ಎಂಬುದು ನಮ್ಮ ಪುಣ್ಯವಾಗಿತ್ತು, ನಾವು ಅವರಿಗೆ ಸುಮ್ಮನೆ ಬೆನ್ನುಕೊಟ್ಟು ನಿಂತುಬಿಟ್ಟೆವು. ಬೆಂಗಳೂರಿನ ತನಕ ಯಾವ ಸೀಟುಗಳೂ ಖಾಲಿಯಾಗಲಿಲ್ಲ, ಕಂಡಕ್ಟರ್ ನಮ್ಮ ಮೇಲೆ ಸರಿಯಾಗಿ ಸೇಡು ತೀರಿಸಿಕೊಂಡಿದ್ದನು.

ಇನ್ನೊಂದು ದಿನ. ಅದು ಬಹುಶಃ ನಮಗೆ ಮೂರ್ನಾಲ್ಕು ತಿಂಗಳ ಬಳಿಕ ಮೊದಲನೇ ಸಂಬಳ ಬಂದ ದಿನವಿರಬೇಕು. ಆ ದಿನದ ಪಾರ್ಟಿಯಲ್ಲಿ ಮೇಷ್ಟರ ಮಾತು ಮಾತು ಮಾತು! ತಮಾಶೆ, ನಗುಗಳಲ್ಲಿ ಬಹಳ ಹೊತ್ತು ಕಳೆಯಿತು. ಕಣ್ಣು ಎಳೆಯಲಾರಂಭಿಸಿದವು. ಆದರೆ ಮೇಷ್ಟರ ಮಾತು ನಿಲ್ಲುತ್ತಿಲ್ಲ, ಮತ್ತೆಮತ್ತೆ ಪೆಗ್ಗುಗಳಿಗೆ ಆರ್ಡರ್ ಮಾಡುತ್ತಿದ್ದಾರೆ; ಬಂದ ಒಂದು ಪೆಗ್ಗನ್ನು ಕಳಪೆ ಕೊಟ್ಟಿದ್ದೀಯಾ ಎಂದು ಗಾಳಿಗೆ ಕಾರಂಜಿ ಹಾರಿಸುತ್ತಿದ್ದಾರೆ. ಬಾರು ಮುಚ್ಚುವ ಹೊತ್ತು ಬಂದಿತು. ಮೇಷ್ಟರು ಆ ಹೊತ್ತಿನಲ್ಲಿ ಬ್ಯಾಗಿಗೆ ಕೈಹಾಕಿ 'ಕುಮಾರವ್ಯಾಸ ಭಾರತ' ತೆಗೆದು ಯಾವುದೊ ಒಂದು ಪದ್ಯ ಓದಬೇಕೆಂದು ಹುಡುಕಿದರು. ಪದ್ಯವೇನೊ ಸಿಕ್ಕಿತು. ಬಾರಿನ ಮಂದಬೆಳಕಿನಲ್ಲಿ ಅಕ್ಷರಗಳು ಕಾಣುತ್ತಿಲ್ಲ, ಆದರೂ ಓದುವುದನ್ನು ಬಿಡುತ್ತಿಲ್ಲ. "ಏ ಲೈಟ್ ಹಾಕಯ್ಯ, ಕಾವ್ಯ ಓದುವಾಗ ಬೆಳಕು ಇರಬೇಕು ಅಂತ ಗೊತ್ತಿಲ್ಲವೇನಯ್ಯಾ!" ಎಂದು ವೈಟರನಿಗೆ ಆವಾಜ್ ಹಾಕಿದರು. ಅವನು ಹೋಗಿ ಮ್ಯಾನೇಜರನ್ನು ಕರೆದುಕೊಂಡು ಬಂದ. ಮ್ಯಾನೇಜರು "ಇಲ್ಲಿ ಲೈಟು ಹಾಕಲು ಸಾಧ್ಯವಿಲ್ಲ, ಇಲ್ಲಿ ಹೊರಗೆ ಬನ್ನಿ ಬೆಳಕಿದೆ" ಎಂದರೂ ಮೇಷ್ಟರು ಕೇಳಲಿಲ್ಲ, ಇಲ್ಲಿಗೇ ದೀಪದ ವ್ಯವಸ್ಥೆ ಮಾಡಬೇಕೆಂದು ಹಠ ಮಾಡಿದರು. ನಾವು ಕೂಡ "ದೊಡ್ಡ ವಿದ್ವಾಂಸರು ಅವರು. ಒಂದು ಬಲ್ಬ್ ಹಾಕೋಕೆ ಆಗೋಲ್ವೇನ್ರಿ?" ಎಂದು ದನಿಗೂಡಿಸಿದೆವು. ಅವನು ಹೋಲ್ಡರಿಗಿದ್ದ ಮಂದದೀಪ ತೆಗೆದು ಬೆಳಕಿನ ದೀಪ ಹಾಕಿಸಿದನು. ಮೇಷ್ಟರು "ಆಹಾ ಪ್ರಾತಃಕಾಲದಲ್ಲಿ



ಬೆಳಗಿನ ದಾಹ!" ಎಂದು ಹೇಳಿ ಐದಾರು ಪದ್ಯ ಓದಿ ಮುಗಿಸಿ ವಿವರಿಸಿದರು. ವೈಟರುಗಳು ನಮ್ಮನ್ನು ಹೇಗೊ ಮಾಡಿ ಹೊರಗೆ ಕಳಿಸುವಾಗ ಕಲ್ಲೂ ನೀರೂ ಕರಗುವ ಸಮಯ.

ಇಂತಹ ಹಲವಾರು ಘಟನೆಗಳನ್ನು ಸರಮಾಲೆ ಮಾಡಿ ಹೇಳಬಹುದು. ಮೇಷ್ಟರು ಪಾನಗೋಷ್ಠಿಗಳಲ್ಲಿ ಭಾವಾವೇಶಕ್ಕೆ ಒಳಗಾದಾಗ, ಒಳನೋಟಗಳು ಬಾಣಬಿರುಸುಗಳಲ್ಲಿ ಹಾರುವ ಬೆಳಕಿನ ಕಿಡಿಗಳಂತೆ ಚಿಮ್ಮುತ್ತಿದ್ದವು. ಕೆಲವು ಸಲ ಅವರ ರಂಪದಿಂದ ಪಾರ್ಟಿಗಳು ಹದಗೆಟ್ಟು ಹೋಗುತ್ತಿದ್ದವು. ಅವರ ನಾಯಕತ್ವದ ಗೋಷ್ಠಿಗಳಲ್ಲಿ ಸಾಮಾನ್ಯವಾಗಿ ಮೂರು ಸಂಗತಿಗಳಿರುತ್ತಿದ್ದವು. 1. ತಮಗೆ ಬೇಕಾದವರ ಮೇಲೆ ಪ್ರೀತಿಯ ಮಳೆಯನ್ನು ಸುರಿಸುವುದು ಅರ್ಥಾತ್ ಕರಡಿಪ್ರೀತಿ. 2. ತಮಗೆ ಇಷ್ಟವಾದ ಕವಿಯ ಕಾವ್ಯವನ್ನು ಕುರಿತು ಚರ್ಚಿಸುವುದು ಅರ್ಥಾತ್ ಕಾವ್ಯೋತ್ಸವ. 3. ತಮ್ಮ ಎದುರಾಳಿಗಳನ್ನು ಗಾಳಿಯಲ್ಲಿ ಆವಾಹಿಸಿ ಅವರನ್ನು ಬಗೆಬಗೆಯಲ್ಲಿ ಚುಚ್ಚಿ ಗೇಲಿ ಮಾಡುವುದು ಅರ್ಥಾತ್ ಶತ್ರುಸಂಹಾರ. ಮೇಷ್ಟರ ಕೆಲವು ಶಿಷ್ಯರು, ಅವರನ್ನು ಪ್ರೀತಿಸುತ್ತ ವಿದ್ವತ್ತಿನಲ್ಲಿ ಅಲ್ಲದಿದ್ದರೂ ಕುಡಿತದಲ್ಲಿ ಅನುಕರಿಸಿದ್ದುಂಟು. ಇದು ನನ್ನೊಬ್ಬ ಸ್ನೇಹಿತರಲ್ಲಿ ಎಲ್ಲಿತನಕ ಹೋಯಿತೆಂದರೆ, ಅವರು ಮಾತಾಡುವಾಗ ಮೇಷ್ಟರಂತೆಯೇ ಬೆರಳು ಹೊಸೆಯುವುದನ್ನೂ ರೂಢಿಸಿಕೊಂಡರು. ತಮ್ಮ ಕುಡಿತವನ್ನು ಸಮರ್ಥಿಸಿಕೊಳ್ಳುವುದಕ್ಕೆ "ನೋಡಿ, ಮೇಷ್ಟರು ಎಷ್ಟೊಂದು ಕುಡೀತಾರೆ. ಇನ್ನೂ ಹೆಂಗಿದ್ದಾರೆ?" ಎಂದು ಹೇಳಲಾರಂಭಿಸಿದರು.

ಇಂತಹವರ ತರ್ಕಕ್ಕೆ ಪುರಾವೆ ಒದಗಿಸುವಂತೆ, ಮೇಷ್ಟರು ಚಂದವಾಗಿ ಓಡಾಡಿಕೊಂಡಿದ್ದರು. ಈಚೆಗೆ ಅವರ ಕೆನ್ನೆಗಳು ಹೊಳೆಯುತಿದ್ದವು. ಯೌವನ ಬರುತ್ತಿದೆಯೇನೊ ಅನಿಸುತ್ತಿತ್ತು, ಅವರು ಪಂಪನಂತೆ ಕುರುಳುಗಳ ಸವಣ. ಕೊಂಕಾಗಿ ಇಳಿಬಿದ್ದ ತಲೆಕೂದಲು ಅತ್ತಿತ್ತ ಹೊಯ್ದಾಡುವಂತೆ ಕೊರಳನ್ನು ಸಟ್ಟನೆ ತಿರುಗಿಸುವ ಅವರ ಭಂಗಿಯು, ಜನರನ್ನು ಸಮ್ಮೋಹನಗೊಳಿಸಿ ವಶಪಡಿಸಿಕೊಳ್ಳುವ ಮಾಟಗಾರನದಾಗಿತ್ತು,

ಎರಡು ತಿಂಗಳ ಹಿಂದೆ ಅನಿಸುತ್ತದೆ. ಕಿರಂ ಅವರಿಗೆ ಬೆಂಗಳೂರಿನಲ್ಲಿ 'ಗ್ರಾಮಭಾರತ' ಎಂಬ ಸಂಘಟನೆಯವರು ಅಭಿನಂದನಾ ಕಾರ್ಯಕ್ರಮ ಏರ್ಪಡಿಸಿದ್ದರು. ಅದರಲ್ಲಿದ್ದವರು ಹೆಚ್ಚಿನವರು ಸಾಹಿತ್ಯದವರಲ್ಲ, ಕಾಮರ್ಸ್, ವಿಜ್ಞಾನ ಇತ್ಯಾದಿ ವಿಷಯಗಳಲ್ಲಿ ಅಧ್ಯಾಪಕರು, ಇಂಜಿನಿಯರುಗಳು. ಹೆಚ್ಚಿನವರು ತೀರ್ಥಹಳ್ಳಿ ಕಡೆಯವರು. ಅವರಿಗೆ ಕಿರಂ ಮೇಲೆ ಅಭಿಮಾನ. ಅಭಿನಂದನಾ ಭಾಷಣ ಮಾಡಲು ನಾನು ಹಂಪಿಯಿಂದ ಹೋಗಿದ್ದೆ. ಸಭೆಯ ಅಧ್ಯಕ್ಷತೆಯನ್ನು ಅನಂತಮೂರ್ತಿಯವರು ವಹಿಸಿದ್ದರು. ನಮ್ಮ ಕಾಲದ ಇಬ್ಬರು ಶ್ರೇಷ್ಠ ಅಧ್ಯಾಪಕರನ್ನು ಒಟ್ಟಿಗೆ ನೋಡುತ್ತ ನನಗೆ ಸಂತೋಷವಾಗಿತ್ತು. ಕಿರಂ ಅವರನ್ನು ನಾನು ನೋಡಿದ್ದು ಅದೇ ಕೊನೆ. ಅನಂತಮೂರ್ತಿಯವರು ಚುಟುಕಾದ ಭಾಷಣ ಮಾಡಿ, "ಕಿರಂ ತನ್ನ ಕಾವ್ಯದ ಹುಚ್ಚಿನಿಂದ ನಮ್ಮನ್ನೆಲ್ಲ ಬೆಳೆಸಲಿ, ಆದರೆ ಸ್ವಲ್ಪ ಕುಡಿತ ಕಡಿಮೆ ಮಾಡಲಿ" ಎಂದು ಹೇಳಿ ಮುಗಿಸಿದರು. ಆ ತುಂಬಿದ ಸಭೆಯಲ್ಲಿ ಕಿರಂ ಅವರ ಕುಡಿತದ ಪ್ರಸ್ತಾಪ ಬೇಡವಾಗಿತ್ತೇನೊ, ಇದು ಮೇಷ್ಟರಿಗೆ ಕಿರಿಕಿರಿ ತಂದಿರಬಹುದೇನೊ ಎಂದು ನಾನು ಶಂಕಿಸಿಕೊಂಡು ಕೂತಿದ್ದೆ. ಆದರೆ ಕಡೆಗೆ ಮಾತಾಡಿದ ಕಿರಂ, ಅನಂತಮೂರ್ತಿಯವರ ಸಲಹೆಗೆ ಕೊಟ್ಟ ಜವಾಬೊ ಎನ್ನುವಂತೆ, ಪಂಪನ ಕಾವ್ಯ ತೆಗೆದು ಅದರಿಂದ ಸ್ವರ್ಗದ ವರ್ಣನೆಯಿರುವ ಭಾಗವನ್ನು ಓದಿದರು. ಅದರಲ್ಲಿ ಇದ್ದುದು ಸ್ವರ್ಗದಲ್ಲಿ ಎಷ್ಟು ಬಗೆಯ ಮದ್ಯಗಳಿವೆ ಎಂಬುದರ ವರ್ಣನೆ!

ಕಾರ್ಯಕ್ರಮ ಮುಗಿದ ಬಳಿಕವೂ ಗೋಷ್ಠಿಯಿತ್ತು, ಆದರೆ ನನಗೆ ಹೊಸಪೇಟೆ ಬಸ್ಸು ಹಿಡಿಯಬೇಕಿತ್ತು. ಅವತ್ತು ಬೆಂಗಳೂರಿನಲ್ಲಿ ಭೀಕರ ಮಳೆ. ಮೇಷ್ಟರಿದ್ದ ಕಾರು ಹೋಟೆಲಿಗೆ ಬರುವುದರೊಳಗೆ ಗಬಗಬ ತಿಂದವನೇ ಬಸ್ಸುನಿಲ್ದಾಣಕ್ಕೆ ಓಡಿಬಂದೆ. ನಾನು ಸೀಟು ರಿಸರ್ವ್ ಮಾಡಿದ್ದ ರಾಜಹಂಸ ಹೊರಟುಹೋಗಿತ್ತು. ಏನೋ ಮಾಡಿ, ಬ್ಯಾಗನ್ನು ಕಿಟಕಿಯಿಂದ ತೂರಿಸಿ ಡ್ರೈವರ್ ಹಿಂಬದಿಯ ಸೀಟನ್ನು ವೇಗದೂತದಲ್ಲಿ ಹಿಡಿದೆ. ಮೇಷ್ಟರ ಜತೆ ಕಾಲಕಳೆಯುವ ಅವಕಾಶ ಕಳೆದುಕೊಂಡೆ ಎಂದು ಹಳಹಳಿಸುತ್ತ ಊರು ಮುಟ್ಟಿದೆ. ಈಗ ಅವರ ಸಾವಿನ ಸುದ್ದಿ ಬಂದೆರಗಿತು.

ಮೇಷ್ಟರು ಸ್ವರ್ಗಕ್ಕೇನಾದರೂ ಹೋಗಿದ್ದರೆ, ಬಹುಶಃ ಪಂಪನ ಕಾವ್ಯದಲ್ಲಿ ಬಣ್ಣನೆಗೊಂಡಿರುವ ಸ್ವರ್ಗಕ್ಕೇ ಹೋಗಿರಬಹುದು. ಅಲ್ಲಿ ಪಂಪನ ಜತೆ ಕುಡಿದು ಮಾತಾಡುತ್ತಲೊ 'ಆದಿಪುರಾಣ' ಓದಬೇಕು ಬೆಳಕು ಹಾಕ್ರಿ ಎಂದು ಜೋರು ಮಾಡುತ್ತಲೊ ಇರಬಹುದು. ನಾವೂ ಬಂದು ಸೇರುವತನಕ ಅವರು ಅಲ್ಲಿ ಬೇಕಾದಷ್ಟು ಕಾವ್ಯ ಓದಿಕೊಂಡಿರಲಿ. ಆದರೆ ಸ್ವಲ್ಪ ಕುಡಿತ ಕಡಿಮೆ ಮಾಡಲಿ. ನಮಗೂ ನಾಲ್ಕು ತೊಟ್ಟು ಉಳಿಸಿರಲಿ.

• ರಹಮತ್ ತರೀಕೆರೆ



...ಂಕೇಶರೊಂದಿಗೆ....



ಲಂಕೇಶ್-ಏಳರ ಕಾರ್ಯಕ್ರಮದಲ್ಲಿ ಗೌರಿ ಜೊತೆ....



ಬೇಂದ್ರೆ ಕಾವ್ಯ ಕುರಿತ ಕೊನೆಯ ಉಪನ್ಯಾಸ...


ಕಿ.ರಂ. ಎಂದರೆ ಕಿ.ರಂ.


...ಂಬೂರಿ ಸ್ವರವನ್ನು
...ುರುಹರಿತೇ ನುಡಿಸಿದವರು
...ಲ್ಲಮ-ಶರೀಫ-ಬೇಂದ್ರೆಗಳನ್ನು
...ರಸ ಸಂಗೀತದ ಸ್ವರ ಮೇಳದ ಶೃತಿಯಾಗಿಸಿ
...ದದಲ್ಲಿ ಬಿಗಿದು ಕಟ್ಟಿ
...ಸ್ತುತಿಯ ಸುಮ್ಮನೆ ಒಂದು ಬೆರಳಿಂದ
...ೀಗೆ ಮೀಟಿದರೂ ಸಾಕು
...ೌನವೇ ಮೌನ ತುಂಬಿರುವ ಕತ್ತಲಲ್ಲೂ
...ಳಕ ಇನಿದನಿಯ ಕಂಪನದ ಸಂಚಾರ

ಕವಿತೆ ಹುಟ್ಟಿದ ಕಣ್ತುಂಬುವ ಘಳಿಗೆಯನ್ನು
ಅದಿರುವಂತೆಯೇ ಒಪ್ಪಿಕೊಂಡು
ಕಾವ್ಯದ ನಭೋ ಮಂಡಲದಲ್ಲಿ
ಅದಕ್ಕೊಂದಿಷ್ಟು ಜಾಗ ಒದಗಿಸಿ
ಕವಿತೆಯೆಂಬ ಮಗುವನ್ನು ಹಿಡಿದೆತ್ತಿ ಆಲಂಗಿಸಿ
ಹಾಲೂಡಿಸಿ ತಾಯಿಯಾಗಿ-ಬೆಳೆಸುತ್ತ ತಂದೆಯಾಗಿ
ಈ ಕ್ಷಣಕ್ಕೆ ಸಜ್ಜಾಗಿ
ಕಾವ್ಯದ ಘನತೆಯನ್ನು ಕೊನೆ ನಿಮಿಷಕ್ಕೂ ಉಸಿರಾಡಿ
ಮೀಟುತ್ತಿರುವ ಬೆರಳು

ದಣಿವಾಯಿತೆಂದು ನಿಲ್ಲಿಸಿರುವಾಗ
ಉಂಟಾಗಿರುವ ಶೂನ್ಯ ವೇಳೆ
ಇದುವರೆಗೂ ಕೇಳಿದ
ಜಂಗಮ ಸ್ವರವನ್ನೆಲ್ಲಾ ಧ್ಯಾನಿಸುತ್ತ
ಇರುವ ವೇಳೆ
ಸ್ವಗತದಲ್ಲಿ ಅನುರಣಿಸುತ್ತಿರುವ
ವಿದ್ಯೆಯ ಹೆಸರು ಕಿ.ರಂ.
ಎಂದರೆ ಕಿ.ರಂ...

• ಜ್ಯೋತಿ ಗುರುಪ್ರಸಾದ್






ಸತೀಶ್ ಜೊತೆ ಪ್ರಿಯಾಂಕಾ ಗುಪ್ತ

ಟೀಚರ್ ಪ್ರಿಯಾಂಕಾ ಹತ್ಯೆ ಸಾಫ್ಟ್‌ವೇರ್ ಲೋಕದ ಹಾರ್ಡ್‌ಕೋರ್ ಕ್ರಿಮಿನಲ್?

ಕೊಂದವರಿಗೂ ಬಲಿಯಾದವಳಿಗೂ ಮಧ್ಯೆ ಗಂಡನೆಂಬ ಅದೃಶ್ಯ ಕೊಂಡಿಯೊಂದಿದೆಯೇ?

ಎತ್ತಿಂದೆತ್ತ ಲೆಕ್ಕ ಹಾಕಿದರೂ ಶಿಕ್ಷಕಿ ಪ್ರಿಯಾಂಕಾ ಗುಪ್ತಳ ಕೊಲೆಗೆ ಬೇರೆ ಕಾರಣ ಗೋಚರಿಸುತ್ತಿಲ್ಲ.

ಅದು ಅನೈತಿಕ ಸಂಬಂಧವೊಂದರ ಪರಿಣಾಮವಾ? ಕೈಹಿಡಿದಾಕೆಯನ್ನು ನಿವಾರಿಸಿ ಮತ್ತೊಂದು ಮದುವೆಯಾಗುವ ಗಂಡನ ದುರಾಶೆಯಾ? ಮಕ್ಕಳಾಗುವುದೇ ಇಲ್ಲ ಎಂಬ ಹತಾಶೆಯಾ? ಅಥವಾ ದಂಡುಪಾಳ್ಯದ ಶೈಲಿಯನ್ನೇ ಮೈಗೂಡಿಸಿಕೊಂಡ ರಕ್ತಪಿಪಾಸು ತಂಡವೊಂದರ ದುಸ್ಸಾಹಸವಾ? ಶಿಕ್ಷಕಿ ಪ್ರಿಯಾಂಕಾ ಗುಪ್ತ ಈ ಯಾವ ಕಾರಣಕ್ಕೆ ಕೊಲೆಯಾದಳು?



ಇನ್‌ಫೋಸಿಸ್ ನಾರಾಯಣಮೂರ್ತಿ

ಹೀಗೆ ಒಂದಲ್ಲ ಎರಡಲ್ಲ ಒಟ್ಟು ಎಂಟು ನಿಟ್ಟಿನಿಂದ ಪತ್ತೆದಾರಿಕೆಗಿಳಿದ ಬೆಂಗಳೂರು ಪೊಲೀಸರಿಗೆ ಟೀಚರ್ ಪ್ರಿಯಾಂಕಾಳ ಕೊಲೆ ಕೇಸೆಂಬುದು ಚಿದಂಬರ ರಹಸ್ಯದಂತೆ ತಲೆ ತಿನ್ನುತ್ತಿದೆ. ಪ್ರಿಯಾಂಕಾ ಗುಪ್ತ ಎಂಬ 28ರ ಹೆಣ್ಣುಮಗಳಿಗೆ ಇನ್ನೂ ಮಕ್ಕಳಿರಲಿಲ್ಲ. ಗಂಡ ಸತೀಶ್‌ಕುಮಾರ್ ಗುಪ್ತ ಇನ್‌ಫೋಸಿಸ್‌ನ ಮಾನವ ಸಂಪನ್ಮೂಲ ಅಧಿಕಾರಿ. ಇಬ್ಬರೂ ಉತ್ತರ ಪ್ರದೇಶದವರು. ಪ್ರಿಯಾಂಕಾ ಕನಕಪುರ ರಸ್ತೆಯ ದೆಹಲಿ ಪಬ್ಲಿಕ್ ಸ್ಕೂಲಿನಲ್ಲಿ ಗಣಿತದ ಶಿಕ್ಷಕಿ. ಬನ್ನೇರುಘಟ್ಟ ರಸ್ತೆಯ ಹುಳಿಮಾವು ಪಕ್ಕದ ವೆಂಕಟೇಶ್ವರ ಲೇಔಟ್‌ನಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡಿದ್ದರು. ಇಬ್ಬರಿಗೂ ಕೆಲಸವಿತ್ತು.

ಅದೆಂಥದ್ದೇ ವೈರುಧ್ಯವಿದ್ದರೂ ಪರಸ್ಪರ ಬೇರ್ಪಡುವ ವಿಚ್ಛೇದನಗೊಳ್ಳುವ ಎಲ್ಲಾ ಸಾಧ್ಯತೆಗಳಿದ್ದಾಗ್ಯೂ ಏಕೆ ಪ್ರಿಯಾಂಕಾ ಅಷ್ಟೊಂದು ಬರ್ಬರವಾಗಿ ಕೊಲೆಯಾದಳು?

ಇದೇ ಅರ್ಥವಾಗದ ಪ್ರಶ್ನೆ. ಕೊಲೆಯಾದ ರೀತಿ, ಪರಿಸ್ಥಿತಿಗಳೆಲ್ಲವೂ ವಿಚಿತ್ರ ಸನ್ನಿವೇಶವೊಂದರ ಅಡ್ಡಪರಿಣಾಮದಂತಿವೆ. ಆಗಸ್ಟ್ 10ರ ಬೆಳಗ್ಗೆ 5.35ರ ಹೊತ್ತಿಗೆ ಗಂಡ ಸತೀಶ್‌ಕುಮಾರ್ ವಾಕಿಂಗಿಗೆಂದು ಹೊರಬಿದ್ದರೆ ಪತ್ನಿ ಪ್ರಿಯಾಂಕಾ ಯೋಗಾಭ್ಯಾಸಕ್ಕಿಳಿಯುತ್ತಾಳೆ. ಇತ್ತ ವಾಕಿಂಗಿಗೆ ಬಂದ ಸತೀಶ್ ಮನೆ ಬಿಟ್ಟ ಎಂಟೇ ನಿಮಿಷಕ್ಕೆ ಪತ್ನಿಯಿಂದ ಫೋನ್ ಬರುತ್ತದೆ. 'ಯಾರೋ ಅಪರಿಚಿತ ಹುಡುಗರಿಬ್ಬರು ಪೇಪರ್ ಹಾಕ್ತೀವಿ ಅಂತ ಬಂದಿದ್ದಾರೆ, ನೀವೇನಾದ್ರೂ ಪೇಪರ್ ಹಾಕೋದಕ್ಕೆ ಹೇಳಿದ್ದೀರ?' ಎಂದು ಪ್ರಿಯಾಂಕಾ ಕೇಳುತ್ತಾಳೆ.

'ಆ ಥರ ನಾನು ಯಾರನ್ನೂ ಕಳಿಸೇ ಇಲ್ವಲ್ಲ? ಅವರನ್ನು ವಾಪಸ್ಸು ಕಳಿಸಿಬಿಡು...' ಎನ್ನುತ್ತಾನೆ ಸತೀಶ್. ಆದರೆ ಪ್ರಿಯಾಂಕಾಳ ಫೋನ್ ಕರೆ ಅರ್ಧಕ್ಕೆ ಕಟ್ಟಾಗುತ್ತದೆ. ಗಲಿಬಿಲಿಗೊಂಡ ಸತೀಶ್ ಕೂಡಲೇ ತನ್ನ ತಂದೆ ಅನಂತ್ ಗುಪ್ತಗೆ ಫೋನ್ ಮಾಡುತ್ತಾನೆ. ಪ್ರಿಯಾಂಕಾಳ ಕಾಲ್ ಅರ್ಧಕ್ಕೆ ಸ್ಥಗಿತಗೊಂಡಿತೆಂದೂ ಕೂಡಲೇ ಹೋಗಿ ನೋಡು ಎಂದೂ ಹೇಳುತ್ತಾನೆ ಪಕ್ಕದ ಬಿ.ಕೆ. ಸರ್ಕಲ್‌ನ ತನ್ನ ಮನೆಯಿಂದ ಹೊರಟ ತಂದೆ ಅನಂತ್ ವೆಂಕಟೇಶ್ವರ ಲೇಔಟ್‌ನ ಮನೆಗೆ ಬರು ವಷ್ಟರಲ್ಲಿ ಮುಕ್ಕಾಲು ಗಂಟೆಯಾಗಿತ್ತು, ಬಂದು ನೋಡಿದರೆ ಸತೀಶ್‌ನ ಮನೆ ಲಾಕ್ ಆಗಿತ್ತು, ಅಪ್ಪ ಅದನ್ನು ಮಗನಿಗೆ ಫೋನ್ ಮಾಡಿ ಹೇಳಿದ್ದಾನೆ. ತಕ್ಷಣವೇ ಸತೀಶ್ ಕೂಡಾ ಬಂದಿದ್ದಾನೆ. ಮನೆ ಲಾಕ್ ಆಗಿದ್ದರಿಂದ ಹೊಸೂರು ರಸ್ತೆಯ ಇನ್‌ಫೋಸಿಸ್ ಕಚೇರಿಗೆ ಹೋಗಿ ಅಲ್ಲಿ ತನ್ನ ಲಾಕರ್‌ನಲ್ಲಿಟ್ಟಿದ್ದ ಮನೆಯ ಮತ್ತೊಂದು ಕೀ ತಂದಿದ್ದಾನೆ.

ಹೀಗೆ ಹೆಚ್ಚೂಕಮ್ಮಿ ಒಂದೂಕಾಲು ಗಂಟೆ ಕಳೆದು ತಂದ ಕೀ ಬಳಸಿ ಬಾಗಿಲು ತೆರೆದರೆ; ದೃಶ್ಯ ಇನ್ನೂ ರೌರವವಾಗಿತ್ತು, ಪ್ರಿಯಾಂಕಾ ಭೀಕರವಾಗಿ ಕೊಲೆಯಾಗಿದ್ದಳು. ಕುರ್ಚಿಯೊಂದರಲ್ಲಿ ಕೂರಿಸಿ ಅದೇ ಕುರ್ಚಿಗೆ ಆಕೆಯ ಎರಡೂ ಕೈಗಳನ್ನು ಕಟ್ಟಿಹಾಕಲಾಗಿತ್ತು. ಕುತ್ತಿಗೆಗೆ ಬಿಗಿದು ಉಸಿರುಕಟ್ಟಿಸಲೆಂದು ಬಳಸಿದ್ದ ವೈರು ಆಕೆಯ ಮೇಲೆ ಇತ್ತು. ಹಾಗೆ ಕುರ್ಚಿಗೆ ಕಟ್ಟಿಹಾಕಿ ವೈರಿನಿಂದ ಉಸಿರುಗಟ್ಟಿಸಿದ ನಂತರ ಆಕೆಯ ಕುತ್ತಿಗೆಯನ್ನು ತರಕಾರಿ ಹೆಚ್ಚುವ ಚಾಕುವಿನಿಂದ ಕುಯ್ಯಲಾಗಿತ್ತು. ಸೀಳಿದ ಕುತ್ತಿಗೆ ಕುರ್ಚಿಗೆ ಆತುಕೊಂಡಿದ್ದಂತೆ ರಕ್ತ ಧಾರಾಕಾರವಾಗಿ ಹರಿದು ಹೋಗಿತ್ತು. ಬಹುಶಃ ಉಸಿರುಗಟ್ಟಿಸಿ ಕೊಂದ ನಂತರವೂ ಎಲ್ಲಿ ಆಕೆ ಬದುಕಿಬಿಡುತ್ತಾಳೋ ಎಂಬ ಅನುಮಾನಕ್ಕೆ ಬಿದ್ದು ಕತ್ತು ಕುಯ್ದಿದ್ದರೋ ಅಥವಾ ಪೊಲೀಸರ ದಿಕ್ಕು ತಪ್ಪಿಸಲು ಹಾಗೆ ಮಾಡಿದರೋ ಗೊತ್ತಿಲ್ಲ.

ಆದರೆ ಹೋಗುವ ಮುನ್ನ ಹಂತಕರು ಬಳಸಿದ್ದ ಕೈಗ್ಲೌಸ್ ಮತ್ತು ಚಾಕುವನ್ನು ಪ್ರಿಯಾಂಕಾಳ ಕಾಲಿನ ಮೇಲಿಟ್ಟು ಹೋಗಿದ್ದರು. ಹಂತಕರು ಧರಿಸಿದ್ದ ಷೂ ಮತ್ತು ಜಾಕೆಟ್ ಕೂಡ ಪಕ್ಕದಲ್ಲೇ ಬಿದ್ದಿತ್ತು. ದೃಶ್ಯ ನೋಡುತ್ತಿದ್ದಂತೆ ಸತೀಶ್ ಎದೆಬಡಿದುಕೊಂಡು ಬೊಬ್ಬಿಡಲಾರಂಭಿಸಿದ. ಆತನ ತಂದೆ ಅನಂತಗುಪ್ತ ಪಕ್ಕದಲ್ಲೇ ಇದ್ದು ಮಗನನ್ನು ಸಂತೈಸುತ್ತಿದ್ದ. ಆತನೇ ಫೋನ್ ಮಾಡಿ ಪೊಲೀಸರಿಗೆ ಸುದ್ದಿ ಕೊಟ್ಟ. ಸ್ಥಳಕ್ಕೆ ಬಂದ ಹುಳಿಮಾವು ಪೊಲೀಸರಿಗೆ ಮೊದ ಮೊದಲು ಇದ್ಯಾರೋ ದಂಡುಪಾಳ್ಯದ ಟೈಪಿನ ಹಂತಕರ ಕೃತ್ಯವಿರಬೇಕೆಂದು ಸಹಜವಾಗೇ ಅನ್ನಿಸಿತ್ತಾದರೂ ಕ್ರಮೇಣ ಅರ್ಥವಾಗದ ಒಂದೊಂದೇ ಪ್ರಶ್ನೆಗಳು ತಲೆ ಎತ್ತತೊಡಗಿದವು.

ಅದು ಗಂಡ ಸತೀಶನ ವಿಚಿತ್ರ ವರ್ತನೆ. ಮನೆಯಿಂದ ಮೂರ್‍ನಾಲ್ಕು ನಿಮಿಷಗಳಷ್ಟು ನಡಿಗೆಯ ಅಂತರದಲ್ಲಿ ವಾಕಿಂಗ್ ಮಾಡುತ್ತಿದ್ದ ಸತೀಶ; ಯಾರೋ ಆಗುಂತುಕರು ಬಂದಿದ್ದಾರೆಂದು ಹೆಂಡತಿ ಫೋನ್ ಮಾಡಿ ಹೇಳುತ್ತಿದ್ದಂತೆ ಅರ್ಧಕ್ಕೆ ಆಕೆಯ ಫೋನ್ ಕಟ್ಟಾಗಿದ್ದಕ್ಕೆ ಸಹಜವಾಗೇ ಆತಂಕಗೊಳ್ಳಬೇಕಿತ್ತು, ತಕ್ಷಣವೇ ಧಾವಿಸಿ ಬರಬೇಕಿತ್ತು, ಬದಲಿಗೆ ಅಪ್ಪನಿಗೆ ಫೋನ್ ಮಾಡಿ ಹೇಳುತ್ತಾನೆ. ಅಪ್ಪ ಬರಲು ಕಮ್ಮಿಯೆಂದರೂ ಅರ್ಧಗಂಟೆ ಬೇಕು. ತಾನಾದರೆ ಮೂರ್‍ನಾಲ್ಕು ನಿಮಿಷದಲ್ಲಿ ಬಂದುಬಿಡಬಹುದಿತ್ತು, ಪಕ್ಕದಲ್ಲೇ ಇದ್ದ ತಾನು ಬರುವ ಬದಲು ದೂರದಲ್ಲಿದ್ದ ಅಪ್ಪನನ್ನು ಹೋಗಿ ನೋಡುವಂತೆ ಹೇಳಿದ ಸತೀಶನ ವರ್ತನೆಯೇ ವಿಚಿತ್ರವಾಗಿತ್ತು,

ಹಾಗೇ ಅರ್ಧಗಂಟೆಯ ನಂತರ ಬಂದ ಅಪ್ಪ ಮನೆ ಲಾಕ್ ಆಗಿದ್ದನ್ನು ತಿಳಿಸಿದ ನಂತರವಾದರೂ ಸತೀಶ್ ಮಾಡಿದ್ದೇನು?

ಬೇರೆ ಯಾರೇ ಆಗಿದ್ದರೂ ಮನೆ ಬಾಗಿಲು ಮುರಿದು ನುಗ್ಗುತ್ತಿದ್ದರು. ಕನಿಷ್ಠ ಕಿಟಕಿ ಗಾಜು ಒಡೆದು ಏನಾಗಿದೆ ಎಂದು ನೋಡುತ್ತಿದ್ದರು. ತಕ್ಷಣವೇ ಪೊಲೀಸರಿಗೆ ಫೋನ್ ಮಾಡಬೇಕಿತ್ತು, ಆದರೆ ಸತೀಶ್ ತನ್ನ ತಂದೆಯ ಮನೆಗೆ ಹೋಗಿ ಅಲ್ಲಿದ್ದ ಕಾರ್ ತೆಗೆದುಕೊಂಡು ಸೀದಾ ಹೊಸೂರು ರಸ್ತೆಯ ಇನ್‌ಫೋಸಿಸ್ ಕಚೇರಿಗೆ ಬರುತ್ತಾನೆ. ಅಲ್ಲಿ ತನ್ನ ಲಾಕರ್‌ನಲ್ಲಿದ್ದ ಮನೆಯ ಮತ್ತೊಂದು ಕೀ ತೆಗೆದುಕೊಂಡು ಬಂದು ಮನೆಯ ಲಾಕ್ ತೆಗೆಯುತ್ತಾನೆ. ಇದರರ್ಥ ಹೆಚ್ಚೂಕಮ್ಮಿ ಒಂದೂವರೆ ಗಂಟೆಯಷ್ಟು ಸಮಯವನ್ನು ಸತೀಶ್ ಈ ರೀತಿಯಾಗೇ ಕಳೆದುಬಿಡುತ್ತಾನೆ.

ಇಲ್ಲಿ ಅತ್ಯಂತ ವಿಚಿತ್ರವೆಂಬಂತೆ ಸತೀಶ್ ನಕಲಿ ಕೀ ತರಲೆಂದು ಇನ್‌ಫೋಸಿಸ್‌ಗೆ ಹೋದಾಗ ತನ್ನ ಪಂಚಿಂಗ್ ಕಾರ್ಡ್ ತೆಗೆದುಕೊಂಡೇ ಹೋಗಿದ್ದ. ನಿಜಕ್ಕೂ ಸತೀಶ್ ವಾಕಿಂಗಿಗೇ ಹೋಗಿದ್ದಾದರೆ ತನ್ನ ಪಂಚಿಂಗ್ ಕಾರ್ಡನ್ನು ಏಕೆ ಜೊತೆಗಿಟ್ಟುಕೊಂಡು ಹೋದ? ಇದರರ್ಥ ಸತೀಶ್ ವಾಕಿಂಗಿಗೆ ಹೋಗೇ ಇಲ್ಲ, ಹಾಗೊಮ್ಮೆ ಹೋಗಿದ್ದರೂ ಹೋಗುವ ಮೊದಲೇ ಪ್ರಿಯಾಂಕಾಳ ಕೊಲೆ ನಡೆದಿತ್ತು ಅಥವಾ ಪ್ರಿಯಾಂಕಾಳ ಕೊಲೆ ನಡೆದದ್ದು ಗೊತ್ತಿದ್ದೂ ಸತೀಶ್ ತನ್ನ ಪಂಚಿಂಗ್ ಕಾರ್ಡನ್ನು ಕೊಂಡೊಯ್ದು ಇನ್‌ಫೋಸಿಸ್‌ನಿಂದ ನಕಲಿ ಕೀ ತರುವ ನಾಟಕ ಆಡಿದ್ದ!

ಸತೀಶ್ ವಾಕಿಂಗಿಗೆ ಹೋಗಿದ್ದೇ ನಿಜವಾಗಿದ್ದರೆ ತನ್ನ ಪಂಚಿಂಗ್ ಕಾರ್ಡನ್ನು ಜೊತೆಗೊಯ್ಯುತ್ತಿರಲಿಲ್ಲ, ಆತ ವಾಕಿಂಗ್ ಮುಗಿಸಿ ಬರುವ ಹೊತ್ತಿಗೆ ಪ್ರಿಯಾಂಕಾಳ ಕೊಲೆ ನಡೆದು ಮನೆ ಲಾಕ್ ಆಗಿದ್ದೇ ಆಗಿದ್ದರೆ ಪಂಚಿಂಗ್ ಕಾರ್ಡ್ ಆತನ ಬಳಿಯಿರುತ್ತಿರಲಿಲ್ಲ, ಅಂದರೆ ಕೊಲೆ ನಡೆಯುವಾಗ ಸತೀಶ್ ಪಕ್ಕದಲ್ಲೆಲ್ಲೋ ಇದ್ದ ಅಥವಾ ಮನೆಯಲ್ಲೇ ಇದ್ದ!

ಈ ಒಂದೇ ಕ್ಲೂ ಹಿಡಿದು ಸತೀಶನನ್ನು ಪ್ರಶ್ನಿಸಲಾರಂಭಿಸಿದ ಹುಳಿಮಾವು ಇನ್ಸ್‌ಪೆಕ್ಟರ್ ಬಲರಾಮೇಗೌಡರಿಗೆ ಸತ್ಯ ಗೊತ್ತಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಸತೀಶನ ದೇಹ ಮತ್ತು ಆರೋಗ್ಯ ಗಮನಿಸಿದರೆ ಆತ ನಿಯಮಿತವಾಗಿ ವಾಕಿಂಗ್ ಮಾಡಿದವನಂತಿರಲಿಲ್ಲ, ಎಷ್ಟು ದಿನದಿಂದ ವಾಕಿಂಗ್ ಮಾಡ್ತಾ ಇದ್ದೀಯ ಎಂದರೆ ಹದಿನೈದು ದಿನದಿಂದ ವಾಕ್ ಮಾಡ್ತಾ ಇದ್ದೀನಿ ಎಂದು ಸತೀಶ್ ಉತ್ತರಕೊಟ್ಟ. ಅದೂ ಶನಿವಾರ ಮತ್ತು ಭಾನುವಾರ ಆತ ವಾಕಿಂಗ್ ಹೋಗೇ ಇರಲಿಲ್ಲ, ಸುಸ್ತಾಯಿತು ಅದಕ್ಕೇ ಹೋಗಿರಲಿಲ್ಲ ಎಂದು ಹುಂಬನಂತೆ ಬಾಯಿಬಿಟ್ಟ. ಹದಿನೈದು ದಿನಗಳ ಪೈಕಿ ನಾಲ್ಕೈದು ದಿನ ಆತ ವಾಕಿಂಗ್ ಮಾಡೇ ಇರಲಿಲ್ಲ, ಇದರರ್ಥ ವಾಕಿಂಗ್ ವಿಷಯದಲ್ಲಿ ಆತ ಸೀರಿಯಸ್ಸಾಗಿರಲಿಲ್ಲ,

ಹಾಗಾದರೆ ವಾಕಿಂಗಿಗೆ ಹೋಗುವಂತೆ ಕತೆಕಟ್ಟುವುದೊಂದೇ ಆತನ ಉದ್ದೇಶವಾಗಿತ್ತೇ? ಕೊಲೆ ನಡೆದ ದಿನ ವಾಕಿಂಗಿಗೆ ಬಳಸುವ ಷೂ ಧರಿಸುವ ಬದಲು ಪಂಪಿಂಗ್ ಷೂ ಧರಿಸಿದ್ದು ಆತನ ಕಳ್ಳ ಮನಸ್ಥಿತಿಗೆ ತಕ್ಕಂತಿತ್ತು, ವಾಕಿಂಗ್ ಹೋದಂತೆಯೂ ಇರಬೇಕು, ಜೊತೆಗೆ ಮಾಮೂಲಿನಂತೆ ಪಂಪಿಂಗ್ ಷೂ ಧರಿಸಿ ಇನ್ನೇನನ್ನೋ ಮಾಡಬೇಕು. ಸತೀಶನ ವರ್ತನೆಗಳ ಬಗ್ಗೆ ಇನ್ನೂ ಕೆದಕಿದ ಪೊಲೀಸರಿಗೆ ಆತನ ಇನ್ನೊಂದು ಕಸರತ್ತು ಗಮನಕ್ಕೆ ಬಂದಿತ್ತು, ವೆಂಕಟೇಶ್ವರ



ಕೊಲೆ ನಡೆದ ಮನೆ

ಲೇಔಟಿನ ಆ ಮನೆಗೆ ಆತ ವಾಸ ಬದಲಿಸಿಯೇ ನಾಲ್ಕು ತಿಂಗಳಾಗಿತ್ತು, ಅದಕ್ಕೂ ಮುನ್ನ ಪಕ್ಕದ ಬಿ.ಕೆ.ಸರ್ಕಲ್ಲಿನಲ್ಲಿ ಆತ ತನ್ನ ತಂದೆಯ ಜೊತೆಗಿದ್ದ. ಬಹುಶಃ ಪತ್ನಿಯನ್ನು ಸದ್ದಿಲ್ಲದೇ ಮುಗಿಸಿಹಾಕಲು ಆ ಹೊತ್ತಿಗಾಗಲೇ ಆತ ನಿರ್ಧರಿಸಿಬಿಟ್ಟಿದ್ದ.

ಹೊಸ ಮನೆಗೆ ಬಂದು ಮೂರೂವರೆ ತಿಂಗಳಾಗುತ್ತಿದ್ದಂತೆ ಸತೀಶ್ ವಾಕಿಂಗ್ ಶುರುಹಚ್ಚಿಕೊಂಡನಲ್ಲ; ಅದಕ್ಕೆ ತಕ್ಕಂತೆ ಮತ್ತೂ ಒಂದು ಕೆಲಸ ಮಾಡಿದ್ದ, ಅದು ತನ್ನ ಜೊತೆ ಪ್ರಿಯಾಂಕಾ ವಿಪರೀತ ಪ್ರೀತಿಯಿಂದ ತೆಗೆಸಿಕೊಂಡಂತಿದ್ದ ವಿವಿಧ ಫೋಟೋಗಳನ್ನು ದೈತ್ಯಗಾತ್ರಕ್ಕೆ ಅಚ್ಚು ಹಾಕಿ ಮನೆಯ ಎಲ್ಲೆಂದರಲ್ಲಿ ಗೋಡೆಗೆ ನೇತು ಹಾಕಿದ್ದ. ಯಾರೇ ನೋಡಿದರೂ ಗಂಡ ಹೆಂಡತಿ ತುಂಬ ಅನ್ಯೋನ್ಯವಾಗಿದ್ದಂತೆ ಭಾವಿಸಬೇಕು. ಚಿತ್ರದಲ್ಲಿ ಸತೀಶ್ ಧೂರ್ತನಗೆ ಬೀರುತ್ತಿದ್ದರೆ ಹೊರತು ಪ್ರಿಯಾಂಕಾಳ ಮನಸ್ಸಲ್ಲಿ ಇನ್ನೆಂಥದೋ ಚಿಂತೆ ಕಾಡುತ್ತಿದ್ದಂತಿತ್ತು, ಸತೀಶ್ ಇದ್ದಕ್ಕಿದ್ದಂತೆ ವಾಕಿಂಗ್ ಶುರುಹಚ್ಚಿ ಕೊಂಡಿದ್ದು ಮತ್ತು ತನ್ನ ಜೊತೆ ಕೂತು ತೆಗೆಸಿಕೊಂಡಿದ್ದ ಫೋಟೋಗಳನ್ನು ತಂದು ಗೋಡೆಗೆ ನೇತು ಹಾಕಿದ್ದರ ಹುನ್ನಾರ ಆಕೆಗೆಲ್ಲಿ ಗೊತ್ತಾಗಬೇಕು? ಗಂಡಹೆಂಡಿರ ಮಧ್ಯೆ ಅದೇನು ಹುಳುಕಿತ್ತೋ?

ಪ್ರಿಯಾಂಕಾ ಉತ್ತರಪ್ರದೇಶದ ಲಖನೌ ಸಮೀಪದ ರಾಜಾಜಿಪುರದ ಮಧ್ಯಮ ವರ್ಗದ ಯುವತಿ. ಆಕೆ ಸತೀಶ್ ಗುಪ್ತಾನ ಕೈಹಿಡಿದದ್ದು ಇಲ್ಲಿಗೆ ನಾಲ್ಕು ವರ್ಷದ ಹಿಂದೆ. ನಾಲ್ಕು ವರ್ಷಗಳಾದರೂ ಮಕ್ಕಳಿರಲಿಲ್ಲ ಎಂಬುದು ಸತೀಶನ ದೇಹಸ್ಥಿತಿಗೆ ಮೂಕಸಾಕ್ಷಿಯಂತಿತ್ತು, ಬಹುಶಃ ಇದೇ ಕಾರಣಕ್ಕೆ ಪ್ರಿಯಾಂಕಾ ಸತೀಶನ ವಿರುದ್ಧ ರೋಸತ್ತಿದ್ದಳೆ? ಆತನಿಂದ ದೂರವಾಗಲು ನಿರ್ಧರಿಸಿದ್ದಳೆ? ಆಕೆ ಶಿಕ್ಷಕಿಯಾಗಿದ್ದ ದೆಹಲಿ ಪಬ್ಲಿಕ್ ಶಾಲೆಯ ಅವಿವಾಹಿತ ಶಿಕ್ಷಕನೊಬ್ಬ ಆಕೆಯನ್ನು ಪ್ರೀತಿಸುತ್ತಿದ್ದನೆ? ಇದು ಸತೀಶನನ್ನು ರೊಚ್ಚಿಗೇಳಿಸಿತೆ? ಪತ್ನಿ ತನ್ನನ್ನು ತೊರೆದು ಇನ್ನಾರದೋ ಕೈ ಹಿಡಿಯುವ ಮೊದಲು ತಾನೇ ಆಕೆಯನ್ನು ಮುಗಿಸಿಬಿಡಲು ನಿರ್ಧರಿಸಿದನೆ? ಇದಕ್ಕೆ ಆತನ ತಂದೆ ಅನಂತ್ ಗುಪ್ತಾ ಕೂಡ ಜೊತೆಯಾದನೆ?

ಹಾಗೊಮ್ಮೆ ಬೇರೆ ಯಾರೋ ಪಾತಕಿಗಳು ದರೋಡೆಯ ಉದ್ದೇಶದಿಂದ ಬಂದಿದ್ದರೆ ಪ್ರಿಯಾಂಕಾ ತನ್ನ ಗಂಡನಿಗೆ ಫೋನ್ ಮಾಡಿ ವಿಷಯ ಮುಟ್ಟಿಸುವ ತನಕ ಕಾಯುತ್ತಿರಲಿಲ್ಲ, ಮೊಬೈಲನ್ನು ಕೈಗೆತ್ತಿಕೊಳ್ಳುತ್ತಿದ್ದಂತೆಯೇ ಅಟ್ಯಾಕ್ ಮಾಡುತ್ತಿದ್ದರು. ಅಕಸ್ಮಾತ್ ಗಂಡನಿಗೆ ಫೋನ್ ಮಾಡಿಬಿಟ್ಟದ್ದೇ ಆಗಿದ್ದರೆ ತಕ್ಷಣವೇ ಜಾಗ ಖಾಲಿ ಮಾಡುತ್ತಿದ್ದರೇ ಹೊರತು ದುಸ್ಸಾಹಸಕ್ಕೆ ಕೈಹಾಕುತ್ತಿರಲಿಲ್ಲ. ಏಕೆಂದರೆ ಹಂತಕರು, ಗಂಡ ಸತೀಶ್ ಎಷ್ಟುಹೊತ್ತಿಗೆ ಮನೆ ಬಿಟ್ಟ, ಎಷ್ಟು ದೂರ ಹೋಗಿರುತ್ತಾನೆ, ಆತ ವಾಪಸ್ಸು ಬರಲು ಎಷ್ಟು ಸಮಯ ಹಿಡಿಯುತ್ತದೆ ಇತ್ಯಾದಿ ಪ್ರತಿಯೊಂದನ್ನು ಕೂಲಂಕಷವಾಗಿ ಗಮನಿಸಿಕೊಂಡೇ ಕೃತ್ಯಕ್ಕೆ ಕೈ ಹಾಕಿರುತ್ತಾರೆ. ಫೋನ್ ಅರ್ಧಕ್ಕೇ ಕಟ್ಟಾಗಿದ್ದರೆ ಆತಂಕಗೊಂಡ ಸತೀಶ್ ಬಂದೇಬರುತ್ತಾನೆಂದು ಗೊತ್ತಿದ್ದೂ ತಮ್ಮ ಷೂ ಬಿಚ್ಚಿಟ್ಟು, ಹಾಕಿದ್ದ ಜಾಕಿಟನ್ನು ಕಳಚಿಟ್ಟು ಉಸಿರುಗಟ್ಟಿಸಿಕೊಂದ ನಂತರವೂ ಮತ್ತೆ ಚಾಕುವಿನಿಂದ ಕತ್ತು ಕುಯ್ಯುವಷ್ಟು ವ್ಯವಧಾನ ಅವರಿಗಿರುವುದಿಲ್ಲ,


ಹಂತಕರು ಅಲ್ಮೇರಾದಲ್ಲಿದ್ದ ಎರಡು ಲಕ್ಷದ ಹತ್ತು ಸಾವಿರ ರೂಪಾಯಿಗಳನ್ನು ಕೊಂಡೊಯ್ದಿದ್ದಾರೆಂದು ಸತೀಶ್ ಹೇಳುತ್ತಾನೆ. ಹಾಗಿದ್ದರೆ ಉಳಿದ 30 ಸಾವಿರ ರೂಪಾಯಿಗಳನ್ನು ಏಕೆ ಬಿಟ್ಟು ಹೋಗುತ್ತಿದ್ದರು? ಪ್ರಿಯಾಂಕಾ ಧರಿಸಿದ್ದ ಒಂದು ಚಿನ್ನದ ಚೈನು ಮತ್ತು ಮೂರು ಉಂಗುರಗಳನ್ನು ಹಾಗೇ ಬಿಟ್ಟು ಹೋಗಿದ್ದಾರೆಂದರೆ ಹಂತಕರ ಉದ್ದೇಶ ದರೋಡೆಯಲ್ಲ, ಕೊಲ್ಲುವುದರ ಹೊರತಾಗಿ ಅವರಿಗೆ ಬೇರೆ ಕಾರಣಗಳಿದ್ದಂತಿಲ್ಲ, ವೃತ್ತಿಪರ ಹಂತಕರ್‍ಯಾರೂ ತಮ್ಮ ಜರ್ಕಿನ್, ಷೂ ಮತ್ತು ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಹಾಗೆ ಬಿಟ್ಟು ಹೋಗುವುದಿಲ್ಲ,

ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ ಪೊಲೀಸರಿಗೆ ಹಂತಕನ ಉದ್ದೇಶ ಕೊಲ್ಲುವುದು ಮತ್ತು ಯಾರೋ ಪಾತಕಿಗಳು ಮಾಡಿದ ಹಾಗೆ ಪೊಲೀಸರನ್ನು ನಂಬಿಸುವುದೇ ಗುರಿಯಾಗಿರಬೇಕೆಂಬುದು ಸ್ಪಷ್ಟವಾಗಿತ್ತು, ಅಪ್ಪ-ಮಗನ ವಿಚಿತ್ರ ವರ್ತನೆಗಳೇ ಇದಕ್ಕೆ ಪುಷ್ಠಿಯೊದಗಿಸುತ್ತಿದ್ದವು. ಸತೀಶ್ ಕುಮಾರ್ ಗುಪ್ತಾ ನಾರಾಯಣ ಮೂರ್ತಿಯ ಇನ್‌ಫೋಸಿಸ್ ಕಂಪನಿಯ ಮಾನವ ಸಂಪನ್ಮೂಲಾಧಿಕಾರಿ. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಪತ್ನಿ ಪ್ರಿಯಾಂಕಾ ಅದೇನೇ ದ್ರೋಹವೆಸಗಿದ್ದರೂ ಆಕೆಯನ್ನು ಆಕೆಯ ಪಾಡಿಗೆ ಬಿಟ್ಟುಬಿಡಬಹುದಿತ್ತು, ಕೈತುಂಬಾ ಸಂಬಳವಿದ್ದ ನೌಕರಿಯಿತ್ತು, ಹೊಸಬದುಕು ಕಟ್ಟಿಕೊಳ್ಳುವ ಎಲ್ಲಾ ಅವಕಾಶಗಳಿದ್ದವು. ಎಲ್ಲಕ್ಕೂ ಮಿಗಿಲಾಗಿ ಇನ್‌ಫೋಸಿಸ್ ನಾರಾಯಣ ಮೂರ್ತಿಯೇ ಬೋಧಿಸುವ ಕಾರ್ಪೊರೇಟ್ ಸಿದ್ಧಾಂತವನ್ನಾದರೂ ಆತ ಪಾಲಿಸಬೇಕಿತ್ತು, ನೌಕರಿ, ಸಂಬಳ, ಸವಲತ್ತು ಎಲ್ಲಕ್ಕೂ ಮಿಗಿಲಾದ ಸ್ವಾರ್ಥಲಾಲಸೆಯಿಂದ ಆತ ವಿಮುಖನಾಗಲೇ ಇಲ್ಲ. ಇನ್‌ಫೋಸಿಸ್ ಸ್ವಭಾವಕ್ಕಿಂತಲೂ ಮಿಗಿಲಾದ ಉತ್ತರ ಪ್ರದೇಶದ ಕ್ರಿಮಿನಲ್ ಫ್ಯೂಡಲ್ ಮನಸ್ಥಿತಿಯಿಂದ ಹೊರಬರಲೇ ಇಲ್ಲ, ಅದಕ್ಕೆ ತಕ್ಕಂತೆ ಆತನ ಅಪ್ಪ ಸಾಥ್ ಕೊಟ್ಟ. ಸಾಫ್ಟ್‌ವೇರ್ ಗಂಡನೊಳಗೊಬ್ಬ ಹಾರ್ಡ್‌ಕೋರ್ ಕ್ರಿಮಿನಲ್ ಅಡಗಿದ್ದಾನೆಂಬುದು ಮುಗ್ಧೆ ಪ್ರಿಯಾಂಕಾಗೆ ಮೊದಲೇ ಗೊತ್ತಿದ್ದರೆ ಹುಷಾರಾಗುತ್ತಿದ್ದಳೋ ಏನೋ. ಎಷ್ಟೆಂದರೂ ಹೆಣ್ಣು ಜೀವವಲ್ಲವೆ? ಮೈಮರೆತಳು. ಬಲಿಯಾದಳು.

• ರಾ. ಸೋಮನಾಥ್
ra.somanath2010@gmail.com

ಗರ ಯೋಜನಾ ಇಲಾಖೆ

ಮಸಾಜ್ ಮುಕುಂದನ ಅಸಲೀ ಕಥೆ!



ಬಿಟ್ಟು ಭ್ರಷ್ಟನೊಬ್ಬ ಅದೆಷ್ಟು ಕಾಲದವರೆಗೆ ಮುಚ್ಚಿಟ್ಟುಕೊಂಡು ಓಡಾಡಬಹುದು, ಅದೆಷ್ಟು ಸುಪಾಸಿನವರ ಮೇಲೆ ಗೂಬೆ ಕೂರಿಸಿ ತಲೆ ಕೊಳ್ಳಬಹುದು... ಈ ಎಲ್ಲದಕ್ಕೂ ಅಂತ್ಯ ಅಂತೊಂದು ಇರುತ್ತದೆ. ಸದ್ಯ ನಗರ ಯೋಜನಾ ಇಲಾಖೆಯ ಷ್ಟ ನಿರ್ದೇಶಕ ಮುಕುಂದನೆದುರೂ 'ಅಂತ್ಯ' ದು ಅವತರಿಸಿದಂತಿದೆ!


ಮೂಲತಃ ಟಿ. ನರಸೀಪುರದ ಹೆಮ್ಮಿಗೆಯವನಾದ ದನ ಮುಕ್ಕುಟಗಳಿಗೊಂದು ವಿಸ್ತೃತ ಇತಿಹಾಸವೇ ಚಿಕ್ಕಸಿಕ್ಕಲ್ಲೆಲ್ಲಾ ನಾಲಿಗೆಯಾಡಿಸಿ ಹಡಬೆ ಹಣದಲ್ಲಿ " ಟೂರು ಹೊಡೆಯುವುದು, ಮಾನಿನಿಯರಿಂದ ಜು ಮಾಡಿಸಿಕೊಳ್ಳುವುದು ಮುಕುಂದನ ಲೀಲಾ ದಗಳಲ್ಲಿ ಪ್ರಮುಖ ಅಂಶ. ತೀರಾ ಇಲಾಖೆಯ ಂದ ಫಾರಿನ್‌ಗೆ ಕಳಿಸಿದರೂ ಜೊತೆಗಿದ್ದವರನ್ನು ಅಲ್ಲೇ ಬಿಟ್ಟು ಡೆವಲಪರ್ಸ್‌ಗಳೊಂದಿಗೆ ವ್ಯವಹಾರ ಕೊಂಡು ಬರಬಲ್ಲ ಮಾಯಾವಿಯೀತ! ಇಂಥಾ ದ ಬೆಂಗಳೂರಿನ ನಗರ ಯೋಜನಾ ವಿಭಾಗದ ಶಕನಾಗಿ ಮಾಡಿದ ಭಾನಗಡಿಗಳನ್ನು ಹಳೆಯ "ಗಳೊಂದಿಗೆ ಬಿಚ್ಚಿಡುವುದೇ ಸೂಕ್ತ!

ತ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಭಿವೃದ್ಧಿ ಪ್ರಾಧಿಕಾರದಲ್ಲಿದ್ದ ಕಾಲವದು. ಆ ಸಂದರ್ಭ ಈತನ ಭೀಕರ ಹಸಿವು ಅನಾವರಣಗೊಂಡಿತ್ತು, ಪರ್ಸ್‌ಗಳೊಂದಿಗೆ ಗಳಸ್ಯಕಂಠಸ್ಯ ಸ್ನೇಹವಿಟ್ಟುಕೊಂಡು ಮೀರಿ ಸಹಕರಿಸುವುದು, ಆ ಮೂಲಕ ಭರ್ಜರಿ ಸುವ ಕಾರ್ಯವೈಖರಿ ಎಗ್ಗಿಲ್ಲದೆ ನಡೆಯಿತು.

ಥಾ ಮುಕುಂದ ಇದಕ್ಕಿಂತಲೂ ಮೊದಲು ಳೂರಿನ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿದ್ದ. ಆ ದಲ್ಲೂ ಸರ್ಕಾರಿ ಜಮೀನು ಕಂಡವರ ಪಾಲಾಗು ಮಾಡಿ ಭರ್ಜರಿ ಕಾಸು ಕಿತ್ತಿದ್ದ. ಸುದೈವವೆಂಬಂತೆ ಪಾಲ್ ಮೀನಾ ಅಲ್ಲಿದ್ದರು. ಮುಕುಂದನ ಮುಕ್ಕಾಟ ಕಂಡ ಅವರು 'ಟ್ರಾನ್ಸ್‌ಫರ್ ಮಾಡಿಸಿಕೊಂಡು ತೊಲಗು' ಅಂತ ಮಂಗಳಾರತಿ ಎತ್ತಿದರು. ಪರಿಣಾಮ ವೆಂಬಂತೆ ಈ ಅನಿಷ್ಟ ಶಿವಮೊಗ್ಗೆಗೆ ವಕ್ಕರಿಸಿಕೊಂಡಿತು.

ಶಿವಮೊಗ್ಗಕ್ಕೆ ವಕ್ಕರಿಸಿದ ಮುಕುಂದ ಯಾವ ಎಗ್ಗೂ ಇಲ್ಲದೆ ಮೇಯತೊಡಗಿದ. ಭೂಪರಿವರ್ತನೆ, ಲೇಔಟ್ ಮಂಜೂರಾತಿ, ಭೂಉಪಯೋಗ ಬದಲಾವಣೆ ಮುಂತಾದವುಗಳಲ್ಲಿ ಅಡ್ಡಕಸುಬು ಪ್ರದರ್ಶಿಸಿದ ಮುಕುಂದ ಸರಿಯಾಗಿ ಫಾಯಿದೆ ಗಿಟ್ಟಿಸಿಕೊಂಡ. NOC ಯಲ್ಲೂ ಫ್ರಾಡ್‌ಗಿರಿ ಪ್ರದರ್ಶಿಸಿದನಲ್ಲದೆ, ಹಸಿರುವಲಯವನ್ನು ನಾಮಾವಶೇಷ ಮಾಡಿದ. ಇದೆಲ್ಲ ಭಾನಗಡಿಗಳನ್ನೂ ಆಗ ಕಮಿಷನರ್ ಆಗಿದ್ದವರೊಬ್ಬರಿಗೆ 'ಗೆಜ್ಜೆ ಸೇವೆ' ಸಲ್ಲಿಸಿ ದಕ್ಕಿಸಿಕೊಂಡಿದ್ದನೆಂಬ ಮಾತುಗಳೂ ಕೇಳಿಬರುತ್ತಿವೆ.

ಹೀಗೆ ಕರ್ನಾಟಕವನ್ನೊಂದು ರೌಂಡು ಹೊಡೆದ ಮುಕುಂದ ಡೆವಲಪರ್ಸ್‌ಗಳ ಬೆಂಬಲದಿಂದ ಬೆಂಗಳೂರಿನ ನಗರ ಯೋಜನಾ ಸದಸ್ಯ (TPM)ನಾಗಿ ವಕ್ಕರಿಸಿದ. ಹೀಗೆ ಬಂದವನೇ ಪಕ್ಕಾ ಡೀಲು ಶುರುವಿಟ್ಟು ಮುಕುಂದ ಪ್ರತಿಯೊಂದರಲ್ಲೂ ಹಣ ಹೊಡೆಯತೊಡಗಿದ. CDP ಯಲ್ಲಿರುವ ರಸ್ತೆಗಳನ್ನು ಮಾಡಲಾಗುವುದಿಲ್ಲ ಎಂಬ ಕಾರಣ ನೀಡಿ ಆ ಜಾಗೆಯನ್ನು ಖಾಸಗಿಯವರಿಗೆ ಧಾರೆಯೆರೆದ.


ದಿನಾಂಕ: 03.05.2010

ಸಿದ್ದರಾಮಯ್ಯ ಸುರೇಶ್‌ಕುಮಾರ್‌ಗೆ ಬರೆದ ಪತ್ರ

ಇಷ್ಟಕ್ಕೇ ಸುಮ್ಮನಾಗದೆ ಮುಕುಂದನ ಲೀಲೆಗಳು ಎಗ್ಗಿಲ್ಲದೆ ಮುಂದುವರೆದವು. NOC (ಭೂಪರಿವರ್ತನಾ ನಿರಾಪೇಕ್ಷಣಾ ಪತ್ರ) ನೀಡಿಕೆಯೊಂದರಲ್ಲೇ ಬೇಕಾದ ಹಾಗೆ ಕಾಸು ಕೀಳಲಾರಂಭಿಸಿದ. ಈತನ ಅನಾಚಾಂಡಲಗಳು ಎಷ್ಟು ಅತಿಯಾಯಿತೆಂದರೆ, ಲೋಕಾಯುಕ್ತರಿಗೂ ದೂರುಗಳು ಹೋಗತೊಡಗಿದವು. ಆಗಿನ ಲೋಕಾಯುಕ್ತ ವೆಂಕಟಾಚಲಯ್ಯ ಇನ್ನೇನು ರೇಡು ಮಾಡೇ ಬಿಡುತ್ತಾರೆಂಬ ಸುದ್ದಿ ಹಬ್ಬಿತು. ಬೆದರಿದ ಮುಕುಂದ ಬಚಾವಾಗಲು ದಾರಿ ಹುಡುಕತೊಡಗಿದ. ಅಯ್ಯಂಗಾರಿ ಮುಕುಂದ ಕಮಿಷನರ್ ಆಗಿದ್ದ ವಿದ್ಯಾಶಂಕರ್ ಕೂಡಾ ತನ್ನ ಜಾತಿಯವರೇ ಎಂದು ಗೊತ್ತುಪಡಿಸಿಕೊಂಡು ಗಾಳ ಹಾಕಲೆತ್ನಿಸಿದ. ಇರುವುದನ್ನೆಲ್ಲಾ ಅವರ ಮುಂದೆ ಒದರಿದ. ಈತನನ್ನು ಇಲ್ಲೇ ಬಿಟ್ಟರೆ ಪೂರ್ತಿ ಎಕ್ಕುಟ್ಟಿಸುತ್ತಾನೆಂದು ಖಾತ್ರಿಯಾದದ್ದೇ ವಿದ್ಯಾಶಂಕರ್ ಮುಕುಂದನನ್ನು ಗುಲ್ಬರ್ಗಾಕ್ಕೆ ಎಸೆದರು!

ಅದಾಗಲೇ ಬೆಂಗಳೂರಿನ ಭೂಮಿಯ ರುಚಿ ಹತ್ತಿಸಿಕೊಂಡಿದ್ದವನು ಗುಲ್ಬರ್ಗಾದಲ್ಲಿ ಹೇಗಿದ್ದಾನು? ಪುನಃ ತನ್ನ ಡೆವಲಪರ್ಸ್ ನಂಟು ಬಳಸಿ ಒಂದೇ ತಿಂಗಳಲ್ಲಿ ಬೆಂಗಳೂರಿನ ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕನಾಗಿ ಬಂದು ಕೂತ. ಈ ಮೂಲಕ ಇಡೀ ರಾಜ್ಯದ ಮೇಲೆ ಈ ಭ್ರಷ್ಟನಿಗೆ ಹಿಡಿತ ಸಿಕ್ಕಂತಾಯ್ತು. ಎಲ್ಲಾ ಜಿಲ್ಲೆಗಳಿಂದಲೂ ಇಲಾಖಾ ಬೇಡಿಕೆಗಳು ಈತನ ಮೂಲಕವೇ ಸರ್ಕಾರಕ್ಕೆ ತಲುಪಬೇಕಾಯಿತು. ಇದರಲ್ಲೇ ಕೆಲವನ್ನು ಹಳಗಿಸಿಕೊಂಡು ಹಣ ಪೀಕತೊಡಗಿದ ಮುಕುಂದ, ಪ್ರತೀ ತಿಂಗಳು ಜಿಲ್ಲಾ ಮಟ್ಟದಿಂದಲೇ ಮಾಮೂಲಿ ವಸೂಲಿ ಮಾಡಲಾರಂಭಿಸಿದ. ಎಂದಿನ ಖಯಾಲಿಯಂತೆ ಡೆವಲಪರ್ಸ್‌ಗಳ ಹಿತ ಕಾಯಲು ನಿಂತ ಮುಕುಂದ ದೊಡ್ಡ ದೊಡ್ಡ ಪ್ಲಾಟ್ ಹಾಗೂ ಬೇನಾಮಿ ಪ್ಲಾಟುಗಳಿಗೂ ತಲೆ ಎತ್ತಲು ಅನುವು ಮಾಡಿಕೊಡತೊಡಗಿದ.

ಇದೇ ಅವಧಿಯಲ್ಲಿ ಕನ್ನಲ್ಟೆನ್ಸಿ ಮತಿಯಿಂದ ಇಂಗ್ಲೆಂಡ್‌ನ ಟ್ರೈನಿಂಗ್ ಪ್ರೋಗ್ರಾಂ ಒಂದು ನಿಗದಿಯಾಗಿ ಅದರಲ್ಲಿ ಮುಕುಂದನೂ ಪಾಲ್ಗೊಳ್ಳುವ ಅವಕಾಶ ಬಂತು. ಈತನ ಜೊತೆಗೆ ಡೆಪ್ಯೂಟಿ ಡೈರೆಕ್ಟರ್‌ರೊಬ್ಬರನ್ನು ಕಳಿಸಲಾಗಿತ್ತು. ಆದರೆ ಚಾಣಾಕ್ಷ ಮುಕುಂದ ತನ್ನ ಲೀಲೆ ಗಳನ್ನು ಇಂಗ್ಲೆಂಡ್‌ನಲ್ಲೂ ಪ್ರದರ್ಶಿಸಿದ. ತನ್ನೊಂದಿಗಿದ್ದ ಡೆಪ್ಯೂಟಿ ಡೈರೆಕ್ಟರ್‌ನನ್ನು ಅಲ್ಲೇ ಎಲ್ಲೋ ಬಿಟ್ಟವನೇ ಡೆವಲಪರ್ಸ್‌ಗಳೊಂದಿಗೆ ಪಿಕ್‌ನಿಕ್ ಹೊರಟ. ಅಲ್ಲಿ ಒಂದಷ್ಟು ಹಣವನ್ನು ಹೂಡಿದ್ದಾನೆಂಬ ಮಾತುಗಳೂ ಕೇಳಿಬಂದಿದ್ದವು. ಇದೇ ಅವಧಿಯಲ್ಲಿ ಮೈಸೂರು ನಗರದ ಆಸುಪಾಸಿನ ನೂರಾರು ಎಕರೆ ಹಸಿರುವಲಯ ಭೂಮಿಗೆ 'ಮುಕ್ತಿ' ತೋರಿಸಿದ ಕೀರ್ತಿಯೂ ಮುಕುಂದನಿಗೆ ಸಲ್ಲುತ್ತದೆ!

ಇದೆಲ್ಲ ಮುಗಿದಬಳಿಕ 2007ರಲ್ಲಿ ನಗರ ಯೋಜನಾ ಇಲಾಖೆಯ ನಿರ್ದೇಶಕನಾಗಿ ವಕ್ಕರಿಸಿದ ಈತ ಮಾಡಬಾರದ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಾನೆ. ಅದೇ ಹಡಬೇ ಹಣದಲ್ಲಿ ಫಾರಿನ್ ಟೂರು, ಮಸ್ತು ಮಸಾಜು ಅಂತೆಲ್ಲಾ ಮಜವಾಗಿ ಅಡ್ಡಾಡುತ್ತಿದ್ದಾನೆ.

ಆದರೆ.... ಇಷ್ಟು ದೊಡ್ಡ ಮಟ್ಟದ ಅವ್ಯವಹಾರ ಅಷ್ಟು ಸುಲಭಕ್ಕೆ ಮುಚ್ಚಿಹೋದೀತೆ? ಈತನ ವಿರುದ್ಧ ದಂಡಿ ದಂಡಿ ಆಪಾದನೆಗಳು, ದೂರುಗಳು ಆಯಕಟ್ಟಿನ ಜಾಗ ತಲುಪಿ ಕೆಲವೊಂದರ ವಿಚಾರಣೆಯೂ ನಡೆಯುತ್ತಿದೆ. ಈ ಸಂಬಂಧ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಸ್. ಸುರೇಶ್ ಕುಮಾರ್‌ಗೆ ವಿಪಕ್ಷ ನಾಯಕ ಸಿದ್ದರಾಮಯ್ಯನವರೇ ಮುಕುಂದನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಪತ್ರ ಬರೆದಿದ್ದಾರೆ.

ತಾನೇ ಮಾಡಿದ ಪಾಪದ ಕುಣಿಕೆ ತನ್ನ ಕೊರಳಿಗೇ ಸುತ್ತಿಕೊಳ್ಳುವ ಸೂಚನೆ ಮುಕುಂದನಿಗೆ ತಿಳಿದುಹೋಗಿದೆ. ಅದಕ್ಕೆ ಸರಿಯಾಗಿ ಈತನ ವಿರುದ್ಧದ ತನಿಖೆಗಳ ಆಧಾರದಲ್ಲಿ ಸರ್ಕಾರ ಕಳೆದೊಂದು ತಿಂಗಳಿಂದ ಬಲವಂತದ ರಜೆ ಕೊಟ್ಟು ಕಳಿಸಿದೆ. ಅದು ಈಗಲೂ ಮುಂದುವರೆಯುತ್ತಿದೆಯಾದರೂ ಮುಕುಂದ ವಾರಕ್ಕೆ ಮೂರು ಸಲ ಕಚೇರಿಗೆ ಹಾಜರಾಗುತ್ತಾನೆ. ಡೀಲುಗಳು ಚದುರದಂತೆ, ಕುರ್ಚಿ ಉದುರದಂತೆ ಲಗಾಟ ಹೊಡೆಯುತ್ತಿದ್ದಾನೆ. ಜೊತೆಗೆ ಪ್ರತೀ ಕೆಲಸದಲ್ಲೂ ಶೇ. 50 ಭಾಗ ಬರುವಂತೆ ನೋಡಿಕೊಳ್ಳುತ್ತಿದ್ದಾನೆ.

ಇಂಥವನ 'ನಿರ್ದೇಶ'ನದಲ್ಲಿ ನಗರ ಯೋಜನಾ ಇಲಾಖೆಯೆಂಬುದು ಅದು ಹೇಗೆ ನೆಟ್ಟಗಿದ್ದೀತು? ಸದಾ ಡೀಲು, ಮಸಾಜಿನ ಗುಂಗಿನಲ್ಲೇ ಇಲಾಖೆಯನ್ನು ಹದಗೆಡಿಸುತ್ತಿರುವ ಈತನಿಂದ ಮುಕ್ತಿ ಯಾವಾಗ?


ಇವೆಲ್ಲ ಪ್ರಶ್ನೆಗಳಿಗೆ ಸದ್ಯ ಜಾರಿಯಲ್ಲಿರುವ ತನಿಖಾ ವರದಿಗಳೇ ಉತ್ತರಿಸಲಿವೆ.

• ವರದಿಗಾರ

ನ್ಸಿಲರ್ ಉಮೇಶ್ ಶೆಟ್ಟಿಗೆ ಏನಾಗಿದೆ?

ಗರಬಾವಿಯ ಕೌನ್ಸಿಲರ್ ಉಮೇಶ್ ಶೆಟ್ಟಿಯ ಟೈಮೇ ಸರಿ ಇಲ್ಲವೋ ವಿಜಯನಗರದ ಪಾಲಿಟಿಕ್ಸ್‌ನ ಜಾಯಮಾನವೇ ಹಾಗಿದೆಯೋ ಗೊತ್ತಿಲ್ಲ. ಣ್ಣನ ಪಕ್ಕಾ ಬಂಟ ಕೌನ್ಸಿಲರ್ ಉಮೇಶ್ ಶೆಟ್ಟಿ ವಿರುದ್ಧ ಸಾಹಿತಿ ಂದರಾಜ್ ಪುತ್ರ ಸೂರ್ಯ ಜ್ಞಾನಭಾರತಿ ಪೊಲೀಸರಿಗೆ ಕೊಟ್ಟಿದ್ದಾರೆ. ದೂರಿನ ಸಾರಾಂಶವೆಂದರೆ ಜುಲೈ 23ರ ಸೂರ್ಯನ ಮೊಬೈಲಿಗೆ ಫೋನ್ ಮಾಡಿದ ಉಮೇಶ್ ಶೆಟ್ಟಿ ವಿರುದ್ಧ ಅಪಪ್ರಚಾರ ಮಾಡಿದರೆ ನಿನ್ನನ್ನು ಸುಮ್ಮನೆ ಬಿಡಲ್ಲ." ಲಾಟ್‌ಬೂಟ್ ಎಂದು ಧಮಕಿ ಹಾಕಿದ್ದಾರೆ!

ದೂರೇನೋ ದಾಖಲಾಗಿದೆ ನಿಜ. ಆದರೆ ರೋಪು ಹಾಕಿದ್ದು ಕರೆ ಬಂದದ್ದು ನನ್ನ ಮೊಬೈಲಿನಿಂದ ಅಲ್ಲ, ನನಗೂ ಸಂಬಂಧವಿಲ್ಲ ಎಂದು ಕೌನ್ಸಿಲರ್ ಸಾಹೇಬರು ಕೊಂಡಿದ್ದಾರೆ. ಮಾತಿನ ವರಸೆ, ಬಳಸಿದ ಶಬ್ದ ಮತ್ತು ಎತ್ತಿದ ತೀರ ಮಾರಕವಲ್ಲದಿದ್ದರೂ ಇಂಥ ಚಿಲ್ಲರೆ ವಿಷಯಕ್ಕೆ ಶ್ ಶೆಟ್ಟಿ ಈ ಪಾಟ ತಲೆಕೆಡಿಸಿಕೊಂಡಿದ್ದಾದರೂ ಏಕೆಂಬುದೇ ಯಾರಿಗೂ ಆಗುತ್ತಿಲ್ಲ.


ಉಮೇಶ್ ಶೆಟ್ಟಿ

ದ ಪಾಲಿಕೆ ಚುನಾವಣೆಯಲ್ಲಿ ಉಮೇಶ್ ಶೆಟ್ಟಿ ವಿರುದ್ಧ ಅಭ್ಯರ್ಥಿಯಾಗಿ ನಿಂತವರು ಸೂರ್ಯ ಮುಕುಂದರಾಜ್. ಬಿಸಿರಕ್ತದ ಯುವಕ. ಸಾಹಿತಿ ಎಲ್.ಎನ್. ಮುಕುಂದರಾಜ್ ಗಿ ಸಾಹಿತ್ಯಕ ಚಟುವಟಿಕೆಗಳಿಗಷ್ಟೇ ಸೀಮಿತರಾಗಿದ್ದ ಸೂರ್ಯ ಪಾಲಿಟಿಕ್ಸ್‌ಗೆ ಧುಮುಕಿದ್ದು ಒಳ್ಳೆಯ ಬೆಳವಣಿಗೆಯೇ. ಅವರೇ ಸ್ಥಾಪಿಸಿದ 'ಜನಪರ ಅಭಿವೃದ್ಧಿ ಯುವ ವೇದಿಕೆ' ಅಡಿಯಲ್ಲಿ ಂದರಾಜನಗರದ ಕುಂದುಕೊರತೆ ಪರಿಹಾರಕ್ಕಾಗಿ ಶಾಸಕ ಪ್ಪನ ಬೆಂಬಲ ಪಡೆದದ್ದೇ ಇಲ್ಲಿ ಎಡವಟ್ಟಾಯಿತು. ಯಾಕೆಂದರೆ ನಗರದ ರಾಜಕೀಯವೆಂದರೆ ಅದು ಸೋಮಣ್ಣ ಮತ್ತು ಪ್ರಿಯ ಕೃಷ್ಣಪ್ಪರ ಜಿದ್ದಾಜಿದ್ದಿಯ ಕಣ. ಉಮೇಶ್ ಶೆಟ್ಟಿ ಸೋಮಣ್ಣನ ಪರಮ ಭಕ್ತನಾದರೆ ಸೂರ್ಯ ಆಶ್ರಯಿಸಿದ್ದು ಪ್ರಿಯಕೃಷ್ಣರನ್ನು. ಸಹಜವಾಗೇ ಚಕಮಕಿ ನಡೆದಿದೆ ಮತ್ತು ಕಿಡಿಹಾರಿದೆ. ತನ್ನ ವಿರುದ್ಧ ಕಂಡಕಂಡಲ್ಲಿ ಸೂರ್ಯ ಅಪಪ್ರಚಾರ ನಡೆಸುತ್ತಿದ್ದಾರೆಂದು ಅದ್ಯಾವ ಪುಣ್ಯಾತ್ಮ ಉಮೇಶ್ ಶೆಟ್ಟಿಯ ಕಿವಿಯೂದಿದನೋ. ಕೌನ್ಸಿಲರ್ ಆಗಿನ್ನೂ ಆರು ತಿಂಗಳು ಕಳೆದಿಲ್ಲ ನೆಟ್ಟಗಿನ್ನೂ ಕೆಲಸವನ್ನೇ ಆರಂಭಿಸಿಲ್ಲ ಆಗಲೇ ವಿನಾಕಾರಣ ಅಪಪ್ರಚಾರಕ್ಕಿಳಿದರೆ ತಲೆಕೆಡದೇ ಇನ್ನೇನು? ಕೆರಳಿದ ಉಮೇಶ್ ಶೆಟ್ಟಿಗೆ ಅದೇನಾಯಿತೋ? ಫೋನೆತ್ತಿದ್ದೇ ಆವಾಜು ಬಿಟ್ಟಿರಬೇಕು. ದೂರು ಕೊಡದೇ ಸೂರ್ಯ ತಾನೇ ಇನ್ನೇನು ಮಾಡಲು ಸಾಧ್ಯ? ಚಿಲ್ಲರೆ ಕ್ಯಾತೆಯೊಂದು ಕಂಪ್ಲೇಂಟು, ಪ್ರೆಸ್ ಮೀಟು ಎಂದೆಲ್ಲಾ ರಾದ್ಧಾಂತವಾಗಿಬಿಟ್ಟಿದೆ. ಉಮೇಶ್ ಶೆಟ್ಟಿ ಗೆದ್ದಿದ್ದು ಕೂಡ ಕಾಕತಾಳೀಯವೇನಲ್ಲ, ಲಂಕೇಶ್ ಪತ್ರಿಕೆಯ ವರದಿಗಾರ ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಲಕ್ಷ್ಮಣಗೌಡನಂಥವನಿಗೆ ಕಾಂಗ್ರೆಸ್ ಟಿಕೆಟ್ ಕೊಡದೇ ಹೋಗಿದ್ದರೆ ಇವತ್ತು ಉಮೇಶ್ ಶೆಟ್ಟಿ ಕೌನ್ಸಿಲರ್ ಆಗುತ್ತಿರಲಿಲ್ಲ. ನಾಗರಬಾವಿಯ ಜನ ಎಲ್ಲಾ ಲೆಕ್ಕ ಹಾಕಿಯೇ ಉಮೇಶ್ ಶೆಟ್ಟಿಗೆ ಓಟು ಕೊಟ್ಟಿದ್ದಾರೆ. ಅದನ್ನಾತ ಅರ್ಥಮಾಡಿ ಕೊಳ್ಳಬೇಕು. ರಾಜಕೀಯವೆಂದರೆ ಟೀಕೆ, ಆರೋಪ, ಪ್ರತಿಭಟನೆ ಇದ್ದೇ ಇರುತ್ತದೆ. ಅದನ್ನು ಸಮಚಿತ್ತದಿಂದ ಸ್ವೀಕರಿಸಬೇಕೆ ಹೊರತು ಹೈಸ್ಕೂಲು ಹುಡುಗನಂತೆ ತಲೆಕೆಡಿಸಿಕೊಂಡು ರೋಪು ಹಾಕಿಬಿಟ್ಟರೆ; ಹಂತಕ ಲಕ್ಷ್ಮಣಗೌಡನಿಗೂ ಉಮೇಶ್ ಶೆಟ್ಟಿಗೂ ಏನು ವ್ಯತ್ಯಾಸ ಬಂತು? ಕೌನ್ಸಿಲರ್ ಉಮೇಶ್ ಶೆಟ್ಟಿಗಿದು ಅರ್ಥವಾಗಬೇಕು. ಜನಪರ ಹೋರಾಟಗಾರ ಸೂರ್ಯ ಮುಕುಂದರಾಜ್‌ಗೆ ಸೋಮಣ್ಣನೇ ನಿಂತು ಪೊಲೀಸ್ ರಕ್ಷಣೆ ಕಲ್ಪಿಸಬೇಕು.


ಸೂರ್ಯ.

• ರಾ.ಸೋ.

ಕಾರ್ಟೂನ್ ಕಾರ್ನರ್



ಶಿರಸಿ: ಟಿಎಸ್‌ಎಸ್ ದಿವಾಳಿಯೂ ಸೋಗಲಾಡಿ ಶಾಂತನ ಸ್ವಾಹಾ ಗ್ಯಾಂಗೂ



ಶಿರಸಿ ಸೀಮೆಯ ಅಡಿಕೆ ತೋಟಿಗರ ಆಶಾಕಿರಣದಂತಿದ್ದ ತೋಟಗಾರ್ಸ್ ಸೇಲ್ಸ್ ಸೊಸೈಟಿ (ಟಿಎಸ್‌ಎಸ್) ಮುಳುಗುತ್ತಿದೆ. ದಿವಂಗತ ಶ್ರೀಪಾದ ಹೆಗಡೆ ಕಡವೆಯ ದೂರದರ್ಶಿತ್ವ-ಅರ್ಪಣಾ ಭಾವದಿಂದ ಬಲಿಷ್ಠವಾಗಿ ಬೆಳೆದ ಈ ಸಹಕಾರಿ ಸಂಸ್ಥೆಗೆ ಇವತ್ತು ಅವರ ಅಳಿಯ ಶಾಂತಾರಾಮ ಹೆಗಡೆ ಎಂಬ ದಗಲುಬಾಜಿ ಪುಢಾರಿಯೇ ಕಂಟಕನಾಗಿ ಕಾಡುತ್ತಿದ್ದಾನೆ. ಸುಮಾರು 300 ಕೋಟಿ ರೂಪಾಯಿಗಳಷ್ಟು ಸಂಪತ್ತಿನ ಟಿಎಸ್ಸೆಸ್ ಕುರ್ಚಿಗೆ ಫೆವಿಕಾಲ್ ಹಾಕಿಕೊಂಡು ಹದಿನಾರು ವರ್ಷದಿಂದ ಕೂತಿರುವ ಈ ಪಟ್ಟಭದ್ರ ಶಾಂತಾರಾಮ ಹೆಗಡೆ ವೇದ ಹೇಳುತ್ತಲೇ ಉಚ್ಚೆಯಲ್ಲಿ ಗಾಳ ಹಾಕುತ್ತಿರುವ ಕತೆಗಳು ಮಲೆನಾಡಿನ ಅಡಿಕೆ ಏರಿಯಾದಲ್ಲಿ ಜನಜನಿತವಾಗಿ ಹೋಗಿದೆ!

ಟೈಟಾನಿಕ್ ಅಡ್ಡೆ

ಉತ್ತರ ಕನ್ನಡದ ಅಡಿಕೆ ತೋಟ ಪಟ್ಟಿಯಲ್ಲಿ "ರಾಷ್ಟ್ರನಾಯಕ" ರಾಮಕೃಷ್ಣ ಹೆಗಡೆಗಿಂತಲೂ "ಸಹಕಾರಿ ಸಾಹಸಿ" ಕಡವೆ ಹೆಗಡೆಯೇ ಜನಾನುರಾಗಿ ನಾಯಕನಾಗಿದ್ದರು! ಕಡವೆ ಮಂಕಾಗಿಸಲು ಹೆಗಡೆಜೀ ಮಾಡದ ಮಸಲತ್ತೇ ಇಲ್ಲ. ಕಡವೆ ಇಮೇಜು ಮಾತ್ರ ಕಡಿಮೆಯಾಗಲಿಲ್ಲ. ಇದಕ್ಕೆ ಕಾರಣ ಅಡಿಕೆ ಬೆಳೆಗಾರರ ಹಿತ ರಕ್ಷಿಸುವ ಧ್ಯೇಯೋದ್ದೇಶದ ಟಿಎಸ್ಸೆಸ್ ಕಟ್ಟಲು ಕಡವೆ ಮಾಡಿದ್ದ ನಿಸ್ವಾರ್ಥ ಸಹಕಾರಿ ಚಳವಳಿ! ಇವತ್ತಿಗೂ ಶಿರಸಿ-ಸಿದ್ದಾಪುರ-ಯಲ್ಲಾಪುರ ಭಾಗದ ಹವ್ಯಕ ಅಡಿಕೆ ತೋಟಿಗರ ಮನೆ-ಮನೆ ಗೋಡೆ ಮೇಲೆ ಕಡವೆ ಭಾವಚಿತ್ರ ರಾರಾಜಿಸುತ್ತಿದೆ. ಇಂಥ ಶ್ರೇಷ್ಠ ಸಹಕಾರಿಯ ಉತ್ತರಾಧಿಕಾರಿ ತಾನೆಂದು ಪೋಸು ಕೊಡುತ್ತ ಬಂದ ಆತನ ಅಡ್ಡಕಸಬಿ ಅಳಿಯ ಶಾಂತಾರಾಮ ಹೆಗಡೆ (ಶಾಹೆ) ಮಾವನ ಹೆಸರು ತೊಳೆಯುತ್ತಿದ್ದಾನೆ!

ಮಾವನ ನಾಮಬಲದಿಂದ ಟಿಎಸ್ಸೆಸ್ ಒಳಗೆ ನುಸುಳಿಕೊಂಡಿದ್ದ ಶಾಹೆ ಅರ್ಹತೆ ಇಲ್ಲದಿದ್ದರೂ ಅಧ್ಯಕ್ಷನೂ ಆಗಿಹೋದ. ಕಡವೆ ಅವರ ಕೊನೇ ದಿನಗಳಲ್ಲೇ ಸಣ್ಣಗೆ ಸ್ವಾಹಾ ಶುರು ಹಚ್ಚಿಕೊಂಡಿದ್ದ ಮ್ಯಾನೇಜಿಂಗ್ ಡೈರೆಕ್ಟರ್ ಜಿ.ಎಲ್. ಹೆಗಡೆ ಪದ್ದು ಶಾಹೆ ದರ್ಬಾರಿನಲ್ಲಿ ಭಯಾನಕ ಬಕಾಸುರನಾಗಿ ಹೋದ! ಕಳ್ಳ ಅಡಿಕೆ ವ್ಯಾಪಾರಿ ಎಂ.ಪಿ. ಹೆಗಡೆ ಬಪ್ಪನಳ್ಳಿ ಯಾವಾಗ ಈ ಹೆಗಡೆದ್ವಯರ ಹೆಗಲ ಮೇಲೆ ಕೈಹಾಕಿಕೊಂಡು ಟಿಎಸ್ಸೆಸ್ ಪಡಸಾಲೆಗೆ ನಡೆದು ಬರಲಾರಂಭಿಸಿದನೋ ಆಗದು ಟೈಟಾನಿಕ್ ಹಡಗಿನಂತೆ ನಿಧನಿಧಾನಕ್ಕೆ ಮುಳುಗತೊಡಗಿತು! ಈ ತರಲೆ ತ್ರಿಮೂರ್ತಿಗಳು ಇಡೀ ಟಿಎಸ್ಸೆಸ್ ಕಬ್ಜಾ ಮಾಡಿಕೊಂಡು ಅಡ್ಡಡ್ಡ ನುಂಗಹತ್ತಿದರು!!


ತೋಟಿಗರ ಕಾಳಜಿಗೆಂದು ಕಡವೆ ಹಗಲಿರುಳು ಬೆವರಿಳಿಸಿ ಕಟ್ಟಿದ್ದ ಈ ಸಂಸ್ಥೆಯನ್ನು ಕೆಲವೇ ಕೆಲವು ಕಳ್ಳ ಅಡಿಕೆ ವ್ಯಾಪಾರಿಗಳ ಹಿತ ಕಾಪಾಡುವ ಅಡ್ಡೆಯಾಗಿಸಿದ ಕೀರ್ತಿ ಶಾಹೆ ಗೋಲ್‌ಮಾಲ್ ಗ್ಯಾಂಗಿನದು! ಜಿ.ಎಲ್. ಹೆಗಡೆ ಎಂಡಿಗಿರಿಯಿಂದ ತೊಲಗಿದ ನಂತರ ಡೈರೆಕ್ಟರ್‌ನಾಗಿ ವಕ್ಕರಿಸಿದರೆ, ಆತನ ಹುದ್ದೆಗೆ ಬಂದವನು ರವೀಶ್ ಹೆಗಡೆ! ಈತ ಗುರುವನ್ನೇ ಮೀರಿಸುವ ಪ್ರಳಯಾಂತಕ!! ರವೀಶ್‌ಗೆ ಟಿಎಸ್ಸೆಸ್ ದಿವಾಳಿಯೆಬ್ಬಿಸುವ ದೀಕ್ಷೆ ಕೊಟ್ಟವನು ಸೇಲ್ಸ್ ಸೆಕ್ಷನ್‌ನ ಸರದಾರ ಅನಿಲ್‌ಕುಮಾರ್ ಮುಷ್ಗಿ ಎಂಬ ಹಳೇ ಹೆಗ್ಗಣ.

ಇವತ್ತು ಅಸಹಾಯಕ ತೋಟಿಗರಿಗೆ ಟಿಎಸ್ಸೆಸ್‌ನಿಂದ ಬಿಲ್ಲಿ ಪ್ರಯೋಜನವೂ ಇಲ್ಲ! ಅದೇನಿದ್ದರೂ ಶಾಹೆ, ಬಹೆ, ಜೆಎಲ್‌ಹೆ-ರಹೆ ಮತ್ತು ಮುಷ್ಗಿಯ ಪ್ರೈವೇಟ್ ಲಿಮಿಟೆಡ್ ಕಂಪನಿಯಂತಾಗಿ ಹೋಗಿದೆ. ಟಿಎಸ್ಸೆಸ್‌ನ ಕೋಟ್ಯಂತರ ರೂಪಾಯಿ ವಹಿವಾಟನ್ನು ಬಾಸ್‌ಗಳ ಹಪಾಹಪಿಗೆ ತಕ್ಕಂತೆ ರವೀಶ್-ಮುಷ್ಗಿಗಳೇ ನಿಭಾಯಿಸುತ್ತಾರೆ. ಉಳಿದೆಲ್ಲ ಡೈರೆಕ್ಟರ್‌ಗಳು ಬರೀ ಹಂಡೆಭರ್ತಿಗಷ್ಟೇ! ಯಾರಾದರೂ ಈ ದೋಖಾ ಕಂಪನಿ ಭಾನಗಡಿ ಬಗ್ಗೆ ಪಿಸುಗುಟ್ಟಿದರೂ ಸಾಕು, ಗಂಡಾಂತರ ಗ್ಯಾರಂಟಿ. ಸದಸ್ಯತ್ವದಿಂದಲೇ ವಜಾ, ಸಾಲ-ಸೌಲಭ್ಯಕ್ಕೆ ಕತ್ತರಿ, ಅಡಿಕೆ ಕ್ರಯ-ವಿಕ್ರಯಕ್ಕೆ ಅವಕಾಶ ಇಲ್ಲ, ಕೊನೆಗೆ ದಂಡ ಪ್ರಯೋಗವೂ ಆಗುತ್ತದೆ....

ಅದಕ್ಷ ಶಾಹೆ ಮತ್ತವನ ದಗಲುಬಾಜಿ ಸಹಚರರಿಗೆ ಸಹಕಾರಿ ನೀತಿ-ನಿಯಮ-ತತ್ವ, ನ್ಯಾಯಾಲಯಗಳ ಆದೇಶ, ಸಹಕಾರಿ ಇಲಾಖೆಯ ಆಜ್ಞೆಗಳೆಂದರೆ ಕಾಲು ಕಸ! ಸ್ವತಃ ಟಿಎಸ್ಸೆಸ್‌ನ ಬೈಲಾಗಳನ್ನೇ ಈ ದುಷ್ಟರು ಗಾಳಿಗೆ ತೂರಿ ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. ಈ ಹಗಲು ದರೋಡೆಕೋರರು ಟಿಎಸ್ಸೆಸ್‌ನಲ್ಲಿ ಮಾಡುತ್ತಿರುವ ಅಕ್ರಮ-ಅನ್ಯಾಯ-ಅನಾಚಾರ-ಅವಾಂತರ ಮತ್ತು ನುಂಗಾಟದ ಕೆಲವು ಸ್ಯಾಂಪಲ್ ಇಲ್ಲಿದೆ....

ಬಪ್ಪನಳ್ಳಿ ಭೋಜನ

ನೀವು ಎಂದಾದರೂ ಶಿರಸಿ ಕಡೆ ಬಂದರೆ ಸುಪ್ರಸಿದ್ಧ ಸಾಮ್ರಾಟ್ ಹೋಟೆಲ್‌ನ ಕೌಂಟರ್‌ನಲ್ಲಿ "ಸ್ವಾಗತಕಾರ"ನೊಬ್ಬ ಕಾಣಿಸುತ್ತಾನೆ. ಈ ತಲೆಮಾಸಿದ ಶ್ವೇತ ವಸ್ತ್ರಧಾರಿಯೇ ಶಾಂತಣ್ಣ ಯಾನೆ ಟಿಎಸ್ಸೆಸ್ 'ಸಾಹುಕಾರ' ಶಾಂತರಾಮ ಹೆಗಡೆ. ಈತ ಸಹಕಾರಿ ಧ್ಯೇಯ ಧೋರಣೆಯ ಗಂಧ-ಗಾಳಿಯೇ ಇಲ್ಲದ ಮೊದ್ಮಣಿ. ಸಹಕಾರ ಎಂದರೆ ಭರ್ಜರಿ ಸ್ವಾಹಾ ಎಂಬುದೇ ಈತನ ಅಚಲ ನಂಬಿಕೆ!! ಈತನ ಯಜಮಾನಿಕೆಯ ಟಿಎಸ್ಸೆಸ್‌ನಲ್ಲಿ ವಂಚಕ ಅಡಿಕೆ ವ್ಯಾಪಾರಿ-ದಲ್ಲಾಳಿಗಳದ್ದೇ ಹಾವಳಿ. ಈ ದಗಾಕೋರ ಹೇಳಿದ್ದೇ ಮಾರಾಟ-ಖರೀದಿ ನಿಯಮಾವಳಿ. ಶಾಹೆಯ ಅತ್ಯಾಪ್ತ ಮಿತ್ರ, ಸಲಹೆಗಾರ ಮತ್ತು ಸ್ವಾಹಾ ಸಂಗಡಿಗ ಬಪ್ಪನಳ್ಳಿಗಂತೂ ಟಿಎಸ್ಸೆಸ್‌ನ ಉತ್ಕೃಷ್ಟ ಅಡಿಕೆ ಹಣ ಹಲಾಲುಕೋರ ದಂಧೆಗೆ ಬಂಡವಾಳ!! ಈತ ಟಿಎಸ್ಸೆಸ್‌ನ ಕಾಯಂ ಉದ್ರಿದಾರ. ತರತರದ ಮಕ್ಮಲ್ ಟೋಪಿ ಟಿಎಸ್ಸೆಸ್‌ಗೆ ಏರಿಸಿರುವ ಬಿರಕಿ!



ಈ ಬಹಾದ್ದೂರ ಬಪ್ಪನಳ್ಳಿಯಿಂದ ಟಿಎಸ್ಸೆಸ್‌ಗೆ ಬರೋಬ್ಬರಿ ಮೂರು ಕೋಟಿ ರೂಪಾಯಿ ಬರಬೇಕಾಗಿದೆ. ಕಳೆದೊಂದು ದಶಕದಿಂದ ಈ ಬಾಕಿ ಉಳಿಸಿಕೊಂಡಿರುವ ಬಪ್ಪನಳ್ಳಿಗೆ ಅಧ್ಯಕ್ಷರ ಆದ್ಮಿಯೆಂಬ ಅರ್ಹತೆಗಾಗಿ ಈ ವಿಶೇಷ ರಿಯಾಯ್ತಿ! ಈ ದುಡ್ಡಿಗೆ ಯಾವ ಭದ್ರತೆಯನ್ನೂ ಟಿಎಸ್ಸೆಸ್ ಆಡಳಿತಗಾರರು ಪಡೆದಿಲ್ಲ, ಅಷ್ಟೇ ಅಲ್ಲ ಅದರ ವಸೂಲಿಗೂ ಪ್ರಾಮಾಣಿಕ-ತುರ್ತು ಕ್ರಮ ಕೈಗೊಂಡಿಲ್ಲ, ಟಿಎಸ್ಸೆಸ್ ದಿವಾಳಿಯಾದರೂ ಚಿಂತೆಯಿಲ್ಲ ಬಪ್ಪನಳ್ಳಿಗೆ ತೊಂದರೆಯಾಗಬಾರದೆಂಬ ಕಾಳಜಿ!!


ಬಪ್ಪನಳ್ಳಿ ಬಾಕಿ ವಸೂಲಿಗೆ ಕೈಹಾಕಿದ್ದ ನಿಷ್ಠುರ ಎಂಡಿ ಪ್ರಕಾಶ್ ಹೆಗಡೆಯನ್ನು ಶಾಹೆ ಗ್ಯಾಂಗು ಕಿರುಕುಳ ಕೊಟ್ಟೇ ಓಡಿಸಿತು. ಪ್ರಾಮಾಣಿಕವಾಗಿ ಅಡಿಕೆ ತಂದು ಹಾಕುವ ಮರ್ಯಾದಸ್ಥ ಸದಸ್ಯ ನಿಯತ್ತಿನ ವ್ಯಾಪಾರಿ-ದಲ್ಲಾಳಿಗಳಿಗಿಲ್ಲಿ ಒಂದಲ್ಲ ಒಂದು ಕಿರಿಕಿರಿ ಇದ್ದದ್ದೇ! ಬಪ್ಪನಳ್ಳಿಯಂಥ ವಂಚಕರಿಗೆ ಮಾತ್ರ ಎಲ್ಲಿಲ್ಲದ ಗೌರವಾದರ! ಟಿಎಸ್ಸೆಸ್‌ಗೆ ಲಾಸ್ ಮಾಡುತ್ತ ತನ್ನ ಅಡಿಕೆ ಮಂದಿ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿರುವ ಬಪ್ಪನಳ್ಳಿಯ ಭರ್ಜರಿ ಬಿಸಿನೆಸ್ ಮತ್ತು ಶಾಹೆ ಜತೆಗಿನ ಅನೈತಿಕ ಮೈತ್ರಿ ಬಗ್ಗೆ ಶಿರಸಿಯಲ್ಲಿ ರಂಗುರಂಗಿನ ಪರಾಣ ಚಾಲ್ತಿಯಲ್ಲಿದೆ.

8 ಕೋಟಿ ಕೃಷ್ಣಾರ್ಪಣ!

ಶಿರಸಿ- ಯಲ್ಲಾಪುರ ಮತ್ತು ಸಿದ್ದಾಪುರದಲ್ಲೂ ಶಾಹೆ ಬಪ್ಪನಹಳ್ಳಿಯಂಥ ದೋಖಾ ದಲ್ಲಾಳಿಗಳ ಬಳಗವನ್ನೇ ತಯಾರು ಮಾಡಿಕೊಂಡಿದ್ದಾರೆ. ಇಂಥ ಕಳ್ಳ ಖರೀದಿದಾರರಿಂದ ಎಂಟ್ಹತ್ತು ಕೋಟಿ ರೂ. ಸೊಸೈಟಿಗೆ ಬರಬೇಕಿದೆ. ಶಿರಸಿಯ ಗಜಾನನ ಟ್ರೇಡರ್ಸ್‌ನಿಂದ 1.5 ಕೋಟಿ, ಸಿದ್ದಾಪುರದ ವಿನು ಮತ್ತು ವಿಜಿ ಕಂಪನಿಯಿಂದ 1.3 ಕೋಟಿ, ಸಿದ್ದಾಪುರದ ಸೂರ್ಯ ಸುಪಾರಿ ಫರ್ಮ್‌ನಿಂದ 1 ಕೋಟಿ ಟಿಎಸ್ಸೆಸ್‌ಗೆ ಹತ್ತು ವರ್ಷದಿಂದ ಬಾಕಿಯಿದೆ. ಈ 8 ಕೋಟಿ ಅವಾಂತರಕ್ಕೆ ಶಾಹೆ ಮತ್ತವನ ಎಂಡಿ ರವೀಶ್ ಅಂಡ್ ಕಂಪನಿಯ ಕರಾಮತ್ತೇ ಕಾರಣ. ಆದರೂ ಸಹಕಾರ ಇಲಾಖೆ ಶಾಹೆಯ ಮೇಜುವಾನಿಗೆ ಮರುಳಾಗಿ ಸುಮ್ಮನಿದೆ.


ಈ ಹಣವನ್ನು ಯಾವುದಾದರೂ ನಿಧಿಯಿಂದ 'ಅಡ್ಜೆಸ್ಟ್' ಮಾಡಿ ತನ್ನ ಖದೀಮ ಗೆಳೆಯರ ಬಳಗ ಉದ್ಧರಿಸುವ ಸಂಚೊಂದನ್ನು ಶಾಹೆ ಹೆಣೆದಿರುವ ಗುಮಾನಿ ಎದ್ದಿದೆ. ಇಂಥ 'ಹೊಂದಾಣಿಕೆ'ಯಲ್ಲಿ ಶಾಹೆ ಕ್ಯಾಪ್ಟನ್‌ಶಿಪ್‌ನ ಆಡಳಿತಗಾರರು ನಿಸ್ಸೀಮರು. ಸಿದ್ದಾಪುರ ಶಾಖೆಯಲ್ಲಿ ದೊಡ್ಡ ಮೊತ್ತದ ಅಪರಾತಪರಾ ನಡೆದಾಗ ಈ ಥರದ ಅಡ್ಜೆಸ್ಟ್ ಮಾಡಿ ಶಾಹೆ 'ಸಹಕಾರಿ ರತ್ನ' ಅನ್ನಿಸಿಕೊಂಡಿದ್ದರು. ಈ ವಸೂಲಾಗದ-ಭತ್ಯೆಯೂ ಇಲ್ಲದ ಹಣವನ್ನು ಆಥಾವೆಯಲ್ಲಿ ಸಂಸ್ಥೆಯ ಆಸ್ತಿಯೆಂದು ಶಾಹೆ-ರಹೆ ಅಚ್ಚಿಸುತ್ತಿದ್ದಾರೆಂದರೆ, ಇವರೆಂಥ ತೋಟಿಗ ವಿರೋಧಿ ಪಾಪಿಗಳೆಂದು ನೀವೇ ಊಹಿಸಿ!

ಟಿಎಸ್ಸೆಸ್‌ಗೆ ಟೋಪಿ



ಹೊರನೋಟಕ್ಕೆ ಶಾಂತಮೂರ್ತಿಯಂತೆ ಕಂಗೊಳಿಸುವ ಶಾಹೆ ಅಧಿಕಾರ-ಹಡಬೆ ಹಣ-ಒಣ ಪ್ರತಿಷ್ಠೆಯ ವಿಕ್ಷಿಪ್ತ ಆಸಾಮಿ. ಈತನ ಟಿಎಸ್ಸೆಸ್ ದರ್ಬಾರಿನಲ್ಲಿ ಅಡಿಕೆ ಖರೀದಿ-ಮಾರಾಟ ನೀತಿ-ನಿಯಮಗಳೆಲ್ಲ ಪ್ರಜ್ಞಾಪೂರ್ವಕವಾಗೇ ಉಲ್ಲಂಘಿಸಲಾಗುತ್ತಿದೆ. ಖರೀದಿ ವಿಭಾಗದಲ್ಲಿ ಅದರ ಪಾರುಪತ್ಯಗಾರನಂತಾಡುತ್ತಿರುವ ಮುಷ್ಗಿ ಮಾಮ ಹೇಳಿದ್ದೇ ರೂಲ್ಸ್! ಎಂಡಿ ರವೀಶ್ ಹೆಗಡೆ ಮುಷ್ಗಿ ಹೇಳಿದ್ದನ್ನು ಭಯ-ಭಕ್ತಿಯಿಂದ ಪಾಲಿಸುತ್ತಾನೆ. ಈ ಜೋಡಿ ಅಕ್ರಮ ಗಳಿಕೆಯಲ್ಲಿ ಬಾಸ್‌ಗೂ ಒಂದು ಪಾಲು ಕೊಡುತ್ತಿರುವುದರಿಂದ ಕಣ್ಕಟ್ ಆಟ ಅಡೆತಡೆಯಿಲ್ಲದೆ ಸಾಗಿದೆ! ಪ್ರತಿ ವರ್ಷದ ಮಾರ್ಚ್ ಮತ್ತು ಸೆಪ್ಟೆಂಬರ್ ಕೊನೆಯಲ್ಲಿ ಖರೀದಿದಾರರು ಬಾಕಿ ಚುಕ್ತಾ ಮಾಡಬೇಕೆಂಬ ಕಟ್ಟುನಿಟ್ಟಿನ ನಿಯಮವಿದೆ. ಆದರೆ ಟಿಎಸ್ಸೆಸ್‌ನಲ್ಲಿ ಮಾತ್ರ ಖರೀದಿದಾರರ ಬಾಕಿ ಹೆಚ್ಚಾಗುತ್ತಿದೆ. 2005 ರಲ್ಲಿ 15,50,765 ರೂ. ಬಾಕಿಯಿತ್ತು, ಇದು 2009 ರ ಹೊತ್ತಿಗೆ 6,65,86,786 ರೂ.ಗಳಿಗೇರಿದೆ!! ಇದನ್ನು ಶಾಹೆ-ರಹೆಗಳಿಂದ ವಸೂಲಿ ಮಾಡಲು ಸಾಧ್ಯವೇ ಇಲ್ಲ, ಏಕೆಂದರೆ ಇದಕ್ಯಾವುದೇ ಸೆಕ್ಯೂರಿಟಿ ಟಿಎಸ್ಸೆಸ್ ಪಡೆದಿಲ್ಲ. ಬಡ ತೋಟಿಗರ ದುಡ್ಡು ಟಿಎಸ್ಸೆಸ್‌ನಲ್ಲಿ ಹೇಗೆ ನಾಯಿ-ನರಿ ಪಾಲಾಗುತ್ತಿದೆ ಎಂಬುದನ್ನು ವಂಚಕ ಬಾಕಿದಾರ ವರ್ತಕರಿಗೆ ಮುಷ್ಗಿ-ರವೀಶ್ ದೊರೆಯಿಂದ ರಿಯಾಯ್ತಿ ಕೊಡಿಸಿರುವುದು ಸಾರಿಸಾರಿ ಹೇಳುತ್ತಿದೆ. ಬಾಕಿದಾರರ ಮೇಲೆ ಕೇಸ್ ಹಾಕಿ ಕಾಸು ವಸೂಲಿ ಮಾಡೋದು ಬಿಟ್ಟು ಆ ಚೋರರಿಗೆ ಬಡ್ಡಿಯಲ್ಲಿ ಮಾಫ್ ಮಾಡಲಾಗಿದೆ. 2007-2008 ರಲ್ಲಿ ಬರೋಬ್ಬರಿ 19,51,700 ರೂ. ಬಡ್ಡಿ ಮನ್ನಾ ಮಾಡಲಾಗಿದೆ. ಟಿಎಸ್ಸೆಸ್ ಲಾಸ್ ಆದಾಗ ಶಾಹೆ-ರಹೆ-ಮುಷ್ಗಿಗಳಿಗೆ ಪ್ರಾಫಿಟ್ ಹೆಚ್ಚು! ಇದೆಲ್ಲ ಲೆಕ್ಕಪರಿಶೋಧಕರು ಆಕ್ಷೇಪಿಸಿದರೂ ಮೂರೂಬಿಟ್ಟ ಶಾಹೆ ಬಳಗ ನಿರುಮ್ಮಳವಾಗಿದೆ.

ದಗಾಕೋರ ಏಜೆಂಟರ ಮರ್ಜಿ-ಮುಲಾಜಿಗೆ ಅಡಿಕೆ ವಿಕ್ರಿ ವ್ಯವಹಾರ ನಡೆಸಲಾಗಿದೆ. ಈ ದಲ್ಲಾಳಿಗಳಿಂದ ಭದ್ರತೆಯಷ್ಟೇ ಅಲ್ಲ, ಅವರ ಸ್ಪಷ್ಟ ವಿಳಾಸವೂ ಪಡೆದಿಲ್ಲ, ಇಂಥ ಬೇನಾಮಿ ಬೇವರ್ಸಿಗಳೊಂದಿಗೆ ಕೋಟ್ಯಂತರ ರೂ. ವ್ಯವಹಾರ ಧನಪಿಶಾಚಿ ಮುಷ್ಗಿ ಮತ್ತವನ ಯಜಮಾನರು ನಡೆಸಿದ್ದಾರೆ. ಐದಾರು ವರ್ಷದ ಹಿಂದೆಯೇ ಸಂಸ್ಥೆ ಜತೆ ವ್ಯವಹಾರ ಸ್ಥಗಿತಗೊಳಿಸಿರುವ ಖರೀದಿದಾರರಿಂದಲೂ 50 ಲಕ್ಷದಷ್ಟು ದುಡ್ಡು ಬರಬೇಕಾಗಿದೆ. ಪರ್ಸೆಂಟೇಜ್ ಹಪಾಹಪಿಯಲ್ಲಿ ಟಿಎಸ್ಸೆಸ್‌ಗೆ ಮಾರಕವಿದೆ. ಇಂಥ ಹಲವು ಅನಾಹುತಕಾರಿ ಪ್ರಮಾದ ಮಾಡಲಾಗಿದೆ! ಇದೆಲ್ಲ ತನಿಖಿಸಿದರೆ ಶಾಂತಣ್ಣನ ಬಣ್ಣ ಬಯಲಾಗುತ್ತದೆ!!



ಶೇರುದಾರರು ಖಾಲಿ

ಟಿಎಸ್ಸೆಸ್‌ಗೆ ಹೇಗ್ಹೇಗೆ ಟೋಪಿ ಏರಿಸಬಹುದು ಮತ್ತು ಅಧಿಕಾರ ಹೇಗೆ ಅಬಾಧಿತವಾಗಿ ಅನುಭವಿಸಬಹುದೆಂಬ ಎರಡೇ ಎರಡು 'ಚಿಂತೆಗೆ' 'ಸಹಕಾರಿ ಧುರೀಣ' ಶಾಹೆಗೆ. ಸಹಕಾರಿ ಸಂಸ್ಥೆಯೊಂದರ ಉನ್ನತಿ-ಅವನತಿಗೆ ಅದರ ಶೇರುದಾರ ಸದಸ್ಯರ ಸಂಖ್ಯೆಯೇ ಸಂಕೇತ! ಈ ಶಾಹೆ ಪಟಾಲಮ್ ಶೇರುದಾರರ ಹೆಚ್ಚಿಸುವುದಿರಲಿ, ಇರುವವರನ್ನೇ ಓಡಿಸುತ್ತಿದೆ! 8000 ಶೇರುದಾರರಲ್ಲೀಗ ಬರೀ 3 ಸಾವಿರ ಉಳಿದಿದ್ದಾರೆ. ಒಟ್ಟು 23 ಸಾವಿರ ಸದಸ್ಯರಲ್ಲಿ 20 ಸಾವಿರ ನಾಮಿನಲ್ ಮೆಂಬರ್ಸ್. ಈ ನಾಮಿನಲ್ ಸದಸ್ಯರು ಶೇರುದಾರ ಸದಸ್ಯರಾದರೆ ನಿಭಾಯಿಸುವುದು ಕಷ್ಟವೆಂಬುದು ಗೊತ್ತಿರುವುದರಿಂದ ಶಾಹೆ ಅವರಿಗೆ ಶೇರು ಕೊಡುತ್ತಿಲ್ಲ. ಕಡಿಮೆ ಸದಸ್ಯರಿದ್ದರೆ ದಾದಾಗಿರಿ ಮಾಡಿ ಚುನಾವಣೆ ಗೆಲ್ಲಬಹುದಲ್ಲವೇ? ಬೇಕಾದಂತೆ ಠರಾವು ಬರೆಸಿಕೊಳ್ಳಬಹುದಲ್ಲವೇ? ಹೇಗಿದೆ ಟಿಎಸ್ಸೆಸ್ ಆಳುತ್ತಿರುವ ಖೂಳರ ದು(ದೂ)ರಾಲೋಚನೆ?!

ಪರ್ಸೆಂಟೇಜ್ ಕಾಮಗಾರಿ

ಕೋಟಿ-ಲಕ್ಷ ವ್ಯಯಿಸಿ ವ್ಯರ್ಥ ಕಟ್ಟಡ ಕಟ್ಟೋದೆಂದರೆ ಶಾಹೆ ಕಮಿಷನ್ ಕಮಿಟಿಗೆ ಎಲ್ಲಿಲ್ಲದ ಉಮೇದಿ! ಈ ಗುಪ್-ಗುಪ್ ಕನ್‌ಸ್ಟ್ರಕ್ಷನ್ಸ್‌ನಲ್ಲಿ ಹೆಚ್ಚೆಚ್ಚು ಪರ್ಸೆಂಟೇಜ್ ಕಬಳಿಸಬಹುದೆಂಬ "ಅಭಿವೃದ್ಧಿ ದೃಷ್ಟಿಕೋನ" ಶಾಹೆ ತಂದದ್ದು. ಸದಸ್ಯರ ಗಮನಕ್ಕೆ ತರದೇ ಶಾಹೆ ಎಡಬಲಕ್ಕಿರುವ ಪೂರ್ವಾಲ್ಯ ಮಸಲತ್ತುದಾರರು ತಮಗೆ ವರಮಾನ ತರುವ ಯೋಜನೆಗಳನ್ನು ಏಕಪಕ್ಷೀಯವಾಗಿ ನಡೆಸಿ ಸಂಸ್ಥೆಗೆ ಕನ್ನ ಕೊರೆಯುತ್ತಿದ್ದಾರೆ. ಈ ಫ್ಲಾಪ್ ಪ್ಲಾನ್-ಪ್ರಾಜೆಕ್ಟ್‌ಗೆ ಸಹಕಾರಿ ಇಲಾಖೆಯ ಒಪ್ಪಿಗೆಯೂ ಪಡೆಯುತ್ತಿಲ್ಲ.

ಅಡಿಕೆಯಂಥ ವಸ್ತುವಿಗೆ, ಅದೂ ಶಿರಸಿಯಂಥ ತಂಪು ಪ್ರದೇಶದಲ್ಲಿ ಶೈತ್ಯಾಗಾರ ಬೇಕಾ? ಲಕ್ಷಾಂತರ ರೂ.ಗಳ ಕೋಲ್ಡ್ ಸ್ಟೋರೇಜ್ ಅನ್ನು ದಿ ಗ್ರೇಟ್ ಶಾಂತಣ್ಣ ಅಂಡ್ ಕೋ ನಿರ್ಮಿಸಿದೆ; ನಿಷ್ಪ್ರಯೋಜಕ ಎಟಿಎಂ ಕಟ್ಟಿದೆ; ಕೋಟ್ಯಂತರ ರೂಪಾಯಿ ಆಸ್ಪತ್ರೆ ಕಟ್ಟಿ ಲಕ್ಷಾಂತರ ಲಪಟಾಯಿಸಿದೆ. ಈ ಲಾಸ್ ಹಾಸ್ಪಿಟಲ್‌ನ ಖಾಸಗಿ ಟ್ರಸ್ಟ್‌ಗೆ ಇವತ್ತಿಗೂ ಲಕ್ಷಾಂತರ ರೂಪಾಯಿ ಟಿಎಸ್ಸೆಸ್ ಖಜಾನೆಯಿಂದ ತಂದು ಸುರಿಯಲಾಗುತ್ತಿದೆ! ಈ ಪರ್ಸೆಂಟೇಜ್ ಕಾಮಗಾರಿಯಿಂದ ಬಡ ತೋಟಿಗನಿಗೆ ಲಾಭಕ್ಕಿಂತ ಹಾನಿಯೇ ಹೆಚ್ಚು, ಶಾಹೆ ಶನಿಸಂತಾನಕ್ಕೆ ಮಾತ್ರ ಸುಗ್ಗಿಯೋ ಸುಗ್ಗಿ!!

ಬೋಗಸ್ ಅಥಾವೆ!

ಶಾಹೆ ಪ್ರೈ.ಲಿ ಟಿಎಸ್ಸೆಸ್‌ನಲ್ಲಿ ಮಾಡಿರುವ ಅನಾಹುತಕಾರಿ ಅಡಿಕೆ ಖರೀಧಿ- ವಿಕ್ರಿಯಿಂದ "ಭಯಂಕರ ಲಾಭ"ವಾಗಿದೆಯೆಂದು ಅಥಾವೆಯಲ್ಲಿ ಅಚ್ಚಿಸಲಾಗಿದೆ! ಅಡಿಕೆ ಖರೀದಿ ವಿಭಾಗದಲ್ಲಿ ಹೂಡಿರುವ ಸುಮಾರು 20 ಕೋಟಿ ರೂಪಾಯಿ ಬಂಡವಾಳದ ಮೇಲಿನ ಬಡ್ಡಿ ಮತ್ತು ಅಡಿಕೆ ಖರೀದಿ ಕಮಿಷನ್ ಬೇಕೆಂತಲೇ ಮರೆಮಾಚಿ ಪ್ರತಿ ವರ್ಷ ಭರ್ಜರಿ ಲಾಭವೆಂದು ಶಾಹೆಯ ಭಂಡ ಬಳಗ ಭೋಂಗು ಬಿಡುತ್ತಿದೆ. ಇದನ್ನು 2008-09ರ ಆಡಿಟ್ ವರದಿಯಲ್ಲಿ ಆಕ್ಷೇಪಿಸಲಾಗಿದೆ. ಆಗ ಲೆಕ್ಕ ಪರಿಶೋಧಕರಿಗೇ ತಪ್ಪು ಲೆಕ್ಕ ತೋರಿಸಿದ ಎಂಡಿ ರವೀಶ್ ಹೆಗಡೆ ಸಿಕ್ಕಿಬಿದ್ದು ಮತ್ತೆ ಆಡಿಟರ್‌ನಿಂದ ಉಗಿಸಿಕೊಂಡಿದ್ದಾನೆ.

ಬಂಡವಾಳದ ಮೇಲೆ ಬರೀ ಶೇ. 6 ಬಡ್ಡಿ ಮತ್ತು ಶೇ. 4 ಕಮಿಷನ್ ಹಿಡಿದರೂ ಆ ವರ್ಷದ ವ್ಯಾಪಾರಿ ವಿಭಾಗದಲ್ಲಿ 1,67,18,756 ರ ಹಾನಿಯೇ ಕಾಣಿಸುತ್ತದೆ. ಹಾಗೆಯೇ 2007-08 ರಲ್ಲಿ 3,68,94,436 ರೂ.

ಆಗಿದೆ. ಈ ಸರಳ ಗಣಿತ ಹಾಕಿದರೆ ಟಿಎಸ್ಸೆಸ್ ...ಯಿತ್ತು ಅರ್ಥವಾಗುತ್ತದೆ. ಆದರೆ ಸಂಘ 'ವಿಶೇಷ' ...ಗಳಿಸುತ್ತಿದೆ. ತನ್ಮೂಲಕ ಅಧ್ಯಕ್ಷ ಶಾಹೆ ಚಾಣಾಕ್ಷ ...ಾರಿ ಮುಂದಾಳೆಂದು ಬಿಂಬಿಸಲು ಹಸಿಹುಸೀ ಸುಳ್ಳನ್ನು ...ವೆ ಪತ್ರಿಕೆ ತಯಾರಿಸಲಾಗಿದೆ; ಸದಸ್ಯರಿಗೆ-ಸಹಕಾರಿ ...ಖೆಗೆ ಮಂಕುಬೂದಿ ಎರೆಚಲು ಹವಣಿಸಲಾಗಿದೆ. ...ನ ಅಢಾವೆ ಸರಿಪಡಿಸಿದರೆ ಶಾಹೆ ಸಹಚರರ ಲೂಟ್ ...ರ್ ಬಿಚ್ಚಿಕೊಳ್ಳುತ್ತಿದೆ. ವ್ಯಾಪಾರಿ ವಿಭಾಗದ ಲಾಭ-ಹಾನಿ ...ರಿಸುವಾಗ ಬೋಗಸ್ ಆಢಾವೆಯಲ್ಲಿ ಶಿಲ್ಕು ಮಾಲಿನ್ನು ...ತ್ತನ್ನು ಮಾತ್ರ ಕಾಣಿಸಲಾಗಿದೆ. ಶಿಲ್ಕಿನ ಪ್ರಮಾಣವಾಗಲಿ, ...ಮೊತ್ತಿನ ದರವಾಗಲಿ ತೋರಿಸಿಲ್ಲ. ನಿಖರವಾಗಿ ಶಿಲ್ಕಿನ ...ಾಣ ನಮೂದಿಸದಿದ್ದರೆ, ದರ ಏರಿದಾಗ ಮೊತ್ತಕ್ಕೆ ...ಬೊಂದುವಷ್ಟು ಮಾಲನ್ನು ತಂದಿಟ್ಟು ಹೆಚ್ಚಿನ ಮಾಲು ...ನಳ್ಳಿ, ಗುರು ಹೆಗಡೆ, ಉಮೇಶ್ ಹೆಗಡೆಯಂಥ ...ಕೋರ ದಲ್ಲಾಳಿಗಳಿಗೆ ಕೊಟ್ಟು ಪವಾಡ ಮಾಡುವ ...ಮಂತೂ ಮುಷ್ಠಗಿ ಮಾಮನಿಗೆ ಕರತಲಾಮಲಕವಾಗಿ ...ಗಿದೆ. ಇಂಥ ಹಲ್ಕಟ್‌ಗಿರಿ ಶಾಹಿ ಬಳಗ ಮಾಡಿರುವ ...ಯ ಟಿಎಸ್ಸೆಸ್ ಪಡಸಾಲೆಯಲ್ಲಿದೆ!

...ಂಟು ಕೋಟಿ ರೂ. ಕರ್ಮಕಾಂಡ

...ಟಿಎಸ್ಸೆಸ್‌ನ ಸಿದ್ದಾಪುರ ಶಾಖೆಯಲ್ಲಿ ನಿರಂತರ 15 ... ಅಪರಾತಪರಾ ಸಾಂಗೋಪಾಂಗವಾಗಿ ನಡೆದಿತ್ತು! ...ವಹಾರದ ಮೊತ್ತ 1.375 ಕೋಟಿ ರೂಪಾಯಿಗಳು ...ತ್ರ!! ಬಡ್ಡಿ ಸೇರಿದರೆ ಹತ್ತಿರತ್ತಿರ 8 ಕೋಟಿ! ಇದು ...ತ್ತಿದ್ದೂ ಅಧ್ಯಕ್ಷ ಶಾಹೆ ಗೊತ್ತಿಲ್ಲದಂತಿದ್ದ. ಇದಕ್ಕೆ ಕಾರಣವೂ ... ಅಂದಿನ ಪ್ರಧಾನ ವ್ಯವಸ್ಥಾಪಕ ಜಿ.ಎಲ್. ಹೆಗಡೆ ... ಗೋಲ್‌ಮಾಲ್ ವೀರ ಶಾಹೆ ಜುಟ್ಟು ಹಿಡಿದು ...ಸುತ್ತಿದ್ದ ದಿನಗಳವು. ಮೊದ್ಮಣಿ ಶಾಹೆ ಬೆರಕಿ ಜಿಎಲ್‌ಹೆ ...ದಿದ್ದಕ್ಕೆಲ್ಲ ಗೋಣುಹಾಕುತ್ತ ಪಾಲಿಗೆ ಬಂದಿದ್ದೇ ...ಾಮೃತವೆಂದು ಕೃತಾರ್ಥವಾಗುತ್ತಿದ್ದ ಪಾಪ.

...ಸಿದ್ದಾಪುರ ಶಾಖೆಯಲ್ಲಿನ ಬೃಹತ್ ಕರ್ಮಕಾಂಡವನ್ನು ...ತ್ಥಿತವಾಗಿ ಅಲ್ಲಿಯ ಮ್ಯಾನೇಜರ್ ಎಸ್.ಜಿ. ಹೆಗಡೆ ... ತಲೆಗಷ್ಟೇ ಕಟ್ಟಲಾಯ್ತು. ವಾಸ್ತವಿಕವಾಗಿ ಈ ಹಗರಣದ ...ಾರಿ ಪ್ರಧಾನ ವ್ಯವಸ್ಥಾಪಕ ಜಿ.ಎಲ್. ಹೆಗಡೆ! ಈತನ ...ಗೆ 'ಅದಕ್ಷ' ಶಾಹಿ ಮತ್ತು ಸಿದ್ದಾಪುರ ಭಾಗದ ಅಂದಿನ ...ೇಶಕ ರಾಜಾರಾಮ ಹೆಗಡೆ ಹೊಸಕೊಪ್ಪ ನಿಂತಿದ್ದರು. ...ದರೆ ಸಿದ್ದಾಪುರ ಅವ್ಯವಹಾರ ಚಾಂಡಲ ಚೌರಕಿಯ ... ಕ್ರಿಮಿನಲ್ ಸಾಹಸ!!

...ಅಕ್ರಮ ಆಸ್ಫೋಟಿಸಿದಾಗ ಬೆಚ್ಚಿಬಿದ್ದ ಜಿಎಲ್‌ಹೆ-...ಕೆ ಜೋಡಿ ತಾವಿಬ್ಬರೂ ತಲೆ ತಪ್ಪಿಸಿಕೊಳ್ಳಲು ...ವೊಂದನ್ನು ಹೆಣೆದುಬಿಟ್ಟರು. ಸಹಕಾರಿ ಇಲಾಖೆಯಲ್ಲಿ ...ಳಕ ನಡೆಸಿ ತಮ್ಮ ಹಿತೈಷಿಯಂತಿದ್ದ ಆರ್.ಕೆ. ಹೆಗಡೆ ... ನಿವೃತ್ತ ಸಹಕಾರಿ ಇಲಾಖೆ ನೌಕರನಿಂದ ತನಿಖೆ ...ಡಿಸಿಕೊಂಡರು. ಈ ಮಹಾನುಭಾವ ಸಣ್ಣಳ್ಳಿ ಮಾಣಿ ...ನೇ 1,375 ಕೋಟಿ ನುಂಗಿಹಾಕಿದ್ದಾನೆ ಎಂಬ ಸುಳ್ಳು ... ಕೊಟ್ಟು ಹರಾಮಿ ಹೆಗಡೆ ಜೋಡಿಯನ್ನು ...ಾಯಿಸಿದ್ದರು.


...ಇಷ್ಟಾದರೂ ಗುಳುಂ ಆಗಿದ್ದ ಹಣ ವಸೂಲಿಗೆ ...ಮಾಣಿಕ ಪ್ರಯತ್ನವೇ ಟಿಎಸ್ಸೆಸ್ ಧಣಿಗಳಿಂದ ...ಯಲಿಲ್ಲ. ಕೆಲವು ದೊಡ್ಡ ಬಾಯಿ ಸದಸ್ಯರ ಸಾಲ ...ಾ ಮಾಡಿ ತಮ್ಮ ವಿರುದ್ಧ ಬೊಬ್ಬೆಯೇಳದಂತೆ ...ಕೆ-ಜಿಎಲ್‌ಹೆ ನೋಡಿಕೊಂಡರು. ಇದೆಲ್ಲಕ್ಕಿಂತ ಹೆಚ್ಚಾಗಿ ...ಸದ ಯಾವುದೋ ನಿಧಿಯಿಂದ ಸದಸ್ಯರಿಗೆ ಮತ್ತು ...ಪಾರಿಗಳಿಗೆ ಗೋಲ್‌ಮಾಲ್ ಮೊತ್ತವನ್ನು ವಾಪಸ್ ...ಡಿದರು. ಈ ಅಕ್ರಮ ಅಡ್ಜಸ್ಟ್‌ಮೆಂಟ್‌ಗೆ ಅಧಿಕಾರ ...ಕಪಸಂಗಿ ಶಾಹಿ ಕೊಟ್ಟವರ್‍ಯಾರು? ಈ ಭ್ರಷ್ಟಾಚಾರಕ್ಕೆ ...ಕಾರಿ ಇಲಾಖೆ ಸಹಕಾರಿ ಇದೆಯಾ?

... ಈ ಸಿದ್ದಾಪುರದ ಸ್ವಾಹಾದಲ್ಲಿ ಮತ್ತೊಂದು ಮಸಲತ್ತು ...ಗಿದೆ. ಅಪರಾತಪರಾ ಆಗಿರುವ 1.375 ಕೋಟಿ ...ತ್ತ 'ಅಪರಾಧಿ'ಯಿಂದ ವಸೂಲಿ ಮಾಡುವುದಾಗಿ ...ಸ್ಸೆಸ್ ಹೇಳುತ್ತಿದೆ. ಆದರೆ ನಿಯಮದಂತೆ ಇದಕ್ಕೆ ...ಬಂಧಿಸಿದ ಬಡ್ಡಿಯೂ ಆಕರಣೆಯಾಗಬೇಕು. 15-22 ...ರ್ಷದಷ್ಟು ದೀರ್ಘ ಕಾಲ ಈ ಅವ್ಯವಹಾರ ನಡೆದಿರುವುದರಿಂದ ಅಸಲು-ಬಡ್ಡಿ ಸೇರಿದರೆ ಹತ್ತಿರತ್ತಿರ 8 ಕೋಟಿ ತಲುಪುತ್ತದೆ. ಶಾಹೆ ಬಳಗವನ್ನು ಜೈಲಿಗೆ ತಳ್ಳಲು ಇದೊಂದೇ ಕರ್ಮಕಾಂಡ ಸಾಕು. ಇನ್ನಾದರೂ ಸಹಕಾರಿ ಇಲಾಖೆ ಸಂಭಾವಿತನಂತೆ ಪೋಸು ಕೊಡುತ್ತಿರುವ ಶಾಹೆ-ಜಿಎಲ್‌ಹೆಗಳನ್ನು ಪ್ರಕರಣದಲ್ಲಿ ಫಿಕ್ಸ್ ಮಾಡಿ ಸಹಕಾರಿ ಕಾಯ್ದೆ ಕಲಂ 64 ರಂತೆ ಮರುವಿಚಾರಣೆ ನಡೆಸೀತೆ ಎಂಬುದು ತೋಟಿಗರ ಪ್ರಶ್ನೆ.

ಆಸ್ಪತ್ರೆ ಅವ್ಯವಹಾರ

ತೋಟಿಗ ಪರ ನೈಜ ಕಾಳಜಿಯ ಕಡವೆ ಹೆಗಡೆ ತೋಟಿಗರಿಗೆ ಅನುಕೂಲವಾಗುವಂಥ ಸುಸಜ್ಜಿತ ಆಸ್ಪತ್ರೆಯೊಂದನ್ನು ಶಿರಸಿಯಲ್ಲಿ ಸ್ಥಾಪಿಸಬೇಕೆಂಬ ದೊಡ್ಡ ಕನಸು ಕಟ್ಟಿಕೊಂಡಿದ್ದರು. ಆ ಉದ್ದೇಶದಿಂದಲೇ ಜಾನ್ಮನೆ ಫ್ಯಾಮಿಲಿಯಿಂದ ಸಾಮ್ರಾಟ್ ವಸತಿಗೃಹ ಖರೀದಿಸಿದ್ದರು. ಆ ಮೂಲಕ ಆ ಕುಟುಂಬದ ಪಾಲು-ಪಟ್ಟಿ ಪ್ರಕರಣ ಸುಖಾಂತ್ಯಗೊಳಿಸಿದ್ದರು ಬಿಡಿ. ಆದರೆ ಕಡವೆ ಹೆಗಡೆಗೆ ತಮ್ಮ ಜೀವಿತಾವಧಿಯಲ್ಲಿ ಟಿಎಸ್ಸೆಸ್ ಆಸ್ಪತ್ರೆ ಸ್ಥಾಪಿಸಲು ಸಾಧ್ಯವಾಗಿರಲಿಲ್ಲ. ಆ ನಂತರ ಟಿಎಸ್ಸೆಸ್ ಮಾಂಡಲೀಕನಂತಾಡತೊಡಗಿದ್ದ ಶಾಹೆ ಕಡವೆ ಕನಸು ನನಸಾಗಿಸುವೆ ಎಂದು ಬೊಗಳೆ ಬಿಡತೊಡಗಿದ್ದ.


ಯಾವಾಗ ಟಿಎಸ್ಸೆಸ್‌ನ ಆರ್ಥಿಕಸ್ಥಿತಿ ಸುಭದ್ರವಾಯ್ತೋ, ಆಗ ಶಾಹೆಗೆ ಹೈಟೆಕ್ ಆಸ್ಪತ್ರೆ-ಮೆಡಿಕಲ್ ಕಾಲೇಜು ಕಟ್ಟಿ ದಂಧೆ ಮಾಡುವ ತೆವಲು ಜೋರಾಯ್ತು. ಟಿಎಸ್ಸೆಸ್ ವತಿಯಿಂದಲೇ ಆಸ್ಪತ್ರೆ ನಿರ್ಮಿಸಲಾಗುವುದೆಂದು ತೋಟಿಗರ ನಂಬಿಸುತ್ತಲೇ ಬಂದ. 1999ರಿಂದ ಸದಸ್ಯರ 'ಪ್ರೋತ್ಸಾಹಧನ'ವನ್ನು ಆಸ್ಪತ್ರೆ ನಿಧಿಗೆ ವರ್ಗಾಯಿಸಲಾರಂಭಿಸಿದ. ಆದರೆ ಶಾಹೆ ಮತ್ತವನ ಗಂಟು ಕಳ್ಳ ಸಂಗಡಿಗರಾದ ಬಪ್ಪನಳ್ಳಿ ಹೆಗಡೆ, ಜಿಎಲ್‌ಹೆಗಳ ಹಿಡನ್ ಅಜೆಂಡಾನೇ ಬೇರೆಯಿತ್ತು! ಟಿಎಸ್ಸೆಸ್ ದುಡ್ಡಿಂದ ಮುಂದೆ ಮೆಡಿಕಲ್ ಶಿಕ್ಷಣ ವ್ಯಾಪಾರಕ್ಕೆ ಅನುಕೂಲವಾಗುವಂಥ ದೊಡ್ಡದೊಂದು ಆಸ್ಪತ್ರೆ ಕಟ್ಟಡ ಕಟ್ಟಿಕೊಂಡು ಅದನ್ನು ತಮ್ಮ ಖಾಸಗಿ ಒಡೆತನದಲ್ಲಿ ಇಟ್ಟುಕೊಳ್ಳುವ ಕ್ರಿಮಿನಲ್ ಐಡಿಯಾ ಈ ಪಾತಕಿಗಳದಾಗಿತ್ತು.


ಎಂ.ಪಿ.ಹೆಗಡೆ

ಆಸ್ಪತ್ರೆ ಬಿಲ್ಡಿಂಗ್ ನಿರ್ಮಾಣ, ನಿರ್ವಹಣೆ ಮತ್ತು ವೈದ್ಯಕೀಯ ದಂಧೆಗೆಂದು ಒಂದು ಖಾಸಗಿ ಟ್ರಸ್ಟ್ ಅನ್ನು ಶಾಹೆ ಅಂಡ್ ಕೋ ಕಟ್ಟಿಕೊಂಡಿತು; ಅದಕ್ಕೆ ತೋಟಗಾರರ ಸೇವಾ ಸಮಿತಿ (tss) ಎಂದು ಹೆಸರಿಟ್ಟಿತು. ಮೂಲ TSS (ತೋಟಗಾರ್ಸ್ ಸೇಲ್ಸ್ ಸೊಸೈಟಿ) ಮತ್ತು ನಕಲಿ tss (ತೋಟಗಾರ್ಸ್ ಸೇವಾ ಸಮಿತಿ) ಸಂಕ್ಷಿಪ್ತ ಹೆಸರು-ಉಚ್ಚಾರದಲ್ಲಿ ಸಾಮ್ಯತೆ ಇರುವಂತೆ ನೋಡಿಕೊಂಡಿತು. ಆದರೆ ಕಾನೂನಿನಂತೆ ಒಂದಕ್ಕೊಂದರ ಸಂಬಂಧ-ನಿಯಂತ್ರಣ ಇರದಂತೆ ಶಾಹೆ ಬಳಗ ತಂತ್ರಗಾರಿಕೆ ನಡೆಸಿತ್ತು! ಸಣ್ಣ tss ದೊಡ್ಡ TSS ನ ಅಂಗ ಸಂಸ್ಥೆಯೆಂದು ಅಮಾಯಕ ತೋಟಿಗ ಸದಸ್ಯರ ಯಾಮಾರಿಸುವ ಕುಟಿಲ ಕಾರಸ್ಥಾನವಿದು.

ಆಜೀವ ಯಜಮಾನರು

ಅಡಿಕೆ ಬೆಳೆಗಾರರಿಗೆ ತೋಟಗಾರ್ಸ್ ಸೊಸೈಟಿಯೊಂದಿಗಿದ್ದ ಭಾವುಕ ಬಾಂಧವ್ಯದ ದುರ್ಲಾಭ ಎನ್‌ಕ್ಯಾಶ್ ಮಾಡಿಕೊಳ್ಳಲು ಧೂರ್ತ ಶಾಹೆ ಶಿಷ್ಯ ವೃಂದ ಆಸ್ಪತ್ರೆ ಟಿಎಸ್ಸೆಸ್‌ದೇ ಎಂಬ ಭ್ರಮೆ ನಾಜೂಕಾಗಿ ಬಿತ್ತುತ್ತಬಂತು! ತಮಗೆ ಬೇಕಾದ ಕೆಲವು ಆಜ್ಞಾನುಧಾರಿ ಟಿಎಸ್ಸೆಸ್ ಸದಸ್ಯರನ್ನು ಟ್ರಸ್ಟ್‌ನಲ್ಲಿ ಸೇರಿಸಿಕೊಂಡು ಒಂದೆರಡು ವರ್ಷ ಆಸ್ಪತ್ರೆ ಖರ್ಚು-ವೆಚ್ಚ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಮಂಡಿಸುವ ಪ್ರಹಸನವೂ ನಡೆಯಿತು. ನಾಜೂಕಯ್ಯ ಶಾಂತಣ್ಣನನ್ನು ನಂಬಿದ್ದ ಶೇರುದಾರರು ತೋಟಿಗರಿಗೆ ಕಠೋರ ಸತ್ಯ ತಡವಾಗಿ ಅರ್ಥವಾದಾಗ ದೊಡ್ಡ ಆಘಾತವೇ ಆಯ್ತು. ಶಾಹೆ ಪಕ್ಕಾ ಗೋಮುಖ ವ್ಯಾಘ್ರನೆಂಬುದು ಖಾತ್ರಿಯಾಯ್ತು.


ಟಿಎಸ್ಸೆಸ್ ಆಸ್ಪತ್ರೆ


ಟ್ರಸ್ಟ್ (tss) ಮೂಲ ಟಿಎಸ್ಸೆಸ್‌ಗೆ ಸೇರದ ಪ್ರತ್ಯೇಕ ಸಂಸ್ಥೆಯಾಗಿತ್ತು. ಇದಕ್ಕೆ ಶಾಹೆ ಆಜೀವ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದರೆ, ಆತನ ಅತ್ಯಾಪ್ತ ಬಪ್ಪನಳ್ಳಿ ಹೆಗಡೆ ಮತ್ತು ಜಿಎಲ್‌ಹೆ ಆಜೀವ ಟ್ರಸ್ಟಿಗಳಾಗಿದ್ದರು. ಟಿಎಸ್ಸೆಸ್‌ನ ಕೋಟಿ-ಕೋಟಿ ರೂಪಾಯಿಗಳನ್ನು ಆಸ್ಪತ್ರೆ ನೆಪದಲ್ಲಿ ಲೂಟಿ ಮಾಡಲು ಟ್ರಸ್ಟಿಗಳು ಸೊಸೈಟಿ ಬೈಲಾವನ್ನೇ ತಿದ್ದುಪಡಿ ಮಾಡಿಕೊಂಡುಬಿಟ್ಟರು. ಟಿಎಸ್ಸೆಸ್ ಲಾಭದಲ್ಲಿ ಪ್ರತಿ ವರ್ಷ ಶೇ. 20 ರಷ್ಟನ್ನು ಆಸ್ಪತ್ರೆ ನಿಧಿಗೆ ವರ್ಗಾಯಿಸುವ ಅಧಿಕಾರ ತಿದ್ದುಪಡಿಯಿಂದ ಪಡೆದುಕೊಂಡರು. ಈ ತಿದ್ದುಪಡಿಯಲ್ಲಿ ಸಹಕಾರಿ ಇಲಾಖೆಯ ಭ್ರಷ್ಟರದೂ ಕೈವಾಡವಿದೆ. ಟಿಎಸ್ಸೆಸ್‌ನ ಅಪಾರ ಹಣ ಹೊಡೆಯುವ ದುರುದ್ದೇಶದಿಂದಲೇ ಟಿಎಸ್ಸೆಸ್‌ನ ಹಲವು ಹಾನಿಯಲ್ಲಿರುವ ವಿಭಾಗಗಳೆಲ್ಲವೂ ಲಾಭದಲ್ಲಿದೆ ಎಂದು ಅಢಾವೆಯಲ್ಲಿ ಸುಳ್ಳು ಅಂಕಿ-ಅಂಶ ತೋರಿಸಲಾಗುತ್ತಿದೆ.


...ಲ್‌ಕುಮಾರ್

ಸುಮಾರು 25 ಕೋಟಿ ರೂ.ಗೂ ಹೆಚ್ಚು ಹಣ ಟಿಎಸ್ಸೆಸ್‌ನಿಂದ ಲಪಟಾಯಿಸಿರುವ 'ಆಸ್ಪತ್ರೆ ಬಂಧುಗಳು' ಈಗೊಂದು ಭವ್ಯ ಬಿಲ್ಡಿಂಗ್ ಕಟ್ಟಿಕೊಂಡು ಆರೋಗ್ಯ ವ್ಯಾಪಾರದಲ್ಲಿ ನಿರತರಾಗಿದ್ದಾರೆ. ಈ ಬೋಗಸ್ ಆಸ್ಪತ್ರೆಯಿಂದ ಬಡ ತೋಟಿಗನಿಗೇನೂ ಪ್ರಯೋಜನವಿಲ್ಲ. ದೊಡ್ಡಸ್ತಿಕೆ ಕುಬಾಬು, ಪಾಯ್ದೆ, ಆಸ್ತಿಯೆಲ್ಲ ಶಾಹೆ ಹೆಸರಿಗೆ ಸಂದಾಯವಾಗುತ್ತಿದೆಯಷ್ಟೇ! ಆರ್ಥಿಕ ಸಂಕಷ್ಟದಲ್ಲಿರುವ ಸದಸ್ಯರಿಗೆ ಹೆಚ್ಚಿನ ಪ್ರೋತ್ಸಾಹಧನ ಕೊಡಬೇಕಿದ್ದ ಆಡಳಿತ ಮಂಡಳಿ ಅಮಾಯಕ ಸದಸ್ಯರಿಗೆ ದ್ರೋಹ ಮಾಡುತ್ತಿದೆ!! ಸದಸ್ಯರಿಗೆ ಅತ್ತ ಪ್ರೋತ್ಸಾಹ ಹಣವೂ ಇಲ್ಲ; ಇತ್ತ ಆಸ್ಪತ್ರೆಯೂ ಇಲ್ಲ.

ಕೋರ್ಟ್ ಕದನ

ಅವಾಂತರಕಾರಿ tss ಆಸ್ಪತ್ರೆಯ ಖರ್ಚು-ವೆಚ್ಚ ಆಜೀವ ಟ್ರಸ್ಟಿಗಳಿಗಷ್ಟೇ ಗೊತ್ತು. ಯಾರಾದರೂ ಹಣ ದುರುಪಯೋಗದ ಬಗ್ಗೆ ಸೊಲ್ಲೆತ್ತಿದರೆ ಶಾಹೆ ಪುಂಡ ಪಡೆ ಅವರ ಸೊಂಟವೇ ಮುರಿದು ಹಾಕುತ್ತದೆ. ಶಾಹೆ ಗ್ಯಾಂಗಿನ ದಾದಾಗಿರಿ ಮಿತಿಮೀರಿದಾಗ ಒಂದಿಷ್ಟು ಟಿಎಸ್ಸೆಸ್ ಸದಸ್ಯರು ಸೇರಿ "ಟಿಎಸ್ಸೆಸ್ ಹಿತರಕ್ಷಣಾ ವೇದಿಕೆ" ಕಟ್ಟಿಕೊಂಡರು. ಈ ವೇದಿಕೆಯ ಜಿ.ಜಿ. ಹೆಗಡೆ, ಕೋಡಗದ್ದೆ, ಜಿ.ಎಸ್. ಹೆಗಡೆ ಅರಸಿಕೇರಿ, ಡಿ.ವಿ. ಹೆಗಡೆ ಹಳಕೊಪ್ಪ (ಶಾಹೆ ಶಡ್ಡಕ) ಯಾವ ಬೆದರಿಕೆಗೂ ಜಗ್ಗದೆ ಖಾಸಗಿ ಟ್ರಸ್ಟ್ (tss)ಗೆ TSS ನಿಂದ ಕೋಟ್ಯಂತರ ರೂಪಾಯಿ ಅಕ್ರಮವಾಗಿ ವರ್ಗಾಯಿಸಿಕೊಳ್ಳುವುದನ್ನು ಪ್ರಶ್ನಿಸುತ್ತ ಬಂತು. ಅಷ್ಟೇ ಅಲ್ಲ, ಆಸ್ಪತ್ರೆ ಮೂಲ ಟಿಎಸ್ಸೆಸ್‌ನ ಆಸ್ತಿಯಾಗಿ ಮಾಡಿ ಎಂದು ಒತ್ತಾಯಿಸತೊಡಗಿತು. ಶಾಹೆಯ ಧನ-ಸ್ನಾಯು-ರಾಜಕೀಯ ಕರಾಮತ್ತಿನೆದುರು ಹಿತರಕ್ಷಣಾ ವೇದಿಕೆಯವರಿಗೆ ಏನೂ ಮಾಡಲಾಗಲಿಲ್ಲ. ಕೆಲವು ಬಂಡುಕೋರರ ಮೆಂಬರಿಕೆಯನ್ನೇ ಶಾಹೆಯ ಸರ್ವಾಧಿಕಾರಿ ಆಡಳಿತ ಮಂಡಳಿ ರದ್ದು ಮಾಡಿ ಸೇಡು ತೀರಿಸಿಕೊಳ್ಳಹತ್ತಿತು. ಆಗ ವೇದಿಕೆಯವರು ಅನಿವಾರ್ಯವಾಗಿ ನ್ಯಾಯಾಲಯದ ಮೆಟ್ಟಿಲೇರಬೇಕಾಗಿ ಬಂತು. ಜಿ.ಜಿ. ಹೆಗಡೆ ಹಾಕಿದ ಕೇಸಿನಲ್ಲಿ ಉಚ್ಚನ್ಯಾಯಾಲಯ ಸಹಕಾರಿ ಇಲಾಖೆಗೆ ಟಿಎಸ್ಸೆಸ್ ವಿರುದ್ಧ ವಿಚಾರಣೆ ನಡೆಸುವಂತೆ ಆದೇಶಿಸಿತು. ಶಾಹೆ ಕಿತಾಪತಿಯಿಂದ ಈ ಆದೇಶವನ್ನು ಸಹಕಾರಿ ಇಲಾಖಾಧಿಕಾರಿಗಳು ಧಿಕ್ಕರಿಸಿಬಿಟ್ಟರು. ಆಗ ವೇದಿಕೆ ನ್ಯಾಯಾಂಗ ನಿಂದನೆ ಕೇಸ್ ಹಾಕಿತು. ಬೆಚ್ಚಿಬಿದ್ದ ಸಹಕಾರಿ ಇಲಾಖಾಧಿಕಾರಿಗಳು 2007 ರಲ್ಲಿ ಒಂದು ವಿಚಾರಣೆಯನ್ನು ನಡೆಸಬೇಕಾಗಿ ಬಂತು!


ರವೀಶ್ ಹೆಗಡೆ

ಟಿಎಸ್ಸೆಸ್ ದುಡ್ಡಿಂದ ಕಟ್ಟಿದ ಆಸ್ಪತ್ರೆ ಟಿಎಸ್ಸೆಸ್‌ನ ಒಂದು ಅಂಗ ಸಂಸ್ಥೆ. ಅದರೆಲ್ಲ ಉಸ್ತುವಾರಿ-ಆಡಳಿತ ಟಿಎಸ್ಸೆಸ್‌ನಿಂದಲೇ ನಡೆಯಬೇಕೆಂದು 15.10.2007 ರಂದು ಸಹಕಾರ ಸಂಘಗಳ ಅಪರ ನಿಬಂಧಕರು ಆದೇಶಿಸಿ ದರು. ಅಲ್ಲದೆ 20.12.2007 ರಂದು ಕಾರವಾರದ ಡಿಆರ್ ಮತ್ತೊಂದು ಆದೇಶ ಹೊರಡಿಸಿ "ಟ್ರಸ್ಟ್ (tss) ಸೊಸೈಟಿ (TSS)ನ ಒಂದು ಯೂನಿಟ್ ಎಂದು ಪರಿಗಣಿಸಲು ಸಂಘದ ಬೈಲಾದಲ್ಲಿ ತಿದ್ದುಪಡಿ ತರಬೇಕು" ಎಂದು ಶಾಹೆಗೆ ಕೆನ್ನೆಗೆ ಬಾರಿಸಿದಂತೆ ಹೇಳಿದರು. ನಿರ್ಲಜ್ಜ ಶಾಹೆ ಕೋಳಿ ಈ ಆದೇಶವನ್ನು ಬರೋಬ್ಬರಿ ಎರಡು ವರ್ಷ ಕುಂಡೆ ಅಡಿಗೆ ಹಾಕಿಕೊಂಡು ಕುಳಿತಿತು. ಈ ಬಗ್ಗೆ ಸಹಕಾರಿ ಇಲಾಖೆಯ ರಿಜಿಸ್ಟ್ರಾರ್ ಸಿ.ಎಸ್. ಪುಟ್ಟ ರಾಜುಗೆ ದೂರು ಕೊಟ್ಟರೆ ಆತ ಶಾಹಿ ಏಜೆಂಟ ನಂತೆ ವರ್ತಿಸಲಾರಂಭಿಸಿದ. ಆಗ ಟಿಎಸ್ಸೆಸ್‌ನ ನೈಜ ಹಿತರಕ್ಷಕರು ಲೋಕಾಯುಕ್ತಕ್ಕೆ ದೂರು ಕೊಟ್ಟರು......

ಆಗ ಅನಿವಾರ್ಯವಾಗಿ ಸಹಕಾರ ಇಲಾಖೆಯ ಅಧಿಕಾರಿಗಳು ಟಿಎಸ್ಸೆಸ್‌ನ ತರಲೆ ತಂಡಕ್ಕೆ ಆಸ್ಪತ್ರೆ ಟಿಎಸ್ಸೆಸ್ ಸುಪರ್ದಿಗೆ ತರುವಂತೆ ತಾಕೀತು ಮಾಡಿದರು. ಟಿಎಸ್ಸೆಸ್‌ನ ಅಪಾರ ನಿಧಿಯ ರುಚಿ ಹತ್ತಿದ್ದ ಧನಪಿಶಾಚಿಗಳು ಇದೆಲ್ಲ ಒಪ್ಪುತ್ತಾರಾ? ಸಹಕಾರ ಇಲಾಖೆಯ ಆದೇಶದ ವಿರುದ್ಧ ದೊಡ್ಡ TSS ಮತ್ತು ಸಣ್ಣ tss ಒಂದಾಗಿ ನ್ಯಾಯಾಲಯಕ್ಕೆ ಹೋಯ್ತು. ಎರಡೂ ಅಡ್ಡೆಗೆ ಶಾಹೆಯೇ ಅಧ್ಯಕ್ಷನೆಂಬುದಿಲ್ಲಿ ಗಮನಾರ್ಹ!

ಆಜ್ಞೆ-ತಡೆಯಾಜ್ಞೆ

"ಆಸ್ಪತ್ರೆಗೂ-ಟಿಎಸ್ಸೆಸ್‌ಗೂ ಯಾವುದೇ ಸಂಬಂಧವಿಲ್ಲ; ಅದೇನಿದ್ದರೂ ನಮ್ಮ ಖಾಸಗಿ ಟ್ರಸ್ಟಿನ ಆಸ್ತಿ" ಎಂಬ ಆತ್ಮಘಾತುಕ ವಾದವನ್ನು ತೋಟಿಗರ ಶತ್ರು ಶಾಹೆ ಬಳಗ ಮಂಡಿಸಿತು. ಆದರೆ ಇದನ್ನು ಹೈಕೋರ್ಟ್‌ನ ಧಾರವಾಡ ಪೀಠ 29-6-2010 ರಂದು ತಿರಸ್ಕರಿಸಿಬಿಟ್ಟಿತು. ಆಸ್ಪತ್ರೆ ಟಿಎಸ್ಸೆಸ್ ತೆಕ್ಕೆಯಲ್ಲಿರಬೇಕೆಂಬ ಸಹಕಾರ ಇಲಾಖೆಯ ಆದೇಶವನ್ನು ಎತ್ತಿ ಹಿಡಿಯಿತು. ಈ ಆದೇಶದಿಂದ ಕಂಗೆಟ್ಟ ಖಾಸಗಿ ಟ್ರಸ್ಟ್‌ನ ಹೆಗಡೆತ್ರಯರು 'ಲಾಭದಾಯಕ' ಆಸ್ಪತ್ರೆ ಸ್ವಂತ ಕಬ್ಜಾದಿಂದ ಬಿಟ್ಟುಕೊಡಬಾರದೆಂದು ತಿಪ್ಪರಲಾಗ ಹಾಕತೊಡಗಿದರು.

ಈಗ ಈ ಅಡ್ನಾಡಿಗಳು ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ತಂದುಕೊಂಡಿದ್ದಾರೆ! ಅಲ್ಲಿಗೆ ತೋಟಿಗರ ಬೆವರಿನ ಹಣದ ಆಸ್ಪತ್ರೆ ತೋಟಿಗರಿಗೆ ಬಿಟ್ಟುಕೊಡದೆ ಹೈಜಾಕ್ ಮಾಡುವ ಹಠಕ್ಕೆ ಶಾಹೆ ಮಿತ್ರಮಂಡಳಿ ಬಿದ್ದಿರುವುದು ಇಡೀ ಶಿರಸಿ ಸೀಮೆಗೇ ಖಾತ್ರಿಯಾಗಿ ಹೋಯ್ತು!! ತೋಟಿಗರ ಆಸ್ಪತ್ರೆ ನಮಗೆ ಬೇಡವೆಂದು ಟಿಎಸ್ಸೆಸ್‌ನ ಅಧ್ಯಕ್ಷನೇ ಹೇಳುತ್ತಾನೆಂದರೆ, ಇದಕ್ಕಿಂತ ದೊಡ್ಡ ಅಪರಾಧ-ದ್ರೋಹ ಇನ್ನೇನಿದೆ?

ಸೂಪರ್ ಸೀಡ್ ಮಾಡಿ

ಈಗ ಹೇಳಿ. ತೋಟಿಗರ ಕಾಡುತ್ತಿರುವ-ಅವ್ಯವಹಾರದ ಅಡ್ಡೆಯಾಗಿರುವ ಟಿಎಸ್ಸೆಸ್ ಸೂಪರ್ ಸೀಡ್ ಮಾಡಬೇಕಾ-ಬೇಡವಾ? ಹಾಡುಹಗಲೇ ಸಹಕಾರಿ ಸಂಸ್ಥೆಯನ್ನು ಲೂಟಿ ಮಾಡುತ್ತಿರುವ ಶಾಂತಾರಾಮ ಹೆಗಡೆ ಮತ್ತವನ ಮಿತ್ರದ್ವಯರನ್ನು ಜೈಲಿಗೆ ಕಳಿಸಬೇಕಾ-ಬೇಡವಾ? ಇನ್ನಾದರೂ ಸಹಕಾರಿ ಮಂತ್ರಿ ಲಕ್ಷ್ಮಣ ಸೌದಿ. ಇತ್ತ ಗಮನಹರಿಸಿ ಟಿಎಸ್ಸೆಸ್ ಉಳಿಸುವರಾ? ಶಿರಸಿ ಸೀಮೆಯ ಅಪಾರ ಅಡಿಕೆ ತೋಟಿಗರ ಬದುಕಿನೊಂದಿಗೆ ಬದುಕಾಗಿರುವ-ಅವರಿಗೆ ಅನಿವಾರ್ಯವಾಗಿರುವ ಟಿಎಸ್ಸೆಸ್ ಅನ್ನು ಧನಪಿಶಾಚಿ ಆಡಳಿತ ಮಂಡಳಿಯಿಂದ ಸಹಕಾರಿ ಇಲಾಖೆ ಪ್ರಭೃತಿಗಳು ಬಚಾವ್ ಮಾಡಿಯಾರೇ? ಶಿರಸಿ ಸೀಮೆಯ ಅಡಿಕೆ ಬೆಳೆಗಾರರು ಭಯಬಿಟ್ಟು ಬೀದಿಗಿಳಿದು ಶಾಹೆಯ ಮುಖವಾಡ ಹರಿಯುವುದು ಯಾವಾಗ?

• ನಹುಶ

ಪೊಕ್ಕು ಪುಢಾರಿ

ಅಬಲರನ್ನು ಸಬಲರಾಗಿಸುವುದೇ ಸಹಕಾರ ಎನ್ನುತ್ತಿದ್ದರು ಟಿಎಸ್ಸೆಸ್ ಜನಕ ಕಡವೆ ಹೆಗಡೆ. ದುರಂತವೆಂದರೆ ಈತನ ಅಳಿಯ ಶಾಂತರಾಮ ಹೆಗಡೆ ಟಿಎಸ್ಸೆಸ್ ಅಧ್ಯಕ್ಷರಾದ ಬಳಿಕ ಅಸಹಾಯಕ ಅಡಿಕೆ ಬೆಳೆಗಾರರನ್ನು ಇನ್ನಷ್ಟು ಅಶಕ್ತರಾಗಿಸಿ ಹಾರಾಡುತ್ತಿದ್ದಾನೆ. ಸಂಘದ ಶೇ. 85 ರಷ್ಟು ಸದಸ್ಯರು ಆರ್ಥಿಕವಾಗಿ ದುರ್ಬಲರು. ಅವರಿಗೆ ಸಂಘವನ್ನು ಎದುರಾಕಿಕೊಂಡು ಬದುಕಲಾಗದು. ತೋಟಿಗರ ಈ ಗೋಳೇ ಶಾಹೆ ಹಾರಾಟಕ್ಕೆಲ್ಲ ಬಂಡವಾಳ. ದುರ್ಬಲ ಸದಸ್ಯರು ಶಾಹೆಯ ಸ್ವಾಹಾ-ದಾದಾಗಿರಿ ಪ್ರತಿಭಟಿಸುವುದಾದರೂ ಹೇಗೆ?

ಶಾಹೆ ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆಯ ಬಗಲಬಚ್ಚಾ. ಒಮ್ಮೆ ಅಸೆಂಬ್ಲಿಗೂ ನಿಂತು ಮಣ್ಣು ಮುಕ್ಕಿದ್ದಾನೆ. ಈತನ ಕಾಂಗ್ರೆಸ್ ರಾಜಕಾರಣಕ್ಕೆ ಟಿಎಸ್ಸೆಸ್‌ನ ಕಾರು-ಕಾಸು-ಫೋನ್ ಯಥೇಚ್ಛವಾಗಿ ಬಳಕೆಯಾಗುತ್ತಿದೆ. ಸಭ್ಯ ಸಜ್ಜನನಂತೆ ಕಾಣಿಸುವ ಶಾಹೆಯ ಹೊರ ಚಹರೆಗೆ ಮೋಸಹೋಗಿ ಹಲವು ಸಂಘ-ಸಂಸ್ಥೆಯಲ್ಲೀತನಿಗೆ ದೊಡ್ಡ-ದೊಡ್ಡ ಕುರ್ಚಿಗಳನ್ನೇ ಕೊಡಲಾಗಿದೆ. ಆದರೆ ಈ ಹೇತ್ಲಾಂಡಿ ಹೋದಲ್ಲೆಲ್ಲ ಅನಿಷ್ಟವೇ! ಈತನ ಅಧ್ಯಕ್ಷತೆಯಲ್ಲಿ ಡಿಸಿಸಿ ಬರ್ಬಾದ್ ಆಗಿಹೋಗಿದೆ. ಜಿಲ್ಲೆಯಲ್ಲಿ ಕಾಂಗ್ರೆಸ್ ನಿರ್ನಾಮ ಮಾಡಿದ್ದೇ ಈ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ. ಈತನ ಮೂತಿ ನೋಡಿದರೆ ಮೂರು ಮತ ಕೂಡಾ ಬರದು.

ಕ್ಯಾಮ್ಕೋಕ್ಕೆ ಪರ್ಯಾಯವಾಗಿ ಕ್ಯಾಮ್ಕೊ ಕಟ್ಟುತ್ತೇನೆಂದು ಹೇಳಿದ ಈತ ಮಲೆನಾಡಿನ ಬೆಳೆಗಾರರಿಗೆ ಒಳ್ಳೆಯದೇನೂ ಮಾಡಿಲ್ಲ. ಬದಲಿಗೆ ಇವತ್ತು ಈ ಕ್ಯಾಮ್ಕೋ ಅಡಿಕೆ ಬೆಳೆಗಾರರಿಗೆ ಯೋಗ್ಯ ರೇಟು ಕೊಡಲಾಗದೆ ಏದುಸಿರುಬಿಡುತ್ತಿದೆ; ಲಾಸ್‌ನಲ್ಲಿದೆ. ಹಿಂದೊಮ್ಮೆ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ (ಕೆಡಿಸಿಸಿ) ಅಧ್ಯಕ್ಷನೂ ಆಗಿದ್ದ ಈತ ಕಿಸಿದಿದ್ದೇನೂ ಇಲ್ಲ. ದೇಶಪಾಂಡೆ ಈತ ತನ್ನ ಗುಲಾಮನೆಂಬ ಒಂದೇ ಅರ್ಹತೆಗಾಗಿ ಈತನಿಗೆ ಮತ್ತೆ ಕೆಡಿಸಿಸಿ ಕುರ್ಚಿ ಕೊಡಿಸಿದ್ದಾನೆ. ಕೆಡಿಸಿಸಿಗಿದು ಕೇಡುಗಾಲವೆಂದು ನೌಕರರು-ಆಡಳಿತ ಮಂಡಳಿಯವರು ಪಿಸುಗುಡುತ್ತಿದ್ದಾರೆ. ಅತ್ತ ಶಿರಸಿಯ ಮಾಡರ್ನ್ ಎಜ್ಯುಕೇಷನ್ ಸೊಸೈಟಿಯ ಅಧ್ಯಕ್ಷ ಸ್ಥಾನಕ್ಕೆ ಹಲವು ಕರಾಮತ್ತು ಮಾಡಿ ಏರಿದ್ದಾನೆ. ತನ್ನ ಖಾಸಗಿ ಟ್ರಸ್ಟ್ ಆಸ್ಪತ್ರೆಗೆ ಎಂಇಎಸ್‌ನ ಜಾಗವನ್ನೇ ಕಬಳಿಸಿದ ಈತ ದ್ರೋಹಿ ಇಂಥ ವಂಚಕ ಅಜೆಂಡಾ ಇಟ್ಟುಕೊಂಡೇ ಅದರ ಅಧ್ಯಕ್ಷನಾಗಿದ್ದಾನೆ. ಈ ಪೊಕ್ಕ ಸಂಸ್ಥೆಗಳೊಂದೂ ಉದ್ಧಾರವಾದ ಕುರುಹುಗಳಿಲ್ಲ. ಟಿಎಸ್ಸೆಸ್ ದಿವಾಳಿಯಾಗುತ್ತಿದೆ.

ಶಾಹೆಯ ಸ್ವಾಹಾ ಕಾರ್ಯಾಚರಣೆ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಟಿಎಸ್ಸೆಸ್‌ನಲ್ಲಿ ಹಿತರಕ್ಷಣಾ ವೇದಿಕೆಯವರ ಪ್ರಯತ್ನದಿಂದ ಈಗ ಸಹಕಾರಿ ಇಲಾಖೆ ಟಿಎಸ್ಸೆಸ್ ಕರ್ಮಕಾಂಡಗಳನ್ನು ಸಹಕಾರಿ ಕಾಯ್ದೆಯ 64 ನೇ ಕಲಮ್‌ನಂತೆ ವಿಚಾರಣೆ ನಡೆಸುತ್ತಿದೆ. ಇದರಿಂದ ಬಣ್ಣಗೆಟ್ಟಿರುವ ಶಾಹೆ ಡ್ಯಾಮೇಜು ಕಂಟ್ರೋಲ್‌ಗೆ ತನ್ನ ಚೇಲಾ-ಚಮಚಾಗಳದೊಂದು "ಟಿಎಸ್ಸೆಸ್ ಅಭಿಮಾನಿ ಬಳಗ" ಕಟ್ಟಿ ಅಖಾಡಕ್ಕೆ ಛೂಬಿಟ್ಟಿದ್ದಾನೆ. ಈ ಶಾಹೆ ಅಭಿಮಾನಿ ಬಳಗ ತಮ್ಮ ಗುರು "ಸಾಚಾ.... ಟಿಎಸ್ಸೆಸ್‌ನಲ್ಲೂ ಗೋಲ್‌ಮಾಲ್ ಇಲ್ಲ...." ಎಂದು ಸ್ಥಳೀಯ ಪತ್ರಿಕೆಗಳಿಗೆ ಜಾಹೀರಾತಿನ ಮೇಲೆ ಜಾಹೀರಾತು ಕೊಡುತ್ತಿದೆ. ಹೀಗೆ ಆ್ಯಡ್ ಕೊಡುತ್ತಿರುವುದು ಶಾಹೆನ ಅಕ್ರಮ ಋಣದಲ್ಲಿರುವವರು ಅಥವಾ ಬ್ಲ್ಯಾಕ್‌ಮೇಲ್‌ಗೆ ಸಿಲುಕಿರುವವರು ಆ್ಯಡ್‌ಗಳ ಪ್ರಾಯೋಜಕನೂ ಶಾಂತಣ್ಣನೇ! ಪಾಪ ಎಂಥ ಗತಿ ಬಂತು!!


ಆ್ಯಡ್ ಕೊಟ್ಟಿರುವ ನಾದಗುಳಿ ಶರ್ಮನ ಮರ್ಮವನ್ನೇ ನೋಡಿ. ಈತ ಟಿಎಸ್ಸೆಸ್‌ನ ತರಲೆ ಎಂಡಿ ರವೀಶ್ ಹೆಗಡೆಯ ಖಾಸಾ ಭಾವ ಸತೀಶ್ ಹೆಗಡೆಯ ತಂದೆ. ಈತನ ಅಡಿಕೆ ಟ್ರೇಡಿಂಗ್ ಕಂಪನಿಗೆ ಟಿಎಸ್ಸೆಸ್‌ನಿಂದ ಅಪಾರ ಅಕ್ರಮ ಅನುಕೂಲ-ಲಾಭ ಸಿಗುತ್ತಿದೆ. ಇಂಥ ಒಂದಿಷ್ಟು ಅವ್ಯವಹಾರಿಗಳನ್ನು ರಕ್ಷಣೆಗೆಂದು ಘೋಷಿಸಿಕೊಂಡಿದ್ದಾನೆ ಶಾಹೆ! ●

ಬಳ್ಳಾರಿಗೆ ಬರುತ್ತಿದ್ದಾಳೆ ಕಳ್ಳರ ನಾಯಕಿ



ಬಿಜೆಪಿಯ ಒಂದು ಗುಂಪಿನ ನಾಯಕಿ ಸುಷ್ಮಾ ಸ್ವರಾಜ್ ಇದೇ ಆಗಸ್ಟ್ 20 ರಂದು ಬಳ್ಳಾರಿಗೆ ಬರುತ್ತಿದ್ದಾರೆ. ಈಕೆಯ ಪಾವನ ಪಾದ ಆಗಮಿಸುತ್ತಿರುವುದು ವರಮಹಾಲಕ್ಷ್ಮಿ ಪೂಜೆಗೆ. ಅದೇ ಟೈಮಿಗೆ ಬಳ್ಳಾರಿಯಲ್ಲಿ ರಾಜ್ಯ ಬಿಜೆಪಿಗಳ ಸಮಾವೇಶವೂ ಆರೇಂಜ್ ಆಗಿದೆ.

ಆದರೆ ಈ ಬಾರಿ ಇವೆಲ್ಲ ಹಿಂದೆ ನಡೆಯುತ್ತಿದ್ದಂತೆ ಸರಾಗವಾಗಿ ನಡೆದು ಹೋಗುವಂತೆ ಕಾಣುತ್ತಿಲ್ಲ.



ರಾಜ್ಯ ಹಾಗೂ ರಾಷ್ಟ್ರಮಟ್ಟದ ಬಿಜೆಪಿಯಲ್ಲಿ ರೆಡ್ಡಿ ಗ್ಯಾಂಗ್‌ಗೆ ಮೊದಲಿದ್ದಂತಹ ತೂಕವಾಗಲಿ, ಮಹತ್ವವಾಗಲಿ ಈಗಿಲ್ಲ. ರೆಡ್ಡಿಗಳ ವಿರುದ್ಧ ಕಾಂಗ್ರೆಸ್‌ನವರು ನಿರ್ಣಾಯಕ ಸಮರ ಸಾರಿರುವುದು ಒಂದು ಕಡೆಯಿದ್ದರೆ ಮತ್ತೊಂದೆಡೆ ಈ ರೆಡ್ಡಿಗಳೇ ಜೈಲಿಗೆ ಹೋಗಲು ಏನೇನು ಬೇಕೊ ಅದೆಲ್ಲಾ ಅಕ್ರಮಗಳನ್ನು ಮಾಡಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ.

ಆದರೂ ಸುಷ್ಮಾ ಪಾಲಿಗೆ ಈ ಖದೀಮರು ಈಗಲೂ 24 ಕ್ಯಾರೆಟ್ ಗೋಲ್ಡ್ ತರವೇ ಕಾಣುತ್ತಿರುವುದು ಸೋಜಿಗ ತರುತ್ತಿದೆ.

ರೆಡ್ಡಿ ಒಬ್ಬ ತಲೆನೋವು ಅಂದ ಗಡ್ಕರಿ

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಬಳ್ಳಾರಿ ರೆಡ್ಡಿಗಳ ಬಗ್ಗೆ ಬಿಜೆಪಿ ಹೈಕಮಾಂಡ್‌ಗೆ ಕಿರಿಕಿರಿಯಾಗಿದೆ. ರೆಡ್ಡಿಗಳ ದುಡ್ಡು ತಿನ್ನುತ್ತಿರುವ ಒಬ್ಬ ಸುಷ್ಮಾ ಸ್ವರಾಜ್‌ಳನ್ನು ಬಿಟ್ಟರೆ ಉಳಿದಂತೆ ನಿತಿನ್ ಗಡ್ಕರಿಗಾಗಲಿ, ಅಡ್ವಾಣಿಗಾಗಲಿ ರೆಡ್ಡಿಗಳನ್ನು ತೀರಾ ಮುದ್ದು ಮಾಡುವ ಅಪೇಕ್ಷೆ ಕಡಿಮೆಯಾಗಿದೆ. ಗಣಿ ದುಡ್ಡಿನಿಂದ ಮುಂಬರುವ ಲೋಕಸಭಾ ಎಲೆಕ್ಷನ್ ಖರ್ಚಿಗೆ ಅನುಕೂಲವಾಗಲಿದೆ ಎಂಬ ಆಸೆ ಆದರಲ್ಲಿ ಒಂದು. ಮತ್ತೊಂದೆಡೆ ಯಡ್ಡಿ ವಿರುದ್ಧ ರೆಡ್ಡಿಗಳ ಕಂಪ್ಲೇಂಟುಗಳಿಗೆ ಕೇರ್ ಮಾಡದೆ ನಿರ್ಲಕ್ಷಿಸಿದ್ದು ಎರಡನೇ ಹೆಜ್ಜೆಯಾಗಿತ್ತು.

ಈ ಗಲಾಟೆ ನಡೆದಿರುವಾಗಲೇ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ದೆಹಲಿಯ ಒಬ್ಬ ಆಪ್ತ ಪತ್ರಕರ್ತರೊಂದಿಗೆ "ಈ ರೆಡ್ಡಿಗಳು ನಮ್ಮ ಪಾರ್ಟಿಗೆ ತಲೆನೋವು ಆಗಿಬಿಟ್ಟಿದ್ದಾರೆ" ಎಂದಿದ್ದಾರೆ. ನಾಲ್ಕಾರು ಜನರಿಗೆ ಕೇಳಿಸುವಂತೆಯೇ ಗಡ್ಕರಿ ಈ ಮಾತು ಹೇಳಿರುವುದು ಗಮನಾರ್ಹವಾಗಿದೆ. ಇದರರ್ಥ

ಇದ್ದರೂ ಅದಕ್ಕಾಗಿ ತೀರಾ ಪಾರ್ಟಿಯ ಮರ್ಯಾದೆ ಹಾಳಾಗಲು ಬಿಡಬಾರದೆಂಬ ಲೆಕ್ಕಾಚಾರವೂ ನಡೆಯುತ್ತಿದೆ. ಇದಕ್ಕೊಂದು ಪುಟ್ಟ ನಿದರ್ಶನ ನೀಡಬೇಕೆಂದರೆ ಇತ್ತೀಚಿನ ಕರ್ನಾಟಕ ಬಿಜೆಪಿ ಬಿಕ್ಕಟ್ಟು ದೆಹಲಿ ತಲುಪಿದಾಗ ಬಿಜೆಪಿ ಹೈಕಮಾಂಡ್ ಒಂದು ಡಬಲ್ ಗೇಮ್ ಮಾಡಿತು. ಬಿಕ್ಕಟ್ಟಿನ ಸಮಯದಲ್ಲಿ ಶೋಭಾ-ಸೋಮಣ್ಣನನ್ನು ಮಂತ್ರಿ ಮಾಡುವ ಪ್ರಸ್ತಾಪ ತಂದಿದ್ದ ಯಡ್ಡಿಯ ಬಾಯಿ ಮುಚ್ಚಿಸಿದ್ದು ಇಷ್ಟೆ. ಗಡ್ಕರಿಗೆ ರೆಡ್ಡಿಗಳ ದುಡ್ಡು ಬೇಡ ಅಂತಿಲ್ಲ, ಆದರೆ ಅವರ ಪಾಪಕಾರ್ಯಗಳ ಜೊತೆ ನೇರವಾಗಿ ಗುರುತಿಸಿಕೊಳ್ಳುವ ಬಯಕೆ ಇಲ್ಲ. ಅಡ್ವಾಣಿ ನಿಲುವು ಇದಕ್ಕಿಂತ ಭಿನ್ನವಲ್ಲ. ರೆಡ್ಡಿಗಿಂತ ಪಾರ್ಟಿ ಮುಖ್ಯ ಇವರಿಗೆ. ಇವರಿಬ್ಬರಿಗೂ ರೆಡ್ಡಿಗಳ ಬಗ್ಗೆ ವೈಯಕ್ತಿಕವಾಗಿ ಇರುವ ಇನ್ನೊಂದು ಅಸಮಾಧಾನ ಏನೆಂದರೆ 'ಸುಷ್ಮಾರನ್ನು ಭಾರತದ ಮುಂದಿನ ಪ್ರಧಾನಿ ಮಾಡುವುದಾಗಿ' ಅವರು ಪದೇಪದೇ ಘೋಷಿಸುತ್ತಿರುವುದು....

ಹೇಗೊ ಮಾಡಿ ಇನ್ನು ಮೂರು ವರ್ಷ ಕಾಲಾಯಾಪನೆ ಮಾಡಿಬಿಟ್ಟರೆ... 2014 ರ ಸಂಸತ್ ಚುನಾವಣೆ ಗೆದ್ದರೆ.... ತಾನೇ ಪ್ರಧಾನಿಯಲ್ಲವೇ ಎಂಬ ಕೊನೆಯ ಕನಸು ವಯೋವೃದ್ಧ ಅಡ್ವಾಣಿಗೆ ಈಗಲೂ ಬೀಳುತ್ತಿದೆ. ಆದರೆ ರೆಡ್ಡಿ ಹಾಗೂ ಸುಷ್ಮಾರ ನಂಟು ಅವರ ಕನಸಿಗೆ ಕಿರಿಕಿರಿ ಉಂಟುಮಾಡುತ್ತಿದೆ.

ಈ ಯಾವ ಮುಲಾಜು ಅಥವಾ ಮುಜುಗರಗಳೇ ಇರದೆ ರೆಡ್ಡಿಗಳ ರಕ್ಷಣೆಗೆ ನಿಂತಿರುವ ಏಕೈಕ ಬಿಜೆಪಿಣಿ ಎಂದರೆ ಸುಷ್ಮಾ ಸ್ವರಾಜ್!

ಪಾರ್ಟಿ ಮರ್ಯಾದೆ ಹೋದರೇನು, ಅಕ್ರಮ ಗಣಿಗಾರಿಕೆಯನ್ನೇ ಮಾಡಿದರೇನು, ಮುಖ್ಯಮಂತ್ರಿ ಯಡಿಯೂರಪ್ಪನಿಗೆ ರೆಡ್ಡಿಗಳು ಫುಟ್‌ಬಾಲ್‌ನಂತೆ ಒದ್ದರೂ ತಾನೇ ಏನು ಈ ಸುಷ್ಮಾ ಮಾತ್ರ ಯಾವಾಗಲೂ ರೆಡ್ಡಿಗಳ ಪರ......!

ಯಾಕೆ ಹೀಗೆ?

ಏನಿದರ ಮರ್ಮ?

ಮೊನ್ನೆ ಆಗಸ್ಟ್ 10 ರಂದು ಬಳ್ಳಾರಿಯ ಕಾಂಗ್ರೆಸ್ ಸಮಾವೇಶದಲ್ಲಿ ಎಂ.ಪಿ. ಪ್ರಕಾಶ್ ಬಹಳ ಸಿಂಪಲ್ಲಾಗಿ ಈ ಒಗಟನ್ನು ಬಿಡಿಸಿದ್ದರು.

'ಸುಷ್ಮಾ ಬಳ್ಳಾರಿಗೆ ಬರುವುದು ಪೂಜೆ ಮಾಡಿ 'ಲಕ್ಷ್ಮಿ' ತಗೊಂಡು ಹೋಗಲು' ಎನ್ನುವ ಮಾತದು.

ಇದೇನು ಸುಳ್ಳಿರಲಿಕ್ಕಿಲ್ಲ ಹಾಗೂ ವಿಷಯ ಅದಷ್ಟೇ ಅಲ್ಲ, ಮುಂದಿನ ಲೋಕಸಭಾ ಚುನಾವಣೆಗೆ ರೆಡ್ಡಿಗಳು ಮೂರು ಸಾವಿರ ಕೋಟಿ ರೂಪಾಯಿ ಕೊಡುವುದಾಗಿಯೂ, ತಾವೇ ಮುನ್ನೂರು ಕ್ಷೇತ್ರಗಳಲ್ಲಿ ಬಿಜೆಪಿ ಕ್ಯಾಂಡಿಡೇಟ್‌ಗಳಿಗೆ ತಲಾ 10 ಕೋಟಿ ರೂ. ಒದಗಿಸಿ, ಗೆಲ್ಲಿಸಿ ಸುಷ್ಮಾ ಪ್ರಧಾನಿಯಾಗುವಂತೆ ನೋಡಿಕೊಳ್ಳುವುದಾಗಿಯೂ ಭರವಸೆ ನೀಡಿದ್ದಾರೆ.

ಸುಷ್ಮಾರ ತಲೆ ಕೆಡಿಸಿರುವುದು ಇದೇ ವಿಚಾರ!

ಯಡ್ಡಿ ಬೇಡ-ರೆಡ್ಡಿ ಬೇಕು

ಕಳೆದ ಬಾರಿ ಬಿಜೆಪಿಗಳ ಸಾಧನಾ ಸಮಾವೇಶಕ್ಕೆ ಬಂದಿದ್ದ ಸುಷ್ಮಾ ಯಡ್ಡಿ ಸರ್ಕಾರದ ಸಾಧನೆಗಳ ಬಗ್ಗೆ ಒಂದಕ್ಷರವನ್ನೂ ಹೇಳಲಿಲ್ಲ. ಅದರ ಬದಲಾಗಿ 'ನನಗೆ ಸಮಯ ಕಡಿಮೆ ಇದೆ' ಎಂದು ಶುರುಮಾಡಿ "ಕಂದಾಯ, ಆರೋಗ್ಯ ಇಲಾಖೆ ಹಾಗೂ ಟೂರಿಸಂ ಇಲಾಖೆಗಳು ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಕೆಎಂಎಫ್ ಉತ್ತಮ ಸಾಧನೆ ಮಾಡುತ್ತಿದೆ ಉಳಿದವರ ಬಗ್ಗೆ ಬೇರೆ ನಾಯಕರು ಹೇಳುತ್ತಾರೆ" ಎಂದು ಹೇಳಿ ಸುಮ್ಮನಾಗಿಬಿಟ್ಟರು.

ಅವತ್ತು ಸುಷ್ಮಾ ಹೊಗಳಿದ್ದು ಈ ರೆಡ್ಡಿ ಗ್ಯಾಂಗ್ ನಿರ್ವಹಿಸುತ್ತಿದ್ದ ಇಲಾಖೆಗಳ ಬಗ್ಗೆ ಮಾತ್ರ!

ಈಕೆ ಎಂಥ ದಡ್ಡಿ ಹಾಗೂ ಅವಿವೇಕಿ ಹೆಂಗಸೆಂದರೆ ರಾಜ್ಯದ ನೆರೆಪೀಡಿತರ ಬಗ್ಗೆ ಚಕಾರವೆತ್ತದೆ ಜನಾರ್ದನ ರೆಡ್ಡಿ ಅನೇಕ ಏರ್‌ಪೋರ್ಟ್ ನಿರ್ಮಿಸುತ್ತಾ ದೊಡ್ಡ ಸಾಧನೆ ಮಾಡುತ್ತಿದ್ದಾರೆ ಎಂದಿದ್ದರು.

ರೆಡ್ಡಿ-ಪಾಕ್ ನಂಟು

ಪ್ರಜಾವಾಣಿಯ ವರದಿಗಾರ ಸುಬ್ರಮಣ್ಯ ಬರೆದದ್ದನ್ನು ಹೊರತುಪಡಿಸಿದರೆ ಕನ್ನಡ ಮೀಡಿಯಾಗಳು ಅಷ್ಟೇನೂ

ರೆಡ್ಡಿಗೆ ಐಡಿಯಾ ಕೊಡುತ್ತಿರುವ ಮುಠ್ಠಾಳ ಯಾರಿರಬಹುದು?

ರಾಶಿ ರಾಶಿ ದುಡ್ಡೂ.....!

ದುಡ್ಡು ಚೆಲ್ಲಿ ಖರೀದಿಸಿರುವ ತೋಳ್ಬಲ.....!!

ಇವೆರಡೂ ಅಂಶಗಳೂ ವಿವೇಕಿಗಳ ಹತ್ತಿರ ಇದ್ದರೆ ಅಂತಹವರು ಜನನಾಯಕ ಎನಿಸಿಕೊಳ್ಳಬಹುದು. ಆದರೆ ಇವೆಲ್ಲಾ ಅವಿವೇಕಿಗಳ ಕೈಗೆ ಸಿಕ್ಕರೆ ಅವರು ಖಳನಾಯಕ ಅನಿಸಿಕೊಳ್ಳುತ್ತಾರೆ.



ಬಳ್ಳಾರಿ ರೆಡ್ಡಿಗಳ ಪಾಡು ಈಗ ಇದೇ ಆಗಿದೆ. ಇವರ ಕ್ಯಾಂಪ್‌ನಲ್ಲಿ ಅದ್ಯಾವ ಮುಠ್ಠಾಳನಿದ್ದಾನೋ ಗೊತ್ತಿಲ್ಲ, ಕಳೆದೊಂದು ತಿಂಗಳಿನಿಂದ ಕಾಂಗ್ರೆಸ್‌ನ ಪಾದಯಾತ್ರೆ ಹಾಗೂ ಭರ್ಜರಿ ಸಮಾವೇಶಕ್ಕೆ ಪ್ರತಿಕ್ರಿಯೆಯಾಗಿ ರೆಡ್ಡಿ ಗ್ಯಾಂಗ್ ಏನೇನು ಮಾಡಿದರೋ ಅದೆಲ್ಲಾ ನಗೆಪಾಟಲಿಗೀಡಾಗಿವೆ. ಬಿಡುಗಡೆಯಾದ ಮೊದಲನೆ ದಿನವೇ ಫ್ಲಾಪ್ ಆಗುವ ಕನ್ನಡ ಸಿನಿಮಾದಂತೆ ರೆಡ್ಡಿಗಳ ಒಂದೊಂದು 'ಶೋ'ಗಳೂ ಭರ್ಜರಿ ಸೋಲು ಕಂಡಿವೆ. ಈ ರೆಡ್ಡಿಗಳೇನೂ ಅವಿದ್ಯಾವಂತರಲ್ಲ, ಮೊದಲ ನಾಲ್ಕಾರು ವರ್ಷ 'ಏನೋಬಲ್ ಇಂಡಿಯಾ' ಎಂಬ ಚೀಟಿಂಗ್ ದಂಧೆ ನಡೆಸಿ ನೂರಾರು ಜನರಿಗೆ ಉಂಡೆ ನಾಮ ತಿಕ್ಕಿ ಜೀರ್ಣಿಸಿಕೊಂಡಿದ್ದಾರೆ. ಆ ನಂತರ ಹತ್ತು ವರ್ಷಗಳ ರಾಜಕೀಯ ಜೀವನ, ಕಳೆದ ಆರೆಂಟು ವರ್ಷಗಳ ಗಣಿ ಕಳ್ಳತನ, ಅದರಿಂದ ಕದ್ದ ಸಾವಿರಾರು ಕೋಟಿ ರೂಪಾಯಿಗಳು, ಸಚಿವಗಿರಿ, ಪಬ್ಲಿಸಿಟಿ... ಉಹುಂ ಇಲ್ಲ ಬಿಡಿ ಇದ್ಯಾವುದೂ ಇವರಿಗೆ ಕನಿಷ್ಠ ಕಾಮನ್‌ಸೆನ್ಸ್ ಬೆಳೆಸಿದಂತೆ ಕಾಣುತ್ತಿಲ್ಲ, ಇವರಿಗೆ ಕಾಮನ್ ಸೆನ್ಸ್ ಇದ್ದಿದ್ದರೆ ರಾಮುಲು ತಲೆ ಬೋಳಿಸುತ್ತಿದ್ದರಾ?

ಶೋಲೆ ಪಿಕ್ಚರ್ ಡಕಾಯಿತರು

ಈ ರೆಡ್ಡಿಗಳು ಬೇಸಿಕಲಿ ರಾಜಕಾರಣಿ ಗಳಲ್ಲ, ಬದಲಾಗಿ ವ್ಯಾಪಾರಿಗಳು. ಸಾಮಾನ್ಯವಾಗಿ ವ್ಯಾಪಾರ ಮಾಡುವವರು ಎಲ್ಲಾ ಪಕ್ಷದ ರಾಜಕಾರಣಿಗಳೊಂದಿಗೂ ಚೆನ್ನಾಗಿರಲು ಬಯಸುತ್ತಾರೆ. ಅವರಿಗೆ ತಮ್ಮ ವ್ಯಾಪಾರ-ಲಾಭ ಮುಖ್ಯವೇ ವಿನಃ ಅಧಿಕಾರ ಮುಖ್ಯ ಆಗಿರುವುದಿಲ್ಲ.

ಆದರೆ ಈ ರೆಡ್ಡಿಗಳ ಕೇಸು ಬೇರೆ ತರ ಇದೆ. ಅವರಿಗೆ ರಾಜಕೀಯದ ತಲೆ ಬುಡ ತಿಳಿದಂತಿಲ್ಲ, ಇದನ್ನು ತಿಳಿದಿರುವ ಯಾರೂ ರೆಡ್ಡಿಗಳಂತೆ ಸದನದಲ್ಲೇ ಸಿದ್ಧರಾಮಯ್ಯರಿಗೆ "ಬಳ್ಳಾರಿಗೆ ಬಾರೋ ನೋಡ್ಕೋತೀವಿ" ಎಂದೆನ್ನುವ ಮುಠ್ಠಾಳ ಕೆಲಸ ಮಾಡುತ್ತಿರಲಿಲ್ಲ. ಆಮೇಲಾದರೂ ಆದದ್ದೇನು?

ಕಾಂಗ್ರೆಸ್‌ನ ಪಾದಯಾತ್ರೆ, ಆಂದೋಲನಕ್ಕೆ, ರಾಜಕೀಯವಾಗಿ ಉತ್ತರ ಕೊಡಬೇಕಿದ್ದ ರೆಡ್ಡಿಗಳು ರಾಮುಲುನ ತಲೆ ಬೋಳಿಸಿ, ಕಪ್ಪುಬಟ್ಟೆ ಹಾಕಿಸಿ ಬೀದಿ ಬಸವನಂತೆ ಓಡಾಡಲು ಬಿಟ್ಟರು. ಈ ಅನಿಷ್ಟ ದರ್ಶನ ಸಾಲದೆಂಬಂತೆ ರಾಮುಲುನ ರೌಡಿ ಪಡೆಯೂ ತಲೆ ಬೋಳಿಸಿಕೊಂಡು ಬೀದಿಗಿಳಿಯಿತು. ಈ ದಾಂಢಿಗರು ಕಪ್ಪು ಡ್ರೆಸ್ ಹಾಕಿಕೊಂಡು ಬೀದಿಗಿಳಿದಾಗ ಶೋಲೆ ಸಿನಿಮಾದ ಗಬ್ಬರ್ ಸಿಂಗ್‌ನ ಡಕಾಯಿತರ ಗುಂಪು ದಾಳಿ ಮಾಡಲು ಊರಿಗೆ ನುಗ್ಗುತ್ತಿರುವಂತೆ ಕಾಣುತ್ತಿತ್ತು.

ಇದನ್ನೆಲ್ಲ ಇವರು ಕೇವಲ ತಮಾಷೆಗೆ ಮಾಡುತ್ತಿಲ್ಲ, ರೆಡ್ಡಿ ಆಪ್ತರು ಇದಕ್ಕೊಂದು ಕತೆಯನ್ನೇ ಹೇಳುತ್ತಿದ್ದಾರೆ. ಅವರ ಪ್ರಕಾರ ಕಳೆದ ಕೆಲವು ತಿಂಗಳುಗಳಿಂದ ರೆಡ್ಡಿಗಳಿಗೆ ಶನಿಕಾಟ ಶುರುವಾಗಿದೆಯಂತೆ. ಆದಿರು, ಕಾನೂನು ಹಾಗೂ ಆಯಿಲ್ ಈ ವಿಚಾರಗಳೆಲ್ಲ ಕಪ್ಪುಬಣ್ಣದ ಗುಂಪಿಗೆ ಸೇರುತ್ತವೆಂಬ ನಂಬಿಕೆ ಇದೆಯಂತೆ. ಈಗ ರೆಡ್ಡಿಗಳಿಗೆ ಅದಿರು (ಕಪ್ಪು) ಸಮಸ್ಯೆ ಶುರುವಾಗಿರುವುದರಿಂದ ಅದರ ನಿವಾರಣೆ. ತಮ್ಮ ನೌಕರ ರಾಮುಲುನ ತಲೆ ಬೋಳಿಸಿ ಕಪ್ಪುಬಟ್ಟೆ ಹಾಕಿಸಿದ್ದಾರೆ... ಕರ್ನಾಟಕದಲ್ಲಿ ಅಷ್ಟೇನೂ ಸುದ್ದಿಯಾಗದ ಇನ್ನೊಂದು ಸಂಗತಿ ಏನೆಂದರೆ ಜುಲೈ ತಿಂಗಳಲ್ಲಿ ಈ ಗ್ಯಾಂಗ್ ತಮಿಳುನಾಡಿಗೆ ಹೋಗಿ ಒಂದು ರಹಸ್ಯ ಹೋಮ ಮಾಡಿಸಿ ಬಂದಿದೆ. ಅವುಗಳ ಮುಂದುವರೆದ ಭಾಗವೇ ಈಗಿನ ಸೀನ್‌ಗಳು.



ಹೋಮದಿಂದ ಬಳ್ಳಾರಿ ಅಭಿವೃದ್ಧಿಯೇ?

ಕಾಂಗ್ರೆಸ್ ಸಮಾವೇಶ ಮುಗಿದ ನಂತರ, ಅದರ ಮಾರನೇ ದಿನವೇ ಬಳ್ಳಾರಿ ಟೌನಿನಲ್ಲಿ ಈ ಅವಿವೇಕಿಗಳ ಗ್ಯಾಂಗ್ 'ವಕ್ರದೃಷ್ಟಿ ನಿವಾರಣ' ಹೋಮ ನಡೆಸಿದೆ. ಒಂದು ಬೆದರು ಬೊಂಬೆ ನಿರ್ಮಿಸಿ ಬೆಂಕಿ ಹಾಕಿಸಿದೆ.

ಆದರೆ

ತಲೆಬೋಡು ಹೊಡೆಸಿದರೆ ಬಳ್ಳಾರಿ ಅಭಿವೃದ್ಧಿಯಾಗುತ್ತದೆಯಾ?

ಹೋಮ ಮಾಡಿ ಜಿಲ್ಲೆಯ ಪ್ರಗತಿ ಸಾಧಿಸಬಹುದಾ!? ಚಾಪೆ ಮೇಲೆ ಮಲಗಿ, ಮೊಳಕೆ ಕಾಳು ತಿಂದ ಮಾತ್ರಕ್ಕೆ ಜನ ನಂಬಿಬಿಡುತ್ತಾರಾ?

ರೆಡ್ಡಿಗಳ್ಯಾಕೆ ಹೀಗೆ ಆಡುತ್ತಿದ್ದಾರೆ. ಇದು ಆಕಾಶಕ್ಕೆ ಉಗಿಯೋ ಕೆಲಸ ಅಲ್ಲವಾ?

ಇಷ್ಟಕ್ಕೂ, ಈ ಮುಠ್ಠಾಳ ಐಡಿಯಾಗಳನ್ನು ಕೊಡುತ್ತಿರುವ ದ್ರಾಬೆ ಅದ್ಯಾರಿರಬಹುದು?

...ನಿದು ಹೊಸ ಗಣಿ ನೀತಿ?



ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿ ಪದೇಪದೇ ...ತ್ತಿರುವ ಹೊಸ ಗಣಿ ನೀತಿಯಲ್ಲಿ ಏನೇನಿರಬಹುದು?

...ಬಹಳ ಮುಖ್ಯವಾಗಿ ರೆಡ್ಡಿಗಳ ಕಳ್ಳತನ ಪತ್ತೆಹಚ್ಚುವ, ...ರೋಲ್ ಮಾಡುವ ಹಾಗೂ ಕದ್ದ ಅಪರಾಧಕ್ಕೆ ಶಿಕ್ಷೆ ...ಸುವ ಕಾನೂನುಗಳು ಅದರಲ್ಲಿ ಇರುತ್ತದೆಯಾ ಎನ್ನುವುದೇ ...ರ ಕುತೂಹಲಕರ ಪ್ರಶ್ನೆ. ಹಿರಿಯ ಕಾಂಗ್ರೆಸ್ಸಿಗ ಪ್ರಣಬ್ ...ಖರ್ಜಿಯ ನೇತೃತ್ವದ ಹತ್ತು ಸಚಿವರ ಸಮಿತಿಯು ಈ ...ಸ ಗಣಿ ಕಾಯ್ದೆ ರೂಪಿಸುತ್ತಿದೆ.

...ಪ್ರಮುಖವಾಗಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಇದುವರೆಗೂ ...ಲ್ ಲೈಸೆನ್ಸ್ ಎನ್‌ವಿರಾನ್‌ಮೆಂಟಲ್ ಲೈಸೆನ್ಸ್‌ಗಳು ಮಾತ್ರ ...ವು. ಈಗ ಹೊಸದಾಗಿ ಸೋಷಿಯಲ್ ಲೈಸೆನ್ಸ್ ಎನ್ನುವ ...ದನ್ನು ಅದರಲ್ಲಿ ಸೇರಿಸಲಾಗುತ್ತಿವೆ. ಗಣಿ ಕಂಪನಿಗಳು ತಮ್ಮ ...ಾಂಶದ 26% ಹಣವನ್ನು ಸ್ಥಳೀಯ ಸರ್ಕಾರಿ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಬೇಕೆಂಬ ಪ್ರಸ್ತಾಪ ...ವಲ್ಲಿದೆ. ಭೂಮಿ. ಕಳೆದುಕೊಳ್ಳುವ ರೈತರಿಗೆ ಪಾಲುದಾರಿಕೆ, ಸರ್ಕಾರಕ್ಕೆ ತೆರಬೇಕಾದ ರಾಯಲ್ಟಿ ...ತ್ತದ ಏರಿಕೆಯೂ ಚರ್ಚೆಯಲ್ಲಿದೆ. ದುರಂತ ಅಂದರೆ ಖಾಸಗಿ ಕಂಪನಿಗಳಿರಲಿ, ಸರ್ಕಾರಿ ಒಡೆತನದ ...ನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ...ಗೂ ಕೋಲ್ ಇಂಡಿಯಾ ಲಿ.ಗಳೇ ತಮ್ಮ ಲಾಭದ ಶೇ. ಮೂರು ರೂಪಾಯಿಗಳನ್ನು ಗಣಿ ...ೇಶಗಳ ಹಾಗೂ ಬಾಧಿತ ಜನರ ಒಳಿತಿಗಾಗಿ ಖರ್ಚು ಮಾಡುತ್ತಿಲ್ಲ. ಆದರೀಗ ಈ ಹೊಸ ...ಯ್ದೆ ಬಂದರೆ ಸ್ವಲ್ಪ ಹಣ ಜನರ ಅಭಿವೃದ್ಧಿಗಾಗಿ ಬಳಕೆಯಾಗಬಹುದು.

Mines and Mineral Development and Regulation Act 2010 ಎಂಬ ...ರಿನ ಈ ಹೊಸ ಕಾಯ್ದೆಗೆ ರೆಡ್ಡಿಗಳ ಸಾಮ್ರಾಜ್ಯ ಕೆಡವುವ ಏಕೈಕ ಗುರಿ ಇರುವುದಿಲ್ಲ ಎನ್ನುವುದು ...ಶಿತ. ಆದರೆ ಅವರ ಕಳ್ಳತನಕ್ಕೆ ಕಡಿವಾಣ ಹಾಕಲು, ದೋಚುವ ಲಾಭದ ಒಂದಂಶ ಜನರಿಗೆ ...ಬಳಕೆಯಾಗುವಂತಹ ಒತ್ತಡ ಸೃಷ್ಟಿಸುವಲ್ಲಿ ಯಶಸ್ವಿಯಾಗಬಹುದಷ್ಟೇ. ಅಲ್ಲಿಂದಾಚೆಗೆ ಅದಿರು ...ಟಿ, ರಫ್ತು ಮುಂತಾದಕ್ಕೆ ತಡೆಯೊಡ್ಡುವ ಸಾಧ್ಯತೆ ಕಡಿಮೆ.

ಸುಷ್ಮಾ ಗಂಡಂಗೂ ಸಿಕ್ಕಿತ್ತು ಗಿಫ್ಟು!

ಹೌದು, ಸುಷ್ಮಾ ಸ್ವರಾಜ್‌ಳ ಗಂಡ ಕೌಶಿಕ್ ಸ್ವರಾಜ್‌ಗೂ ಯಡ್ಡಿ ಸರ್ಕಾರ ರಾಜ್ಯ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನೇ ಗಿಫ್ಟಾಗಿ ನೀಡಿತ್ತು!

2009ರ ನವೆಂಬರ್‌ನಲ್ಲಿ ಯಡ್ಡಿ ವಿರುದ್ಧ ರೆಡ್ಡಿಗಳು ಬಂಡೆದ್ದು ಹೈದರಾಬಾದ್, ಗೋವಾಗಳ ರೆಸಾರ್ಟ್‌ಗಳಲ್ಲಿ ಖರೀದಿಸಿದ ಶಾಸಕರನ್ನು ಗುಡ್ಡೆ ಹಾಕಿದ್ದರಲ್ಲ? ಆಗ ದಿಢೀರನೆ ಯಡ್ಡಿ ಮತ್ತು ರೆಡ್ಡಿಗಳ ಮಧ್ಯೆ ಸಂಧಾನ-ವ್ಯವಹಾರ ನಡೆದು ತಣ್ಣಗಾಯಿತು. ಯಡ್ಡಿ ರೆಡ್ಡಿಗಳ ನಡುವೆ ದೆಹಲಿಯಲ್ಲಿ ಸಂಧಾನಕಾರಳ ಪಾತ್ರ ವಹಿಸಿದ್ದ ಸುಷ್ಮಾ ಸ್ವರಾಜ್ ಅಂತೂ ಭಿನ್ನಮತವನ್ನು ಬಗೆಹರಿಸಿದ್ದಳು. ಈ ಕಾರಣಕ್ಕಾಗಿ ಆಯಮ್ಮನಿಗೆ ಸರಿಯಾದ 'ಪ್ರಮಾಣ'ದ ಪ್ರಸಾದ ಸಂದಾಯವಾಗಿತ್ತು.

ಜೊತೆಗೆ ಆಕೆಯ ಪತಿ ಕೌಶಿಕ್ ಸ್ವರಾಜ್‌ಗೆ ಸರ್ಕಾರವು ರಾಜ್ಯದ 'ಸ್ಟ್ಯಾಂಡಿಂಗ್ ಕೌನ್ಸೆಲ್' ಹುದ್ದೆಯನ್ನು ನೀಡಿ ಆದೇಶ ಹೊರಡಿಸಿ, ಪ್ರತಿ ಹಿಯರಿಂಗ್‌ಗೆ ಒಂದು ಲಕ್ಷ ಫೀಜು ನಿಗದಿಮಾಡಿತ್ತು. ಡಿಸೆಂಬರ್ 5, 2009ರಂದು ಹೊರಬಿದ್ದ ಈ ಆದೇಶದಲ್ಲಿ ಕೌಶಿಕ್ ಸ್ವರಾಜ್‌ನ ವಿಳಾಸ ನಂ. 8 ಸಫ್ದರ್‌ಜಂಗ್ ಲೇನ್, ನವದೆಹಲಿ ಎಂದಿತ್ತು. ಆದರೆ ಅದು ಲೋಕಸಭಾ ಸದಸ್ಯೆ ಸುಷ್ಮಾ ಮನೆ ವಿಳಾಸವೇ. ಸುಷ್ಮಾಳಿಗೆ ಖುಷಿ ಮಾಡಲು ಹಿಂದೆಮುಂದೆ ವಿಚಾರಿಸದ ಯಡ್ಡಿ-ರೆಡ್ಡಿಗಳು ಅಂದು ಸಂವಿಧಾನವನ್ನೇ ಅಣಕಿಸಿದ್ದರು. ಏಕೆಂದರೆ 1983-87ರ ಅವಧಿಯಲ್ಲಿ ಕೌಶಿಕ್ ಸ್ವರಾಜ್ ಮಿಜೋರಾಮ್ ರಾಜ್ಯದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು. ಹೀಗೆ ರಾಜ್ಯಪಾಲ ಹುದ್ದೆ ಅಲಂಕರಿಸಿದವರಿಗೆ ಯಾವುದೇ ಸರ್ಕಾರಿ ಲಾಭದ ಹುದ್ದೆ ನೀಡುವಂತಿಲ್ಲ. ಹೀಗೆ ಸಂವಿಧಾನಬಾಹಿರ ಆದೇಶ ಹೊರಡಿಸಿದ್ದ ಯಡ್ಡಿ-ರೆಡ್ಡಿಗಳಿಗೆ ಮಾಧ್ಯಮಗಳು ಉಗಿಯತೊಡಗಿದ ಮೇಲೆ ಎಚ್ಚೆತ್ತುಕೊಂಡ ಕೌಶಿಕ್ ತನಗೆ ಅಂತಹ ಆದೇಶ ತಲುಪಿಲ್ಲವೆಂದೂ, ತಾನು ಅಂತಹ ಹುದ್ದೆ ಒಪ್ಪಿಕೊಳ್ಳುವುದು ತಪ್ಪೆಂದೂ ಹೇಳಿ ಹುದ್ದೆ ನಿರಾಕರಣೆ ಮಾಡಿ ಮಾನ ಉಳಿಸಿಕೊಂಡಿದ್ದ. ಕಾನೂನಿನಲ್ಲಿ ಅವಕಾಶ ಇಲ್ಲದ್ದರಿಂದ ಕೌಶಿಕ್ ಮಹಾಶಯ ಹುದ್ದೆ ನಿರಾಕರಿಸಿದ್ದನಷ್ಟೇ.



ಭಿನ್ನಮತ ಬಗೆಹರಿಸಿದ್ದಕ್ಕಾಗಿ ತಾನೂ ಉಂಡು, ಗಂಡನಿಗೂ ತುಪ್ಪ ಸವರಲು ಹೊರಟಿದ್ದ ಸುಷ್ಮಾ ಎಂತಹ ಆಶೆಬುರುಕಿ ಎಂಬುದು ಇದರಿಂದ ಗೊತ್ತಾಗುತ್ತದಲ್ಲವೆ?

...ಹರಿಸದಿರುವ ರೆಡ್ಡಿ ಪಾಕ್ ನಂಟಿನ ವಿಚಾರ ...ಿನ ದಿನಗಳಲ್ಲಿ ಬಿಜೆಪಿಗೆ ಉಸಿರುಗಟ್ಟಿಸಲಿದೆ.

...ಬೇಲೇಕೇರಿ ಬಂದರಿನಲ್ಲಿ ಅಧಿಕಾರಿಗಳು ವಶಪಡಿಸಿ ...ದ್ದ 8 ಲಕ್ಷ ಟನ್ ಅದಿರನ್ನು ಕಳ್ಳತನದಿಂದ ಪಾಕಿಸ್ತಾನಕ್ಕೆ ...ಸುವ ವಿಚಾರ ಅದು. ಬೇಲೇಕೇರಿಯಲ್ಲಿ ಸೀಜ್ ...ಲಾದ ಅದಿರಿನ ಗಣಿಗಾರಿಕೆಗೆ ಸಂಬಂಧಿಸಿದಂತೆ ಅಧಿಕೃತ ದಾಖಲೆ ಕೇವಲ 2.1 ಲಕ್ಷ ಟನ್‌ಗಳದ್ದು ...ವಾಗಿತ್ತು. ಕರ್ನಾಟಕದ ಅದನಿ ಎಂಟರ್‌ಪ್ರೈಸಸ್, ...ಾರ್ಜುನ ಶಿಪ್ಪಿಂಗ್, ಸಲ್ಗಾಂವಕರ್ ...ನಿಂಗ್ ಇಂಡಸ್ಟ್ರೀಸ್ ಹಾಗೂ ...ಮಹಲ್ ಸಿಲ್ಕ್ ಎಂಬ ಕಂಪನಿಗಳು ... 2.1 ಲಕ್ಷ ಟನ್ ಅದಿರಿಗೆ ...ಂಧಿಸಿದಂತೆ ಸೂಕ್ತ ದಾಖಲೆ ...ರಿಸಿದ್ದರು. ಉಳಿದಂತೆ 5.7 ಲಕ್ಷ ಟನ್ ...ನ್ನು ಯಾರು ಅಲ್ಲಿಗೆ ತಂದರು ಹೇಗೆ ...ದ ತಂದರೆಂಬ ದಾಖಲೆಗಳೇ ...ವರೆಗೂ ಸಿಕ್ಕಿಲ್ಲ. ಇದೊಂದು ಅಗಾಧ ...ಣದ ಅಕ್ರಮವಾಗಿತ್ತು. ಅರಣ್ಯಾಧಿಕಾರಿ ...ಹುಲ್‌ರ ದೂರಿನ ಮೇರೆಗೆ ಪರಿಸರ ...ರ್ಟ್‌ನ ನ್ಯಾ. ಎನ್.ಕೆ. ಪಾಟೀಲ್ ಈ ...ದು ಅದಿರನ್ನು ವಶಪಡಿಸಿಕೊಂಡು ...ಿ ನಡೆಸುವಂತೆಯೂ ಆದೇಶಿಸಿದ್ದರು.

...ಈಗ ನಾಪತ್ತೆಯಾಗಿ ಪಾಕಿಸ್ತಾನಕ್ಕೆ ಕಳ್ಳತನದಿಂದ ...ಟವಾಗಿರುವುದು ಅದೇ ಅದಿರು.



ಇವರ ಹಿಂದೆ ಇರುವುದು ಇದೇ ರೆಡ್ಡಿ ಗ್ಯಾಂಗ್ ಮತ್ತು ಯಡ್ಡಿ. ಪಾಕಿಸ್ತಾನದ ಸರ್ಕಾರಿ ಸ್ವಾಮ್ಯದ ಪಾಕಿಸ್ತಾನ್ ಸ್ಟೀಲ್ಸ್ ಸಂಸ್ಥೆಗೆ ಈ ಅದಿರು ಎರಡು ಶಿಪ್‌ಮೆಂಟ್‌ಗಳ ಮೂಲಕ ತಲುಪಿದೆ. 2009ರ ಡಿಸೆಂಬರ್ ಹಾಗೂ 2010ರ ಜನವರಿಯಲ್ಲಿ ಈ ಕಳ್ಳ ಸಾಗಾಣಿಕೆ ಆಗಿದೆ. ಪಾಕಿಸ್ತಾನ್ ಮುಸ್ಲಿಂಲೀಗ್‌ನ ನವಾಜ್ ಶರೀಫ್ ಬಣದ ಸೆನೇಟರ್ ನಿಸಾರ್ ತನ್‌ವೀರ್ ಈ ಕಳ್ಳ ಸಾಗಾಣಿಕೆ ವಿಚಾರ ಬಯಲುಗೊಳಿಸಿ ಅದಿರಿನ ಗುಣಮಟ್ಟ ಕಳಪೆಯಾಗಿದೆ ಎಂದು ಆರೋಪಿಸಿದ್ದರು. ಆ ಸಂದರ್ಭದಲ್ಲಿ ಬೆಳಕಿಗೆ ಬಂದ ಸಂಗತಿಗಳು ಈ ರೆಡ್ಡಿಗಳು ಇಂಟರ್‌ನ್ಯಾಷನಲ್ ಕ್ರಿಮಿನಲ್‌ಗಳೆಂಬುದಕ್ಕೆ ಸಾಕ್ಷಿಯಾಗಿದೆ. ದುಬೈನಲ್ಲಿ ಆಲ್ಸಾ ಪೆಟ್ರೋಲಿಯಂ ಅಂಡ್ ಶಿಪ್ಪಿಂಗ್ ಎಂಬ ಕಂಪನಿಯಿದೆ. ಇಮ್ರಾನ್ ಅಸ್ಗರ್ ಎಂಬುವನು ಅದರ ಮಾಲೀಕ. ಅದೇ ರೀತಿ ಮುಂಬೈನಲ್ಲಿ ಟ್ವೆಂಟಿಫಸ್ಟ್ ಸೆಂಚುರಿ ವೈರ್ ರಾಡ್ ಲಿಮಿಟೆಡ್ ಎಂಬ ಖಾಸಗಿ ಕಂಪನಿಯಿದೆ. ಬೋಹ್ರಾ ಎಂಬುವನು ಅದರ ಮಾಲೀಕ. ಇವರಿಬ್ಬರೂ ಪಾಕಿಸ್ತಾನ, ಅರಬ್ ದೇಶಗಳು, ಇರಾಕ್, ಅಫಘಾನಿಸ್ತಾನಗಳಿಗೆ ಪೆಟ್ರೋಲ್, ಖನಿಜ ಪದಾರ್ಥಗಳನ್ನು ಸಾಗಿಸುವ ದಂಧೆ ನಡೆಸುತ್ತಿದ್ದಾರೆ. ರೆಡ್ಡಿ ಗ್ಯಾಂಗ್‌ಗೆ ಈ ಖದೀಮರೊಂದಿಗೆ ಅದೆಂಥ ಲಿಂಕ್ ಇದೆಯೋ ಗೊತ್ತಿಲ್ಲ. ಆದರೆ ಬೇಲೇಕೇರಿಯಲ್ಲಿ ಸೀಜ್ ಆಗಿದ್ದ ಲಕ್ಷಾಂತರ ಟನ್ ಅದಿರನ್ನು ಈ ಕಂಪನಿಗಳ ಹಡಗುಗಳ ಮೂಲಕ ಪಾಕಿಸ್ತಾನಕ್ಕೆ ಕಳ್ಳ ಸಾಗಾಣಿಕೆ ಮಾಡಿಬಿಡಲಾಗಿದೆ.



ಈ ರೆಡ್ಡಿಗಳ ಧಿಮಾಕು ಎಷ್ಟಿದೆ ನೋಡಿ?

ಸರ್ಕಾರ ವಶಪಡಿಸಿಕೊಂಡಿದ್ದ ಮಾಲು ಅದು. ಪೊಲೀಸರು ಒಂದು ಮುರುಕಲು ಸೈಕಲ್ ಸೀಜ್ ಮಾಡಿದರೂ ಅದನ್ನು ಬಿಡಿಸಿಕೊಂಡು ತರಬೇಕೆಂದರೆ ನೂರೆಂಟು ಪ್ರೊಸೆಸ್ ಇರುತ್ತದೆ. ಆದರೆ ನೂರಾರು ಕೋಟಿ ರೂಪಾಯಿ ಬೆಲೆಯ ಲಕ್ಷಾಂತರ ಟನ್ ಅದಿರು ಯಾರ ಗಮನಕ್ಕೂ ಬಾರದಂತೆ ಪಾಕಿಸ್ತಾನಕ್ಕೆ ಕಳ್ಳ ಸಾಗಾಣಿಕೆಯಾಗುತ್ತದೆಂದರೆ ಏನೆನ್ನಬೇಕು?

ಇಷ್ಟಕ್ಕೂ ಈ ಬೇಲೇಕೇರಿ ಬಂದರು ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿರುವ ಪ್ರದೇಶ. ಈಗ ಹೇಳಿ ರೆಡ್ಡಿ-ಯಡ್ಡಿಗಳ ಕೈವಾಡವಿಲ್ಲದೆ ಈ ಕಳ್ಳತನ ಹೇಗೆ ತಾನೆ ನಡೆಯಲು ಸಾಧ್ಯವಿತ್ತು?

ಸದ್ಯದ ಮಟ್ಟಿಗೆ ಬಿಜೆಪಿಯ ದೆಹಲಿ ನಾಯಕರಿಗೆ ರೆಡ್ಡಿಗಳ ಈ ಕಳ್ಳಸಾಗಾಣಿಕೆಯ ವಿಚಾರ ಆತಂಕ ಹುಟ್ಟಿಸಿದೆ. ಆದರೆ ಕಿಂಚಿತ್ತೂ ಹಿಂಜರಿಕೆಯಿಲ್ಲದೆ, ಅಳುಕದೆ ಅದೇ ಸ್ಮಗ್ಲರ್‌ಗಳ ಜೊತೆ ಸುಷ್ಮಾ ಪದೇಪದೆ ಕಾಣಿಸಿಕೊಳ್ಳುತ್ತಿದ್ದಾರೆ.

ರೆಡ್ಡಿಗಳ ವಿರುದ್ಧ ಯಡ್ಡಿ ಯಾವಾಗಲೇ ಆಗಲಿ ದೆಹಲಿತನಕ ಹೋಗಿ ಕಂಪ್ಲೇಂಟ್ ಕೊಟ್ಟರೆ ಸುಷ್ಮಾ ತಟಕ್ಕನೆದ್ದು ಯಡ್ಡಿಯನ್ನೇ ಗದರಿಸಿ ಬಾಯಿಮುಚ್ಚಿಸುತ್ತಿದ್ದಾರೆ.

ಈ ಕಳ್ಳರ ಗುಂಪಿನ ನಾಯಕಿಯಾಗಿ ರುವ ಸುಷ್ಮಾ ಸ್ವರಾಜ್ ಬಗ್ಗೆ ರಾಜ್ಯ ಬಿಜೆಪಿಗಳಿಗೂ ಕಿರಿಕಿರಿಯಾಗುತ್ತಿರುವುದು ಗುಟ್ಟೇನಲ್ಲ.

ಹಾಲು ಕುಡಿದ ಮಕ್ಕಳೇ ಬದುಕುವುದು ಕಷ್ಟವಿರುವಾಗ ಇನ್ನು ವಿಷ ಕುಡಿಯುತ್ತಿರುವ ಸುಷ್ಮಾರ ದತ್ತುಪುತ್ರ ರಾದ ರೆಡ್ಡಿ ಬ್ರದರ್ಸ್ ಬದುಕುವು ದುಂಟೆ....

ಈ ಸ್ಮಗ್ಲರ್‌ಗಳನ್ನು ನಂಬಿದರೆ ಸುಷ್ಮಾ ಭಾರತದ ಪ್ರಧಾನಿಯಾಗುವು ದುಂಟೆ?

● ಪಾರ್ವತೀಶ
bparvateesha@gmail.com

...ಬ್ರಾಹ್ಮಣರ ಮನೇಲಿ ಪೂಜೆ! ...ಶೂದ್ರ ರೆಡ್ಡಿ ಮನೇಲಿ ಯಾಕಿಲ್ಲ?



ಅಖಂಡ ದೈವಭಕ್ತೆ ಹಿಂದೂ ಧರ್ಮೋದ್ಧಾರಕಿ ಸುಷ್ಮಾ ಸ್ವರಾಜ್ ...ಕಳೆದ ಹತ್ತು ವರ್ಷಗಳಿಂದ ಬಳ್ಳಾರಿಗೆ ಬಂದು ಹೋಗುತ್ತಿದ್ದಾರೆ. ...ಅಲ್ಲಿ ನಡೆಯುವ ವರಮಹಾಲಕ್ಷ್ಮಿ ಪೂಜೆಯೇ ಇಡೀ ಬಳ್ಳಾರಿ ...ಜಿಲ್ಲೆಯ ಭಾಗ್ಯ ಜನರ ಧನ್ಯತೆಯ ಗಳಿಗೆ ಎನ್ನುವಂತೆ ರೆಡ್ಡಿಗಳು ...ಪ್ರಚಾರ ನಡೆಸುತ್ತಿರುತ್ತಾರೆ. ಆದರೆ ಅಸಲಿ ವಿಚಾರ ಏನೆಂದರೆ ಈ ...ರೆಡ್ಡಿಗಳ 'ತಾಯಿ' ಸುಷ್ಮಾ ಬರುವುದು ರೆಡ್ಡಿಗಳ ಮನೆಗಲ್ಲ, ಉಳಿಯುವುದೂ ರೆಡ್ಡಿಗಳ ಮನೆಯಲ್ಲಲ್ಲ. ಅಷ್ಟೇ ...ಅಲ್ಲ, ಈಕೆಯ ಕುಖ್ಯಾತ ವರಮಹಾಲಕ್ಷ್ಮೀ ಪೂಜೆಯೂ ರೆಡ್ಡಿಗಳ ಮನೆಯಲ್ಲಿ ನಡೆಯುವುದಿಲ್ಲ.

ಅದು ನಡೆಯುವುದು ಡಾ. ಶ್ರೀನಿವಾಸಮೂರ್ತಿಯ ಮನೆಯಲ್ಲಿ. ಬಳ್ಳಾರಿಯ ಅತೀ ಪುರಾತನ ವೈದ್ಯರಾಗಿರುವ, ...ಅಷ್ಟೇ ಪುರಾತನ RSS ವಟುವೂ ಆಗಿರುವ ಶ್ರೀನಿವಾಸಮೂರ್ತಿ ಮೂಲತಃ ಬ್ರಾಹ್ಮಣರು.

ಮತ್ತೊಂದೆಡೆ ಈ ರೆಡ್ಡಿಗಳು ಮತ್ತವರ ಕೂಲಿ ಸಿಪಾಯಿ ರಾಮುಲು ಶೂದ್ರರು. ಹಿಂದೂತ್ವ ನಂಬುವ ...ಸುಷ್ಮಾ ಪಂಜಾಬಿ ಬ್ರಾಹ್ಮಣ ಮಹಿಳೆ. ಹಾಗಾಗಿ ಆಕೆ ರೆಡ್ಡಿಗಳನ್ನು ತನ್ನ ದತ್ತುಪುತ್ರರೆಂದು ಎಷ್ಟೇ ಹೇಳಿದರೂ ...ಅದು ಆಚರಣೆಗೆ ಬರುವಷ್ಟರಲ್ಲಿ ಬ್ರಾಹ್ಮಣ-ಶೂದ್ರ ಭೇದ ಆಕೆಯನ್ನು ಕಾಡುತ್ತದೆ. ಹಾಗಾಗಿ ಬಳ್ಳಾರಿಗೆ ಬಂದಾಗ ...ನೇರ ಮೂರ್ತಿಯ ಮನೆಗೆ ಹೋಗಿ ಉಳಿದು, ಅಲ್ಲೇ ಪೂಜೆ ಮುಗಿಸುತ್ತಾರೆ. ಕೊನೆಗೆ ಹೊರಡುವ ಮೊದಲು ಒಂದು ಸಾರಿ ಶೂದ್ರ ರೆಡ್ಡಿಯ ಮನೆಗೆ ಹೋಗಿಬರುತ್ತಾರಷ್ಟೆ.



ಸುಷ್ಮಾ ಎಂಥ ಕಿಲಾಡಿ ಹೆಂಗಸೆಂದರೆ ಪೂಜೆಯನ್ನು ಬ್ರಾಹ್ಮಣರ ಮನೆಯಲ್ಲಿ ಮಾಡಿ ಮುಗಿಸಿ 'ಲಕ್ಷ್ಮಿ'ಯನ್ನು ಶೂದ್ರರ ಮನೆಯಿಂದ ಪಡೆದುಹೋಗುತ್ತಾರೆ. ಪೂಜೆ ಮಾಡುವಾಗ ಬರುವ ಬ್ರಾಹ್ಮಣ-ಶೂದ್ರ ಜಾತಿ ಭೇದ ದುಡ್ಡು ತಗೊಳ್ಳುವಾಗ ಬರಲ್ಲ ನೋಡಿ.


RSS ಹಿನ್ನೆಲೆಯ ಬಿಜೆಪಿಗಳ ಸುಬಿಕೆಗಳೇ ವಿಚಿತ್ರ ಅಲ್ಲವಾ?

ರೆಡ್ಡಿಗೆ ಪಾಕಿಸ್ತಾನದ ಲಾತ
300 ಕೋಟಿ ರೂಪಾಯಿ ಉಂಡೆನಾಮ!

ಒಂದು ಕಡೆ ರಾಜ್ಯ ಕಾಂಗ್ರೆಸ್ಸಿಗರ ಗಲಾಟೆ, ಇನ್ನೊಂದು ಕಡೆ ಕೇಂದ್ರ ಸರ್ಕಾರದ ಕಾನೂನಿನ ಉರುಳು, ಮತ್ತೊಂದೆಡೆ ದೆಹಲಿ ಹಾಗೂ ರಾಜ್ಯ ಬಿಜೆಪಿಗಳ ಅಸಹಕಾರದಿಂದ ಕಂಗೆಟ್ಟು ಅಸಹಾಯಕರಾಗಿರುವ ರೆಡ್ಡಿ ಗ್ಯಾಂಗ್‌ಗೆ ಇನ್ನೊಂದು ಪೆಟ್ಟು ಬಿದ್ದಿದೆ. ಪಾಕಿಸ್ತಾನದ ಸರ್ಕಾರ ರೆಡ್ಡಿಗಳ ಅಂಡಿನ ಮೇಲೆ ಝಾಡಿಸಿ ಒದ್ದಿರುವ ಪ್ರಕರಣ ಇದು. ಈ ಸ್ಮಗ್ಲರ್‌ಗಳು ಪಾಕಿಸ್ತಾನಕ್ಕೆ ಸಾಗಿಸಿರುವ ಎರಡು ಶಿಪ್‌ಮೆಂಟ್‌ಗಳ ಪೈಕಿ ಎರಡನೇ ಹಡಗಿನಲ್ಲಿ ಕಳಿಸಿರುವ 78 ಸಾವಿರ ಟನ್ ಅದಿರಿನ ಗುಣಮಟ್ಟ ಕಳಪೆಯಾಗಿದೆ ಎಂದು ಪಾಕಿಸ್ತಾನದ ಸರ್ಕಾರ ಆರೋಪಿಸಿ ಹಣ ಕೊಡಲು ನಿರಾಕರಿಸಿದೆ.

ಹತ್ತಿರತ್ತಿರ ಮುನ್ನೂರು ಕೋಟಿ ರೂಪಾಯಿಗಳ ಡೀಲ್ ಇದಾಗಿತ್ತು.

ಮಜಾ ಅಂದರೆ ಈ ಅಕ್ರಮ ಸಾಗಾಣಿಕೆ ಬಗ್ಗೆ ಈಗ ತನಿಖೆ ಶುರುವಾಗಿರುವುದರಿಂದ ಕರಾಚಿ ಬಂದರಿನಲ್ಲಿರುವ ಅದಿರನ್ನು ತಮ್ಮದೆಂದು ಹೇಳಿ ರೆಡ್ಡಿಗಳು ವಾಪಸ್ ತರುವಂತೆಯೂ ಇಲ್ಲ. ಅಲ್ಲೇ ಬಿಟ್ಟರೆ ದುಡ್ಡು ಬರಲ್ಲ. ಜೊತೆಗೆ ಕಳಪೆ ಅದಿರು ಕೊಟ್ಟಿರುವ ಬಗ್ಗೆ ದುಬೈನ ಆಲ್ಸಾ ಕಂಪನಿ ಬೆಂಗಳೂರಿನ ಪೊಲೀಸರಿಗೆ ಒಂದು ಕಂಪ್ಲೇಂಟೂ ಕೊಟ್ಟಿದೆ.



ಸ್ಮಗಲರ್ ರೆಡ್ಡಿ ಜೊತೆ ಆರೆಸ್ಸೆಸ್‌ನವರು

ಅಂದಹಾಗೆ, ರೆಡ್ಡಿ ಗ್ಯಾಂಗ್ ಪವಿತ್ರ ಭಾರತಮಾತೆಯ ನೆಲದ ಕಬ್ಬಿಣದ ಅದಿರನ್ನು ಪಾಕಿಸ್ತಾನಕ್ಕೆ ಸ್ಮಗಲ್ ಮಾಡಿರುವ ಬಗ್ಗೆ ಬಿಜೆಪಿ ಮತ್ತು RSS ಯಾಕೆ ಮೌನವಾಗಿವೆ? ಪಾಕಿಸ್ತಾನದೊಂದಿಗೆ ಕ್ರಿಕೆಟ್ ಆಡಬಾರದು, ಜನ ಓಡಾಡಬಾರದು, ವ್ಯಾಪಾರ ಮಾಡಕೂಡದೆಂದು ಹೇಳುವ ಹಿಂದೂತ್ವವಾದಿಗಳು ಈಗ ತಮ್ಮದೇ ಪಾರ್ಟಿಯವನು ಪಾಕ್‌ಗೆ ಸ್ಮಗಲಿಂಗ್ ಮಾಡಿದರೆ ಯಾಕೆ ಸುಮ್ಮನಾಗಿದ್ದಾರೆ?

ಸುಷ್ಮಾ ಸ್ವರಾಜ್ ತಾನೆ ಯಾಕೆ ಸುಮ್ಮನಿದ್ದಾರೆ?

ದೀಲಾ....!


ಕರಾವಳಿ: ದಲಿತ ವಿರೋಧಿ ಭಜರಂಗಿಗಳೂ ಭಜರಂಗಿಗಳಾದ ಪೋಲೀಸರೂ...

ಕರಾವಳಿಯ ಭಜರಂಗಿಗಳು ಬರೀ ಅಲ್ಪಸಂಖ್ಯಾತ ವಿರೋಧಿಗಳಲ್ಲ, ಅವರು ದಲಿತ ವಿರೋಧಿಗಳೂ ಕೂಡಾ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ.

ಕಳೆದ ವರ್ಷ ದಲಿತನೊಬ್ಬನನ್ನು ಅಪಹರಿಸಿ, ಥಳಿಸಿ, ಬೆತ್ತಲೆ ಮೆರವಣಿಗೆ ಮಾಡಿದ ಭಜರಂಗಿಗಳ ಮೇಲೆ ಕಳೆದವಾರ ಕೇಸು ದಾಖಲಾಗಿದೆ. ಈ ಪ್ರಕರಣದ ಜಾಡು ಹಿಡಿದು ಹೊರಟರೆ ಕರಾವಳಿಯ ಕಂತ್ರಿ ಭಜರಂಗಿಗಳು ಮತ್ತು ಕೆಲವು ಪೊಲೀಸ್ ಆಫೀಸರುಗಳು ಅಲ್ಪಸಂಖ್ಯಾತರು, ದಲಿತರ ಮೇಲೆ ನಡೆಸುತ್ತಿರುವ ಹುನ್ನಾರ ಬಯಲಾಗುತ್ತದೆ.

ಕತೆ ಹೀಗಿದೆ:

ಕಳೆದ ವರ್ಷ ಜುಲೈ 5, 2009ರಂದು ಪೆರಾಜೆಯ ಆತನ ಮನೆಗೆ ನುಗ್ಗಿದ ಬಂಟ್ವಾಳದ ಭಜರಂಗಿಗಳು ತಾವು ಪೊಲೀಸರು ಎಂದು ಹೇಳಿ ಶ್ರೀಧರನನ್ನು ಕಿಡ್ನಾಪ್ ಮಾಡಿದ್ದರು. ಈ ಕೃತ್ಯದ ಹಿಂದಿದ್ದವನು ಬಂಟ್ವಾಳದ 'ಪ್ರಭಾವಿ' ಭಜರಂಗಿ ಮಾಧವ ಕುಲಾಲ್. ಜೂನ್ 2009ರಲ್ಲಿ ಈತನ ತಂಗಿ ಅನಿತಾ ಕಾಣೆಯಾದಳು. ಆಗ ಈ ಮಾಧವ್ ಕುಲಾಲ್ ತನ್ನ 'ಪೊಲೀಸ್' ತನಿಖೆ ಆರಂಭಿಸಿದ. ಅನಿತಾಳಿಗೆ ಬಂದ ಫೋನ್ ಕರೆ ಬೆನ್ನತ್ತಿದ ಈ ಭಜರಂಗಿ ಪಡೆಗೆ ಪೆರಾಜೆಯ ಕಾವೇರಿ ಎಂಬ ಹೆಣ್ಮಗಳ ನಂಬರ್ ಸಿಕ್ಕಿತ್ತು, ಸೀದಾ ಪೆರಾಜೆಗೆ ನುಗ್ಗಿದ ಈ ಕ್ರಿಮಿನಲ್‌ಗಳು ಕಾವೇರಿ ಸಹೋದರ ಶ್ರೀಧರನನ್ನು ಅಪರಾಧಿ ಎಂದು ತೀರ್ಮಾನಿಸಿ ಹೊತ್ತೊಯ್ದು ಥಳಿಸಿದರು.


ಶಿವಪ್ರಕಾಶ್

ಆದರೆ ಕುಲಾಲ್ ತಂಗಿ ಅನಿತಾ ಕಾಣೆಯಾಗಿದ್ದಕ್ಕೂ, ಶ್ರೀಧರ್‌ಗೂ ಏನೇನು ಸಂಬಂಧವಿಲ್ಲ ಎಂಬುದು ಮೂರು ತಿಂಗಳ ನಂತರ ಸಾಬೀತಾಗಿತ್ತು. ಸೀರಿಯಲ್ ಕಿಲ್ಲರ್, ರೇಪಿಸ್ಟ್ ಮೋಹನ್‌ಕುಮಾರನಿಗೆ ಅನಿತಾ ಬಲಿಯಾಗಿದ್ದಳು... ವಿಚಿತ್ರವೆಂದರೆ ಹಲ್ಲೆಗೊಳಗಾದ ಶ್ರೀಧರ್‌ನ ಅಕ್ಕ ಕಾವೇರಿ ಕೂಡಾ ರೇಪಿಸ್ಟ್ ಮೋಹನ್‌ಕುಮಾರ್‌ಗೆ ಬಲಿಯಾಗಿದ್ದಳು. ಕಾವೇರಿಯನ್ನು ಕೊಂದ ಮೋಹನ್‌ಕುಮಾರ್ ಆಕೆಯ ಮೊಬೈಲ್‌ನಿಂದ ಅನಿತಾಗೆ ಕಾಲ್ ಮಾಡಿದ್ದ, ಇದನ್ನೇ ಆಧರಿಸಿ ಕುಲಾಲ್‌ನ ಪಡೆ ಪೆರಾಜೆಯ ಕಾವೇರಿಯ ಮನೆಗೆ ನುಗ್ಗಿ ಶ್ರೀಧರನನ್ನು ಬಲಿಪಶು ಮಾಡಿತ್ತು.

ಮುಂದೆ ಶ್ರೀಧರ್ ಆರೋಪಿಯಲ್ಲ ಎಂದು ಗೊತ್ತಾದಾಗ, ಇದೇ ಭಜರಂಗಿಗಳು ಅನಿತಾ ಲವ್‌ಜಿಹಾದ್‌ಗೆ ಬಲಿಯಾಗಿದ್ದಾಳೆ ಎಂದು ಅಕ್ಟೋಬರ್ 4,2009ರಂದು ಗುರುಪುರ ಮಠದ ರಾಜಶೇಖರಾನಂದ ಸ್ವಾಮಿಯ ನೇತೃತ್ವದಲ್ಲಿ ಪ್ರತಿಭಟನೆ ಮಾಡಿದ್ದರು. ಆಗ ಬಂಟ್ವಾಳದ ಇನ್ಸ್‌ಪೆಕ್ಟರ್ ಆಗಿದ್ದ ಶಿವಪ್ರಕಾಶ್ ಎಂಬ ಚೆಡ್ಡಿ ಅದೇ ಭಜರಂಗಿಗಳೊಂದಿಗೆ ಸೇರಿ ಮತ್ತೆ ಪೆರಾಜೆಯ ಶ್ರೀಧರ್ ಮನೆಗೆ ನುಗ್ಗಿದ್ದಾನೆ. ಹಲ್ಲೆಯ ನಂತರ ಕೇರಳದ ತನ್ನ ಅಕ್ಕನ ಮನೆ ಸೇರಿದ್ದ ಶ್ರೀಧರ್ ಮನೆಯಲ್ಲಿ ಸಿಗದಿದ್ದರಿಂದ, ಆತನ ಸಹೋದರ ಬಾಬುವನ್ನು ಬಂಟ್ವಾಳಕ್ಕೆ ಎಳೆದುತಂದ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಬಾಬುವನ್ನು ಅಕ್ರಮ ಬಂಧನದಲ್ಲಿಟ್ಟು ಸಿಕ್ಕಾಪಟ್ಟೆ ತಳಿಸಿದ್ದಾನೆ. ಲಾಠಿಯನ್ನು ಬಾಬುವಿನ ಹಿಂಭಾಗದಲ್ಲಿ ತುರುಕಿ ಹಿಂಸೆ ನೀಡಿದ್ದಾನೆ.

ಇದೆಲ್ಲದರ ಮಾಹಿತಿ ಪಡೆದ ದಲಿತ ಆಕ್ಟಿವಿಸ್ಟ್ ಸರಸ್ವತಿ ಎಂಬುವವರು ಶ್ರೀಧರ್, ಬಾಬುಗಳ ಮೇಲೆ ಭಜರಂಗಿಗಳು, ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಮಾಡಿದ ದೌರ್ಜನ್ಯವನ್ನು ಪ್ರಶ್ನಿಸಿ ಬಂಟ್ವಾಳದ ಠಾಣೆಗೆ ದೂರು ನೀಡಲು ಹೋಗಿದ್ದಾರೆ. ಅವರನ್ನು ಮಡಿಕೇರಿ ಠಾಣೆಗೆ ಸಾಗಹಾಕಿದ ಬಂಟ್ವಾಳದ ಪೊಲೀಸರು ಭಜರಂಗಿಗಳ ಪರ ನಿಂತಿದ್ದಾರೆ. ಅಲ್ಲಿ ಮಡಿಕೇರಿ ಪೊಲೀಸರೂ ಬಂಟ್ವಾಳದ ಪೊಲೀಸರ ಮಾತಿನಂತೆ ಸರಸ್ವತಿಯವರ ದೂರು ಸ್ವೀಕರಿಸಿಲ್ಲ. ಈ ಪ್ರಕರಣದ ಹಿಂದೆ ಬಿದ್ದ 'ದಿ ಹಿಂದೂ' ವರದಿಗಾರ ಸುದಿಪ್ತೊ ಮೊಂಡಲ್ ಭಜರಂಗಿಗಳು ನಡೆಸಿದ ದೌರ್ಜನ್ಯವನ್ನು ಮೊನ್ನೆ ಆಗಸ್ಟ್ 7ರಂದು ಬಯಲಿಗೆಳೆದಿದ್ದಾರೆ. ಪ್ರಗತಿಪರ



ವಿಚಾರಧಾರೆಯ ದಕ್ಷಿಣಕನ್ನಡ ಎಸ್ಪಿ ಎ. ಸುಬ್ರಮಣ್ಯರಾವ್ ಕೂಡಲೇ ಎಚ್ಚೆತ್ತುಕೊಂಡು ಹಲ್ಲೆಗೊಳಗಾದ ಶ್ರೀಧರ್‌ನಿಂದ ಕೇಸು ದಾಖಲಿಸಿದ್ದಾರೆ. 'ಮೇಲಿನವರ' ಒತ್ತಡದಿಂದ ಬಂಟ್ವಾಳದ ಪೊಲೀಸರು ಆರೋಪಿ ಭಜರಂಗಿಗಳ ಮೇಲೆ ಕ್ರಮ ಕೈಗೊಂಡಿಲ್ಲ ಎಂದು ಅವರು ಹೇಳುವ ಮೂಲಕ ಇನ್ಸ್‌ಪೆಕ್ಟರ್ ಶಿವಪ್ರಕಾಶ್‌ನ ಮುಖವಾಡವನ್ನು ತೆರೆದು ಇಟ್ಟಿದ್ದಾರೆ.

ಬಂಟ್ವಾಳದಲ್ಲಿ ಭಜರಂಗಿಗಳ ಅಟ್ಟಹಾಸ ಹೇಗಿದೆ ಎಂದರೆ ಶ್ರೀಧರನನ್ನು ಅವರು ಬೆತ್ತಲೆ ಮಾಡಿ ಥಳಿಸಿದಾಗ ಸ್ಥಳೀಯರು ಯಾರೂ ಶ್ರೀಧರನ ನೆರವಿಗೆ ಬಂದಿಲ್ಲ, ಆ ರೀತಿ ಭಯ ಸೃಷ್ಟಿಸಿದೆ ಮಾಧವ ಕುಲಾಲ್‌ನ ಭಜರಂಗಿ ಪಡೆ. ಇನ್ನೇನು ಶ್ರೀಧರ್ ಸತ್ತೇ ಬಿಟ್ಟ ಎಂಬ ಪರಿಸ್ಥಿತಿ ಮುಟ್ಟಿದಾಗ ಆತನನ್ನು ರೈಲ್ವೆ ಟ್ರ್ಯಾಕ್ ಬಳಿ ಎಸೆದು ಹೋಗಿದ್ದಾರೆ. ಪ್ರಜ್ಞಾಹೀನನಾಗಿದ್ದ ಶ್ರೀಧರ್ ಎಚ್ಚೆತ್ತುಕೊಂಡು ಅದ್ಯಾರಿಂದಲೋ ಬಟ್ಟೆ ಪಡೆದು ಕೇರಳದ ತನ್ನ ಅಕ್ಕನ ಮನೆ ಸೇರಿದ್ದ.

ಈಗ 'ದಿ ಹಿಂದೂ' ಮಾಡಿದ ವರದಿಯಿಂದ ಎಚ್ಚೆತ್ತ ಪೊಲೀಸ್ ಇಲಾಖೆ ಕೊನೆಗೂ ದಲಿತ ವಿರೋಧಿ ದುಷ್ಟ ಭಜರಂಗಿಗಳ ವಿರುದ್ಧ ಕೇಸು ದಾಖಲಿಸಿದೆ..

ಕರಾವಳಿಯಲ್ಲಿ ಕೆಲವು ಕಡೆ ಭಜರಂಗಿಗಳೇ ಪೊಲೀಸರು, ಕೆಲವು ಕಡೆ ಪೊಲೀಸರೇ ಭಜರಂಗಿಗಳು ಎಂಬುದಕ್ಕೆ ಈ ಘಟನೆ ಒಂದು ಉದಾಹರಣೆಯಷ್ಟೇ.

• ಮಲ್ಲನಗೌಡರ್


ವೆಂಕಟೇಶ್ ಪ್ರಸನ್ನ

ಚೆಡ್ಡಿ ಪೊಲೀಸ್ ಗ್ಯಾಂಗ್

ಕರಾವಳಿಯ ಹಲವು ಠಾಣೆಗಳಲ್ಲಿ ಪಕ್ಕಾ ಚೆಡ್ಡಿ [illegible] ಕೆಲವು ಪೊಲೀಸ್ ಆಫೀಸರುಗಳು ಠಿಕಾಣಿ [illegible] ಗೋಪಾಲ್ ಹೊಸೂರ್ ಐಜಿಯಾದ ಮೇಲೆ [illegible] ಸುಬ್ರಮಣ್ಯರಾವ್, ಗಿರೀಶ್, ಅಮಿತ್‌ಸಿಂಗ್‌ರಂತಹ [illegible] ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಕರಾವಳಿಗೆ [illegible] ಮೇಲಷ್ಟೇ ಒಂದಿಷ್ಟು ಶಾಂತಿ ಮೂಡಿದೆ.

ಮಂಗಳೂರಿನಲ್ಲಿ ಜಿಲ್ಲಾ ಕ್ರೈಮ್ ವಿಭಾಗದಲ್ಲಿ ಇನ್ಸ್‌[illegible] ಆಗಿರುವ ವೆಂಕಟೇಶ್ ಪ್ರಸನ್ನ ನಂಬರ್ [illegible] ಚೆಡ್ಡಿ [illegible]

[illegible]



ದಯಾಮರಣ ಕರಿಬಸಮ್ಮನ ಕರುಣಾಜನಕ ಕೂಗಿನ ಕುರಿತು...

'ಇದುವರೆಗೆ ಅಮೆರಿಕಾ, ಯೂರೋಪ್‌ಗಳಲ್ಲಿ ಮನುಷ್ಯರು ದಯಾಮರಣದ ಮೂಲಕ ಸಾವಿಗೆದುರಾದ ಸುದ್ದಿ ಕೇಳುತ್ತಿದ್ದೆವು. 'ಈ ರೀತಿಯದ್ದೊಂದು ನಡೆಯುತ್ತದಾ' ಅಂತ ಹೌಹಾರಿದವರೂ ಇದ್ದರು. ಆದರೀಗ ನಮ್ಮ ಬದುಕುಗಳ ನಡುವಿನಿಂದಲೇ ಅಂತಹುದೊಂದು ಕೂಗೆದ್ದು ಬೆಚ್ಚುವಂತೆ ಮಾಡಿದೆ. ಅಖಂಡ ಮೂವತ್ನಾಲ್ಕು ವರ್ಷಗಳನ್ನು ವಿದ್ಯೆ ಕಲಿಸಲೋಸುಗವೇ ಮುಡುಪಾಗಿಟ್ಟ ದಾವಣಗೆರೆಯ ಕರಿಬಸಮ್ಮ ಟೀಚರ್ ದಯಾಮರಣಕ್ಕಾಗಿ ಅಂಗಲಾಚಿದ್ದಾರೆ. ಆ ಹಿರಿ ಜೀವದೊಳಗಿನ ಮಾನಸಿಕ, ದೈಹಿಕ ಹಿಂಸೆಗಳೆಲ್ಲ ಒಗ್ಗೂಡಿ ದಯಾಮರಣದ ಬೇಡಿಕೆಯಿಡುವಂತೆ ಮಾಡಿದವರ್‍ಯಾರು?'

ಉತ್ತರ ಸುಲಭದ್ದಲ್ಲ,

ಇದೀಗ ಮನೆಮಂದಿಯಿಂದ ದೂರಾಗಿ ವೃದ್ಧಾಶ್ರಮದಲ್ಲಿರುವ ಕರಿಬಸಮ್ಮನವರಿಗೆ ಎಪ್ಪತ್ತು ವರ್ಷ. ಈಕೆ ಇದೇ ದಾವಣಗೆರೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೂವತ್ತು ವರ್ಷಗಳ ಕಾಲ ಪಾಠ ಹೇಳಿದವರು. ಕೆಲಸದಿಂದ ನಿವೃತ್ತಿ ಹೊಂದಿ ತಿಂಗತಿಂಗಳು ಒಂಭತ್ತು ಸಾವಿರದಷ್ಟು ಪಿಂಚಣಿಯೂ ಬರುತ್ತದೆ. ಶಿವಪುರದ ಕೊಂಡಜ್ಜಿಯಲ್ಲಿ ಗಂಡ-ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಎಲ್ಲಾ ಇದ್ದಾರೆ. ಆದರೆ ಕರಿಬಸಮ್ಮನವರು ದಯಾಮರಣದ ಬೇಡುವ ಸ್ಥಿತಿ ತಲುಪಿದ್ದ್ಯಾಕೆ ಎಂಬ ಪ್ರಶ್ನೆ ಪ್ರಮುಖವಾಗುತ್ತದೆ.

ಈ ಬಗ್ಗೆ ಖುದ್ದು ಕರಿಬಸಮ್ಮನವರೇ ತಮಗಂಟಿಕೊಂಡಿರುವ ವಿವಿಧ ಕಾಯಿಲೆಗಳ ಕಾರಣ ಕೊಡುತ್ತಾರೆ. ಸದ್ಯ ಕರಿಬಸಮ್ಮರಿಗೆ ಬೆನ್ನುಹುರಿ ಸಂಬಂಧಿತ ಬಾಧೆ ಜೀವ ಹಿಂಡುತ್ತಿದೆ. ಸಂಧಿವಾತ, ಮಧುಮೇಹದಂಥ ತಣ್ಣಗೆ ಕೊಲ್ಲುವ ಜಾಯಿಲೆಗಳೂ ಅಮರಿಕೊಂಡಿವೆ. ಕರಿಬಸಮ್ಮ ಹೇಳುವ ಪ್ರಕಾರ ಈ ಕಾಯಿಲೆಗಳ ನಿರಂತರ ನೋವು ದಯಾಮರಣ ಅಥವಾ ಇಚ್ಛಾಮರಣದ ಬೇಡಿಕೆಯಿಡಲು ಕಾರಣ. ಇದರೊಂದಿಗೆ ಆಕೆ 'ಸುಮ್ಮನೆ ಬೇರೆಯವರಿಗೆ ಹೊರೆಯಾಗಬಾರದು' ಅಂತೊಂದು ನಿಲುವನ್ನೂ ಮುಂದಿಡುತ್ತಾರೆ!

ಆದರೆ ಇಂಥಾ ಸ್ವಾಭಿಮಾನ ಈ ಇಳಿವಯಸ್ಸಿನಲ್ಲಿ ಮನೆ ಮಂದಿಯನ್ನು ತೊರೆದು ಬದುಕಲು ಪ್ರೇರೇಪಿಸೀತೇ? ಇದೀಗ ಸಾರ್ವತ್ರಿಕವಾಗಿರುವ ಕಾಯಿಲೆಗಳೇ ಕರಿಬಸಮ್ಮನವರಿಗೂ ಅಂಟಿಕೊಂಡಿವೆ. ಅವು ಬೇಕೆಂತಲೇ ಕೊಂದುಕೊಳ್ಳುವ ನಿರ್ಧಾರ ತೆಗೆದುಕೊಳ್ಳುವಷ್ಟರವರೆಗೆ ಕೊಂಡೊಯ್ಯಬಲ್ಲವೇ? ಇಷ್ಟೆಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ತಲಾಶ್‌ಗಿಳಿದರೆ, ಕರಿಬಸಮ್ಮನವರ ಕರುಣಾಜನಕ ಸ್ಥಿತಿಗೆ ಮಾನಸಿಕ ಹಿಂಸೆಗಳೇ ಕಾರಣವಾಗಿವೆಯೇನೋ ಎಂಬ ಸಂಶಯ ಹುಟ್ಟಿಸುವಂಥ ವಿಚಾರಗಳು ಎದುರುಗೊಳ್ಳುತ್ತವೆ.

ಕರಿಬಸಮ್ಮನವರು 1983ರಲ್ಲಿ ಮದುವೆಯಾದರು. ಗಂಡ ಮೊದಲ ಹೆಂಡತಿ ಕಳೆದುಕೊಂಡ ವಿಧುರ. ಆದರೆ ಐವರು ಮಕ್ಕಳಿದ್ದರು. ಕೆಲದಿನಗಳ ಬಳಿಕ ಇದೀ ಸಂಸಾರ ದಾವಣಗೆರೆ ಪಟ್ಟಣದಿಂದ ಕೊಂಡಜ್ಜಿಗೆ ಶಿಫ್ಟ್ ಆಯಿತು. ಮುಖ್ಯ ವಿಚಾರವೆಂದರೆ ಈ ಟೀಚರ್‌ಗೆ ಮಕ್ಕಳಾಗಲಿಲ್ಲ, ಗಂಡನ ಮೊದಲನೇ ಹೆಂಡತಿಯ ಮಕ್ಕಳನ್ನೇ ತನ್ನ ಮಕ್ಕಳೆಂದುಕೊಂಡರು. ಮೂವರು ಗಂಡುಮಕ್ಕಳಿಗೂ ಮದುವೆಯಾಗಿ ಸೊಸೆಯಂದಿರು ಬಂದರು. ಮೊಮ್ಮಕ್ಕಳು ಮನೆ ತುಂಬಿದವು.

ಆದೆಲ್ಲದರ ನಡುವೆ ಈಗ್ಗೆ ಒಂಭತ್ತು ವರ್ಷಗಳ ಹಿಂದೆ ಬೆನ್ನು ಹುರಿ ಸಂಬಂಧಿತ ಬಾಧೆ ಶುರುವಾಯಿತು. ಕೆಲವೊಮ್ಮೆ ಮಲಗಿದ್ದಲ್ಲಿಂದ ಏಳಲಾರದ ಪರಿಸ್ಥಿತಿಯೂ ಬಂತು. ಇದೆಲ್ಲದರಿಂದಾಗಿ ಮೂರು ವರ್ಷಗಳ ಹಿಂದೆ ಕರಿಬಸಮ್ಮನವರು 80 ವರ್ಷದ ವೃದ್ಧ ಗಂಡ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳನ್ನೆಲ್ಲ ತೊರೆದು ದಾವಣಗೆರೆಯ ವೃದ್ಧಾಶ್ರಮ ಸೇರಿದರು!

ಈ ಘಟನಾವಳಿಗಳನ್ನೆಲ್ಲ ಗಮನಿಸಿದರೆ ದೈಹಿಕ ನರಳಾಟಗಳಿಗಿಂತಲೂ ಮಾನಸಿಕ ಹಿಂಸೆಗಳೇ ಕರಿಬಸಮ್ಮನವರನ್ನು ಸಾವಿನತ್ತ ಆಕರ್ಷಿಸಿವೆ ಅನ್ನಿಸುವಂತಿದೆ. ಮಲತಾಯಿಯೇ ಆಗಿದ್ದರೂ ಅಮ್ಮನಾಗಿ ಪೊರೆದಾಕೆ ಅನಾಥಳಂತೆ ನಿಂತು ಸಾವಿಗಾಗಿ ಅಂಗಲಾಚುತ್ತಿರುವಾಗ ಯಾವ ಮಕ್ಕಳಾದರೂ ಸುಮ್ಮನಿರಲಾದೀತಾ? ಈ ಬಗ್ಗೆ ವಿಚಾರಿಸಿದರೆ ಕರಿಬಸಮ್ಮ ಟೀಚರ್ 'ಅವರೆಲ್ಲ ಚೆನ್ನಾಗಿದ್ದಾರೆ, ಬಂದು ನೋಡ್ಕೊಂಡು ಹೋಗ್ತಾರೆ' ಅನ್ನುತ್ತಾರೆ. 'ಬಂದು ನೋಡಿಕೊಂಡು ಹೋಗುವ ಬದಲು ಮನೆಗೆ ಕರಕೊಂಡುಹೋಗಿ ನೋಡಬಹುದಲ್ಲಾ' ಅಂದರೆ, ಟೀಚರ್ 'ಅವರವರ ಜೀವ್ನ ಅವ್ರಿಗೆ. ಯಾರಿಗೂ ಭಾರವಾಗೋದು ನಂಗಿಷ್ಟ ಇಲ್ಲ' ಅನ್ನುತ್ತಾರೆ.

ಇದೆಲ್ಲದರ ಹಿಂದೆ ಕಂಡೂಕಾಣದಂತೆ ಒಂದು ಮಾನಸಿಕ ಯಾತನೆಯಿರುವುದು ಮಾತ್ರ ಸ್ಪಷ್ಟವಾಗುತ್ತದೆ.

'ದಯಾಮರಣ'ವೆಂಬ ಕಾನೂನೊಂದು ಬಂದರೆ ದಿಕ್ಕುದೆಸೆಯಿಲ್ಲದ, ಭಯಂಕರ ಕಾಯಿಲೆಯಿಂದ ಪ್ರತೀ ಕ್ಷಣ ಹಿಂಸೆ ಅನುಭವಿಸುವ ಅನೇಕರು ಸಾವಿನಲ್ಲಾದರೂ ನೆಮ್ಮದಿ ಕಂಡಾರು. ಆದರೆ ಕರಿಬಸಮ್ಮ ಟೀಚರ್‌ರ ಬದುಕಿನ ಸೂಕ್ಷ್ಮಗಳನ್ನು ಗಮನಿಸಿದರೆ, ಅಮಾನವೀಯ ಮಕ್ಕಳು ಮುದಿ ತಂದೆತಾಯಿಗಳಿಂದ ಒತ್ತಾಯಪೂರ್ವಕವಾಗಿ ದಯಾಮರಣಕ್ಕೆ ಅಪ್ಲಿಕೇಷನ್ ಹಾಕಿಸುವ ಅಪಾಯವನ್ನು ಅಲ್ಲಗಳೆಯುವಂತಿಲ್ಲ.

ಇದೆಲ್ಲ ಏನೇ ಇರಲಿ, ಕರಿಬಸಮ್ಮನವರ ದಯಾಮರಣದ ಕೂಗು ಕರುಣಾಜನಕ ರೋದನೆಯಂತೆಯೇ ಕೇಳಿಸುತ್ತಿದೆ. ಇದು ಅವರ ಮಕ್ಕಳು-ಸೊಸೆಯಂದಿರಿಗೆ ಕೇಳಿಸಲಿ, ಆ ಹಿರಿ ಜೀವದೊಳಗೂ ಕಾಯಿಲೆಗಳನ್ನು ಜಯಿಸಿ ಜೀವಿಸುವ ಆತ್ಮಬಲ ಪಡಿಮೂಡಲೆಂಬುದು ಪತ್ರಿಕೆಯ ಹಾರೈಕೆ.

• ಬಾಗಿಲಗದ್ದೆ

ಹಲೋ ಈಶ್ವರಪ್ಪ ನಮ್ಮ ಸ್ವರ್ಣಗೌರಿ ತೀರೋದ್ಲು...

ಬಳ್ಳಾರಿಯಲ್ಲಿ ಸೇರಿದ್ದ ಜನಸ್ತೋಮವನ್ನು ನೋಡಿದ ರಾಮುಲು ತಲೆ ತಿರುಕ, ಏನಾದರೂ ಹೇಳಲೇಬೇಕೆಂದು ತವಕಿಸುತ್ತಿದ್ದಾಗ, ತೆಯೇ ತಲೆ ಬೋಳಿಸಿಕೊಂಡವನೊಬ್ಬ ಬರೆದುಕೊಟ್ಟ ಗಾದೆಯನ್ನು ತಡವರಿಸಿ, ಥೇಟ್ ರಂಡೆಮುಂಡೆ ಮಗನಂತಾಡಿದನಂತಲ್ಲಾ, ನಿಗೆ ಇಂತಹ ಅವಮಾನ ಮಾಡಬಾರದಿತ್ತು ಎಂದು ಜವಾಬ್ದಾರಿಯುತ ತೋರಿದ ಕುಮಾರಸ್ವಾಮಿ, ರೆಡ್ಡಿಗಳು ಮಾಡಿದ್ದ ನೂರೈವತ್ತು ಕೋಟಿ ಲಂಚ ಹಣದ ಅರ್ಜಿಯನ್ನು ಕೆಳ ಕೋರ್ಟಿನಲ್ಲೇ ಸಲ್ಲಿಸಬಹುದಲ್ಲಾ ಸರ್ವೋಚ್ಚ ನ್ಯಾಯಾಲಯ ಹೇಳಿದ್ದನ್ನೇ ದೋಷಮುಕ್ತ ತೀರ್ಪೆಂಬಂತೆ ಡುತ್ತಿರುವ ಕುಮಾರಣ್ಣನ ಚಾನಲ್, ಬಳ್ಳಾರಿ ಸುದ್ದಿಯನ್ನು ಬಿತ್ತರಿಸಬೇಕೊ ಕತ್ತರಿಸಬೇಕೊ ಎಂಬ ಚಿಂತೆಯಲ್ಲಿರುವಾಗಲೇ ಕುಮಾರಣ್ಣನವರು ಗ್ರೆಸ್ಸಿಗರ ಬಳ್ಳಾರಿ ಪಾದಯಾತ್ರೆ ಫ್ಲಾಪ್" ಎಂದರಂತಲ್ಲಾ, ಥೂತ್ತೇರಿ!

* * * *

ಬಳ್ಳಾರಿಗೆ ಕಾಂಗ್ರೆಸ್ ಜನ ಮುತ್ತಿಕೊಳ್ಳುವ ಸಂದರ್ಭಕ್ಕೆ ಸರಿಯಾಗಿ ಗೆ ಹಾರಿದ ಎಡೂರಪ್ಪ "ಸಭೆ ಶಾಂತ ರೀತಿಯಿಂದ ನಡೆದದ್ದಕ್ಕೆ ಧಾನವಾಗಿದೆ" ಎಂದು ಹೇಳಿದ ಮಾತೆ ರೆಡ್ಡಿಗಳಿಗೆ ಕರ್ಣ ಕಠೋರವಾಗಿ ತಂತಲ್ಲಾ, ಇದಕ್ಕೆಲ್ಲಾ ಏನಾದರೂ ಮಾಡಲೇಬೇಕೆಂದು ಚಿಂತಿಸಿದ ಮು, ಸದ್ಯದ ಸಂದರ್ಭಕ್ಕೆ ಮಾರಮ್ಮನ ಪೂಜೆಯೇ ಸೂಕ್ತ ಎಂದು ರ್ಣನಿಸಿದರಂತಲ್ಲಾ, ಅದೇ ಹೊತ್ತಿಗೆ ಎಡೂರಪ್ಪ "ರೆಡ್ಡಿ ಪೈಕಿ ಯಾರನ್ನಾದರೂ ಿ, ಆ ಜಾಗಕ್ಕೆ ಸೂಕ್ತ ವ್ಯಕ್ತಿಯನ್ನು ಕೂರಿಸಿ, ಜೊತೆಯಲ್ಲೇ ಸಿದ್ದಗಂಗಾಶ್ರೀ ಸೋಮಣ್ಣ ಮತ್ತು ಅಂತರಂಗದ ಗೆಳತಿ ಶೋಭಾರನ್ನು ಸಂಪುಟಕ್ಕೆ ಕೊಳ್ಳುತ್ತೇನೆ" ಎಂದು ಹೇಳಿದಾಗ ಟಗರಿನಂತೆ ಎದ್ದು ನಿಂತ ಈಶ್ವರಪ್ಪ ಡವಿ, ಕಣ್ಣು ಅರಳಿಸಿದ ಕೂಡಲೇ, ಯಡ್ಡಿ ಎದ್ದು ಪರಾರಿಯಾದರಂತಲ್ಲಾ, ತ್ತೇರಿ!!

* * * *

ಸದ್ಯದ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ಳು, ರೆಡ್ಡಿಗಳನ್ನು ಸುಸಂಸ್ಕೃತರನ್ನಾಗಿ ಮಾಡಿ, ಅವರಿಗೆ ಮು ಭಾಷೆ ಮತ್ತು ನಡವಳಿಕೆ ಕಲಿಸಿ, ಎಡೂರಪ್ಪನನ್ನೂ ಳಿಸಿಕೊಂಡು, ತಮ್ಮ ಅಜೆಂಡಾಗಳೆಲ್ಲವನ್ನು ಒಂದೊಂದೇ ಮಾಡಬೇಕೆ ವಿನಃ ಸರ್ಕಾರವನ್ನು ಕೆಡವಬಾರದು ಎಂದು ರ್ಣಾನ ತೆಗೆದುಕೊಂಡಿವೆಯಂತಲ್ಲಾ, ಆದ್ದರಿಂದ ಮುಂದೆ ದೇ ಕೇರಿಯಲ್ಲಿ ಸಿಂಹದಂತಾಡುವ ಶ್ವಾನಗಳಂತೆ ರೆಡ್ಡಿಗಳು ರಿಗೆ ಸೀಮಿತವಾಗಿ ಮೆರೆಯುತ್ತವಂತಲ್ಲಾ, ಥೂತ್ತೇರಿ!

* * * *

ಬಿಜೆಪಿಯ ಧೀಮಂತ ನಾಯಕರು ಮತ್ತು ಪಾರ್ಟಿಯ ಕ್ಷರೂ ಆದ ಈಶ್ವರಪ್ಪನವರನ್ನು ಮಾತನಾಡಿಸಿ ಒಂದಿಷ್ಟು ಸ್ಸನ್ನು ಹಗುರ ಮಾಡಿಕೊಳ್ಳಬೇಕೆನಿಸಿತಲ್ಲಾ, ಕೂಡಲೇ ಫೋನ್ ತಲಾಗಿ ಸಿಕ್ಕಿದರು.

ರಿಂಗ್ ಟೋನ್: "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ....".

"ಹಲೋ ಯಾರ್ರಿ?"

"ನಾನು ಸಾರ್, ಯಾಹೂ ಅಂತ, ಪತ್ರಕರ್ತ."

"ಏನೇಳ್ರಿ ಯಾಹೂ ಅವ್ರುರೆ. ಏನ್ಸಮಾಚಾರ? ಎಲ್ಲಿದ್ದಿರಿ?"

"ಇಲ್ಲೆ ಇದ್ದಿನಿ ಸಾರ್. ನಿಮ್ಮ ರಿಂಗ್ ಟೋನ್ ಕೂಡ ಚೆನ್ನಾಗಿದೆ ."

"ಅದು ನಮ್ಮ ಪೇಜಾವರ ಶ್ರೀಗೆ ಇಷ್ಟವಾದದ್ದು ಕಂಡ್ರಿ. ಅದ್ಕೆ ಹಾಕಿಸಿದೆ."

"ಕನಕದಾಸರ ಯಾವುದಾದ್ರು ಸಾಲು ಸಿಗಲಿಲ್ವೆ?"

"ನನಿಗೆ ಕನಕದಾಸರಿಗಿಂತ ಪೇಜಾವರ, ಕಾಗಿನೆಲೆಗಿಂತ ಉಡುಪಿ ಬ್ವಾಚಾರ್ರು ತುಂಬ ಇಷ್ಟ ಕಂಡ್ರೀ."

"ಅಂದ್ರೆ ಕುರುಬ್ರು, ಅವರ ದೇವರು, ಆಚಾರ ಇಷ್ಟ ಇಲ್ಲ ಅಂದಂಗಾಯ್ತು."

"ಅಂಗೇನು ಇಲ್ಲ ಕಂಡ್ರಿ. ಈಗ ನಮ್ಮ ಕೈ ಬೆರಳೂ ಒಂದೇ ಸಮ ಇದ್ದವ? ಹಾಗೆ ಧರ್ಮ, ಜಾತಿ ಇವೆಲ್ಲಾ ಒಂದೇ ಸಮ ಇಲ್ಲ, ನಮ್ಮ ನಮ್ಮ ಸ್ಥಾನವನ್ನ ಒಪ್ಪಿಕೊಬೇಕು, ಗೌರವ್ರುಸಬೇಕು. ಈಗ ನಮ್ಮ ಜನಾಂಗದವ್ರುರು ನಾವು ಕುರುಬರಲ್ಲ ಬ್ರಾಹ್ಮಣರು ಅನ್ನಕ್ಕಾಗತ್ತ?"

"ಇಂತ ತರ್ಕಕ್ಕೆ ಉತ್ತರ ಕೊಡದು ಕಷ್ಟ ಸಾರ್."

"ಇದರಲ್ಲಿ ಕಷ್ಟ ಏನು ಬಂತು? ನಮ್ಮ ಸ್ಥಾನದಲ್ಲಿ ನಾವು ಅಭಿವೃದ್ಧಿಯಾಗಿ ಮೇಲೆ ಬರಬೇಕು. ಉನ್ನತ ಸ್ಥಾನಗಳನ್ನು ಪಡಿಬೇಕು. ಈಗ ನಾನು ಪಡೆದಿಲ್ಲ ಹಾಗೆ."

ಥೂತ್ತೇರಿ

"ನೀವು ಪಡದಿರೋ ಉನ್ನತ ಸ್ಥಾನ ಯಾವುದು ಸಾರ್?"

"ಅಯ್ಯೋ, ಅಷ್ಟೂ ಗೊತ್ತಿಲವೇನ್ರಿ? ಬಿಜೆಪಿ ಅಧ್ಯಕ್ಷ ಕಂಡ್ರಿ ನಾನು."

"ನಿಜ ಸಾರ್. ಅದು ಖಂಡಿತ ಉನ್ನತವಾದ ಸ್ಥಾನ. ರೆಡ್ಡಿಗಳು, ರಾಮುಲು, ರೇಣುಕ, ಹಾಲಪ್ಪ, ಚೇಟಿ ರವಿ, ಅಂಥವರಿಗ್ಯಲ್ಲ ಅಧ್ಯಕ್ಷರಾಗಿರೊ ನಿಮ್ಮದು ನಿಜವಾಗ್ಲು ಉನ್ನತ ಸ್ಥಾನ."

"ಹೌದು ಮತ್ತೆ, ಹರ್ಡಿಕರ್ ಗೋಳವಲ್‌ಕರ್, ಸಾವರಕರ್, ಅದ್ವಾನಿ, ವಾಜಪೇಯಿ ಕಟ್ಟಿರೊ ಪಾರ್ಟಿಗೆ ನನ್ನಂಥ ಒಬ್ಬ ಸಂಘದ ಸಾಮಾನ್ಯ ಕಾರ್ಯಕರ್ತ ಅಧ್ಯಕ್ಷನಾಗಿದ್ದಿನಿ ಅಂದ್ರೆ ಅದು ಹುಡುಗಾಟುಗುಳಿ ಮಾತೇನ್ರಿ? ಉನ್ನತವಾದ ಸ್ಥಾನ ಪಡೀಬೇಕಾದ್ರು ಪುಣ್ಯ ಮಾಡಿರಬೇಕು."

"ಯಾವ ತರದ ಪುಣ್ಯ ಹೇಳಿ ಸಾರ್, ಟ್ರೈ ಮಾಡನ."

"ಅದನ್ನ ಹೇಳಕ್ಕೆ ಬರದಿಲ್ಲ ಕಂಡ್ರಿ. ನಮಿಗೆ ಗೊತ್ತಿಲ್ಲದೆ ಪುಣ್ಯ ಮಾಡಬೇಕು.



ಆದ್ರು ಹೇಳ್ತಿನಿ ಕೇಳಿ. ಈಗ ಗೋಹತ್ಯೆ ನಿಷೇಧಕ್ಕೆ ನಾವು ಹೋರಾಡ್ತಾ ಇದ್ದಿವಿ. ಇದೂ ಪುಣ್ಯದ ಕೆಲಸನೆ."

"ಸಾರ್, ಗೋಹತ್ಯೆ ನಿಷೇಧದೊಳಗೆ ಎಮ್ಮೆ ಹತ್ಯೆನೂ ಸೇರಿದಿಯಾ ಸಾರ್?"

"ಅದೇ ಬೇರೆ, ಇದೆ ಬೇರೆ ಕಂಡ್ರಿ."

"ನಿಜ ಸಾರ್. ಉದಾಹರಣೆಗೆ ಪೇಜಾವರ ಶ್ರೀ ಗೋವಾದ್ರೆ ನೀವು ಕೋಣ."

"ನಾನೇನೊ ಹೇಳಿದ್ರೆ ನೀವೇನೊ ಹೇಳ್ತಿರಲ್ರೀ. ಗೋಮಾತೆ ನಮಗೆ ತಾಯಿ ಇದ್ದಂಗೆ. ಎಮ್ಮೆನ ಹಾಗನ್ನಕ್ಕಾಗುತ್ತ? ಅದರ ಸಂಸ್ಕೃತಿ, ರೀತಿನೀತಿನೆ ಬೇರೆ. ನಡವಳಿಕೆನೆ ಬೇರೆ. ಕೂಗದು ಬೇರೆ ಕಂಡ್ರೀ."

"ನಮ್ಮನೇಲೂ ಎಮ್ಮೆ ದನ ಅವೆ ಸಾರ್. ಆದ್ರೆ ಒಂದೇ ತರ ಹುಲ್ಲು ತಿಂತವೆ. ಒಂದೇ ತರ ಸಗಣಿ ಹಾಕ್ತವೆ. ಒಂದೇ ತರ ಹಾಲು ಕರಿತವೆ. ಎರಡರಿಂದ್ಲೂ ಹಾಲು, ಮೊಸರು, ಬೆಣ್ಣೆ ತುಪ್ಪ ಸಿಗತ್ತೆ, ಆದ್ರೆ ಗಂಜಲದಲ್ಲಿ ಸ್ವಲುಪ ವ್ಯತ್ಯಾಸ. ಉದಾಹರಣೆಗೆ ಪೇಜಾವರಶ್ರೀ ಹುಚ್ಚೆ ಊದ್ರೆ ಅಷ್ಟೊಂದು ಸ್ಮೆಲ್ ಇರಲ್ಲ, ಅದೇ ನೀವು ಹೂದ್ರೆ ಸ್ವಲ್ಪ ರಮ್ಮು ಅಥವಾ ವಿಸ್ಕಿನ ಮಿಕ್ಸ ಮಾಡಿದ್ರೆ ಹೇಗಿರುತ್ತೊ ಆ ತರದ ಒಂದು ವ್ಯತ್ಯಾಸ ಈ ಎಮ್ಮೆ ದನಿನ ಉಚ್ಚೆಲಿರುತ್ತೆ."

"ಅದೇರಿ ನಾನು ಹೇಳಿದ್ದು. ಈಗ್ಲಾದ್ರು ಅರ್ಥವಾಯ್ತಾ, ಗೋವು ಅಂಬಾ ಅನ್ನುತ್ತೆ ಎಮ್ಮೆ ವಾಹಾಯ್ಕ ಅನ್ನತೆ. ಗೊತ್ತಾಯ್ತ ವ್ಯತ್ಯಾಸ?"

"ಗೊತ್ತಾಯ್ತು ಸಾರ್. ಅದು ಈಶ್ವರನ ವೆಹಿಕಲ್ಲು, ಇದು ಯಮನ ವೆಹಿಕಲ್ಲು ಆ ದೃಷ್ಟಿಲೂ ನೋಡಬವುದಲ್ಲ ಸಾರ್."

"ಈ ತರ ಮಾತಾಡಿಕಂಡು ಹೋಗಬಹುದು. ನನಗೆ ಪಾರ್ಟಿ ಮೀಟಿಂಗ್ ಇದೆ. ಅದೇನ್ಹೇಳಿ ಬೇಗ ಮುಗುಸ್ರಿ."

"ಸಾರ್ ಏನಿಲ್ಲ, ನಮ್ಮ ಮನೆಲಿ ಒಂದು ಹಸ ಇತ್ತು, ಎಂಥ ಹಸ ಅಂದ್ರೆ ಸಾರ್ ದೇವರ್ರಂತ ಹಸ ಸಾರ್. ಅವಳ ಬಿಳಿ ಬಣ್ಣ, ಕರಿಕಣ್ಣು ಆಹಾ ನಿಮ್ಮ ಧಾಪ್ಪನಾಯಕಿ ಇದಾರಲ್ಲ ಸಾರ್, ಥೇಟ್ ಅವುರ ತರನೆ ಇತ್ತು. ಹೆಸರು ಸ್ವರ್ಣಗೌರಿ ಅಂತ. ಯಾರು ಕೆಚ್ಚಲಿಗೆ ಕೈ ಹಾಕಿದ್ರೂ ವದಿತಿರಲಿಲ್ಲ ಸಾರ್. ಈವರಿಗೆ ಮೂರು ಗಂಡು ಕರಿಗೆ, ಒಂದು ಹೆಣ್ಣು ಕರಿಗೆ ಜನ್ಮ ನೀಡಿತ್ತು.

"ಪಾಪ ಏನಾಯಿತ್ರಿ ಅದಕ್ಕೆ?"

"ಹೇಳ್ತಿನಿರಿ ಸಾರ್. ಆ ಕರುಗಳು ಅವೆ. ಕರುಣಾಕರ, ಜನಾರ್ದನ, ಶಾಂತ, ರಾಮುಲು ತರದ ಕರುಗಳು ಸಾರ್. ಈ ಪೈಕಿ ರಾಮುಲು ತರದ ಕರನ ಹೋರಿ ಮಾಡಿದ್ದಿವಿ. ರೆಡ್ಡಿ ತರದವ ಎತ್ತು ಮಾಡಿದ್ದಿವಿ. ಶಾಂತ ಇನ್ನು ಕಡಸು."

"ಬೇಗ ಹೇಳಿ ಮುಗುಸ್ರಿ."

"ಆಯ್ತು ಸಾರ್. ಇವತ್ತು ಬೆಳಿಗ್ಗೆ ಸ್ವರ್ಣಗೌರಿ ನಮ್ಮನ್ನೆಲ್ಲಾ ಬಿಟ್ಟು ಹೊರಟೋದ್ಲು ಸಾರ್."

"ಪಾಪ, ಏನೂ ಮಾಡಕ್ಕಾಗಲ್ಲ ಬಿಡಿ. ಎಲ್ರೂ ಒಂದಿನ ಹೋಗದೆ ಅಲ್ಲವಾ?"

"ಅದು ನಿಜ ಸಾರ್. ಆದ್ರೆ ಈಗಿನ ಸಮಸ್ಯೆ ನಿಮಗೆ ಹೇಳಲೇಬೇಕಿದೆ. ಏನಾಗಿದೆ ಅಂದ್ರೆ ಈ ಗೌರಿ ಶವನ ಕೊಟ್ಟಿಗೆಯಿಂದ ಈಚೆಗೆ ಸಾಗಸಬೇಕು. ಅದಕ್ಕೆ ಕನಿಷ್ಠ ಎಂಟು ಜನ ಬೇಕು. ಅವುರೆಲ್ಲಾ ನಾನೂರುಪಾಯಿ ಕೂಲಿ ಕೇಳ್ತ ಅವುರೆ. ಹೊಲದತ್ತ ಸಾಗಸಕ್ಕೆ ಟ್ರಾಕ್ಟ್ರಿಯವನೂ ಐನೂರುಪಾಯಿ ಕೇಳ್ತ ಅವುನೆ. ಗುಂಡಿ ತೆಗಿಯಾಕೆ ಜೆಸಿಬಿಯವನು ಐನೂರು ಕೇಳ್ತಾ ಅವನೆ, ನಮ್ಮವ್ವ ಸತ್ತಾಗ್ಲೂ ಇಷ್ಟು ದುಡ್ಡು ಖರ್ಚಾಗಿರಲಿಲ್ಲ. ಏನುಮಾಡನ ಅಂತ ಯೋಚನೆ ಆಗಿದೆ ಸಾರ್. ನಿಮ್ಮ ಪಾರ್ಟಿ ವರ್ಕರ್ಸ್‌ನಾರ ನಮ್ಮ ಮನೆ ಹತ್ರಕ್ಕೆ ಕಳುಸ್ತಿರ ಅಥವಾ ನೀವೆ ಬತ್ತೀರಾ ಸಾರ್?"

"ನಾವ್ಯಾಕ್ರಿ ಬರಬೇಕು?"

"ಬರಬೇಕು ಸಾರ್. ಇದು ನಿಮ್ಮದೆ ಸಮಸ್ಯೆ. ಗೋಹತ್ಯೆ ನಿಷೇಧಶಾಸನ ಮಾಡಿ ರಾಷ್ಟ್ರಪತಿ ಸಯಿನಿಗೆ ತಗಂಡೋಗಕ್ಕಾಯ್ತುದೆ. ನಮ್ಮ ಹಸ ತಗಂಡೋಗಕ್ಕಾಗಲ್ವಾ?"

"ತಗಂಡೋಗಿ ಏನು ಮಾಡನ್ರಿ?"

"ಕುಯ್ಕಂಡು ತಿನ್ನಿ. ಅದ ನನಿಗೇನೇಳ್ತಿರಿ. ಶಾಸನ ಮಾಡಕ್ಕೆ ಗೊತ್ತಾಯ್ತದೆ. ಪರಿಣಾಮಗಳು ಗೊತ್ತಾಗಲ್ವೆ? ತಲೆಲಿ ಸಗಣಿ ತುಂಬಕಂಡಿದ್ದೀರ ಮುಂಡೆಮಕ್ಕಳ. ಸ್ವರ್ಣಗೌರಿ ಶವನ ನಿಮ್ಮ ಆಫೀಸತ್ರಕೆ ತರ್ತಿನೀಗ ಗೊತ್ತಾಯ್ತ, ಹಲೋ, ಹಲೋ, ಹಲೋ.....?"

ಥೂತ್ತೇರಿ!!!


ಮಂಗಳೂರು ಮೂಡಾದಲಿ ಮುಖೇಡಿಗಳ ಮೆರವಣಿಗೆ!

ರೆಸ್ಸೆಸ್‌ನ ದೇಶಭಕ್ತರ ನಡುವೆ ಕಾಂಚಾಣ ಮೂಲದ ಕದನ ಕೊತಗುಡಲಾರಂಭಿಸಿದೆ. ಆಮದನಿಯಿರುವ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (Muda) ಇದಕ್ಕೆ . ಇದೀಗ ಮೂಡಾ ಅಧ್ಯಕ್ಷನಾಗಿರುವಾತ ಆರೆಸ್ಸೆಸ್ ಆಸಾಮಿ ಮಾಧವ ಭಂಡಾರಿ. ಈತನನ್ನು ಎಗರಿಸಿ ತನ್ನ ಕುಬೇರ ಶಿಷ್ಯ ರಾಜೇಶ್ ನಾಯ್ಕನನ್ನು ತಂದು ಕೂರಿಸಲು ಪ್ರಭಾಕರ ಭಟ್ಟರು ಮಸಲತ್ತು ನಡೆಸುತ್ತಿದ್ದಾರೆ. ಇದರಿಂದಾಗಿ ಲಾಠೀ ವೀರರ ಚೆಡ್ಡಿ ಉದುರಿಹೋಗುವ ಮಟ್ಟದ ಭೀಕರ ಸ್ಪರ್ಧೆಗೆ ಚಾಲನೆ ದೊರೆತಿದೆ!

ಮೂಡಾವೆಂಬ ಸಂಪದ್ಭರಿತ ಜಾಗೆಯ ಸುತ್ತ ವಿವಾದಗಳು ಹೊತ್ತಿಕೊಳ್ಳುತ್ತಲೇ ವೆ. ಕೆಲದಿನಗಳ ಹಿಂದಷ್ಟೇ ಹಾಲಿ-ಮಾಜಿ ಕಮೀಷನರ್‌ಗಳ ನಡುವೆ ತಿಕ್ಕಾಟ ಮಂಗಳೂರ ಮಂದಿ ಪುಕ್ಕಟೆ ಮನರಂಜನೆ ಪಡೆದಿದ್ದರು. ಮೂಡಾ ಅಧ್ಯಕ್ಷ ವ ಭಂಡಾರಿ ತನ್ನ ವ್ಯವಹಾರಗಳಿಗೆ ಸ್ಪಂದಿಸದ ಕಮೀಷನರ್ ಪಿ.ಜಿ.ರಮೇಶ್ ರಜೆ ವಾಪಸಾಗುವ ಮೊದಲೇ ಮಧುಕರ ಗಡ್ಕರ್ ಎಂಬಾತನನ್ನು ಆ ಜಾಗಕ್ಕೆ ಸಿದ್ದ, ಇದರಿಂದ ಮಡಿಕೇರಿಗೆ ವರ್ಗಾ ಆದ ರಮೇಶ್ ಕೋರ್ಟ್ ಹೋಗಿ ಈ 'ಹೋರಾಟ' ಇನ್ನೂ ಮುಂದುವರೆಯುತ್ತಿದೆ.

ಮೂಡಾದ ವಿವಿಧ ಸ್ಥಾನಗಳ ವಶೀಕರಣಕ್ಕೆ ಇಷ್ಟೆಲ್ಲಾ ಲಾಬಿ ನಡೆಯು ದಕ್ಕೆ, ಖುದ್ದು ಆರೆಸ್ಸೆಸ್ ಒಳಗೇ ಬೆಂಕಿ ಬಿದ್ದಿರುವುದಕ್ಕೆ ಕಾರಣವೇನು? ಬೆನ್ನು ಹತ್ತಿದರೆ ಬೃಹತ್ ಮಾಫಿಯಾವೊಂದು ಜಾಹೀರಾಗುತ್ತದೆ. ಲ್ಲಿ ಪ್ರಮುಖವಾದದ್ದು ಲ್ಯಾಂಡ್ ಡೀಲಿಂಗ್. ಮಂಗಳೂರಿನ ಬಿಕನ ಮಲ್ಲಿ ದಿ. ಶ್ರೀನಿವಾಸ್ ಮಲ್ಲಿ ಹೆಸರಲ್ಲಿ 'ಮೂಡಾ' ವತಿಯಿಂದ ಬಡಾವಣೆ ನಿರ್ಮಾಣವಾಗಿದೆ. ಇದರಲ್ಲಿ 90 ಸೈಟುಗಳು ಹಂಚಿಕೆಗಾಗಿ ದೆ.

ಭಾರೀ ಮೊತ್ತದ ಬಡಾವಣೆಯ ಸೈಟು ಹಂಚಿಕೆಯ ಕರ್‌ಗಿರಿಯನ್ನು ಮಾಧವ ಭಂಡಾರಿ ತನ್ನ ಮಗನಿಗೆ ವಹಿಸಿದ್ದ. ಇಲ್ಲಿ ಕಮಾಯಿ ವ್ಯವಹಾರ ನಡೆಯಿತು. ಇದರಿಂದಾಗಿ ಸ್ವತಃ ರಿಯಲ್ ಟ್ ದಂಧೆಕೋರರಾಗಿರುವ ಇತರೆ ಚೆಡ್ಡಿ ನಾಯಕರ ಹೊಟ್ಟೆ ಉರಿದುಹೋಗಿತ್ತು



ಈಗ ಸುರತ್ಕಲ್, ಪಾಮಂಜೂರುಗಳಲ್ಲಿಯೂ ವಸತಿ ಬಡಾವಣೆ ನಿರ್ಮಿಸಲು 'ಮೂಡಾ' ಯೋಜಿಸಿದೆ. ಇದರಿಂದ ಖರೀದಿಯಲ್ಲೇ ಕೋಟಿ-ಕೋಟಿ ಕಮಾಯಿಸುವ ಸದವಕಾಶ ಬಂದೊದಗಿದೆ. ಅಧ್ಯಕ್ಷಸುಬುಗಳನ್ನೇ ಬದುಕಾಗಿಸಿಕೊಂಡಿರುವ ಭಂಡಾರಿಯ ಮಗನಿಗೆ ಆ ಅವಕಾಶ ದೊರಕುವ ಸಂಭವವೂ ಇದೆ. ಇದನ್ನು ತಪ್ಪಿಸಲೋಸ್ಕರವೇ ಭಂಡಾರಿಯನ್ನು ಕಿತ್ತುಹಾಕುವ ಮಸಲತ್ತು ನಡೆಯುತ್ತಿದೆ.

ಈ ವಿಚಾರದದಲ್ಲಿ ಆರೆಸ್ಸೆಸ್ ಸಂಚಾಲಕ, ಬಿಜೆಪಿಯ ರಿಮೋಟ್ ಕಂಟ್ರೋಲರ್ ಕಲ್ಲಡ್ಕ ಪ್ರಭಾಕರ ಭಟ್ಟ ನಿರ್ಣಾಯಕ ಹಂತ ತಲುಪಿದ್ದಾರೆ. ತನ್ನ ಶಿಷ್ಯ ರಾಜೇಶ್ ನಾಯ್ಕ ಎಂಬ ಶ್ರೀಮಂತ ಕುಳವನ್ನು ಮೂಡಾ ಅಧ್ಯಕ್ಷಗಾದಿಗೇರಿಸಲು ಕಸರತ್ತು ಶುರುವಿಟ್ಟಿದ್ದಾರೆ.

ಈ ರಾಜೇಶ್ ನಾಯ್ಕ ರಾಜಕಾರಣಿಯಲ್ಲ, ಆದರೆ ತನ್ನ ಹಣಬಲದಿಂದಾಗಿ ರಾಜಕೀಯದ ಮೇಲೆ ಕಂಟ್ರೋಲ್ ಹೊಂದಿರುವಾತ. ಸಂಸದ ನಳಿನ್‌ಕುಮಾರ್ ಕಟೀಲ್‌ಗೆ ಚುನಾವಣಾ ಸಂದರ್ಭದಲ್ಲಿ ಎಗ್ಗಿಲ್ಲದೆ ಹಣ ಕೊಟ್ಟವನೂ ಈತನೆ. ಈತ ಗಂಜಿನಮಠದಲ್ಲಿ ನೂರಾರು ಎಕರೆ ಜಮೀನು ಹೊಂದಿದ್ದಾನಲ್ಲದೆ, ಮುಂಬಯಿಯಲ್ಲಿ ಶರದ್ ಪವಾರ್‌ಗೆ ಬ್ಯುಸಿನೆಸ್ ಪಾರ್ಟನರ್ ಆಗಿರುವ ಎಸ್.ಎಂ.ಶೆಟ್ಟರ ಖಾಸಾ ಭಾವನೂ ಹೌದು. ಜೊತೆಗೆ ಪ್ರಭಾಕರ ಭಟ್ಟರ ಬಂಟನೆಂಬುದು ಈತನ ಪ್ರಮುಖ ಕ್ವಾಲಿಫಿಕೇಷನ್ನು!

ಇದೆಲ್ಲದರೊಂದಿಗೆ ಈತ ಗಣಿದಣಿಯೂ ಹೌದು. ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಹೊಗೆರೆಹಳ್ಳಿಯಲ್ಲಿ ಈತನಿಗೆ ಕೋಟ್ಯಾಂತರ ಮೌಲ್ಯದ ಜಮೀನಿದೆ. 'ಸಿದ್ದೇಶ್ವರ ಮೈನ್ಸ್ ಇಂಟರ್‌ನ್ಯಾಷನಲ್' ಹೆಸರಿನಲ್ಲಿ ಗಣಿಗಾರಿಕೆಯನ್ನೂ ನಡೆಸುತ್ತಾನೆ. ಈ ಗಣಿಗಾರಿಕೆ ಸಂಬಂಧ ಅರಣ್ಯ ಇಲಾಖೆಯ ಪರವಾನಗಿ ಇಲ್ಲದೆ ಕಾಡು ಕಡಿದು ರಸ್ತೆ ಮಾಡಿ ಕೇಸು ಜಡಿಸಿಕೊಂಡಿದ್ದೂ ನಡೆದಿದೆ. ಈ ಬಗ್ಗೆ ಕಡೂರು ಅರಣ್ಯ ಇಲಾಖೆಯ ಡಿ.ಸಿ.ಎಫ್ ವೆಂಕಟೇಶ್ ಈತನ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಈ ಸಂಬಂಧ ಕೋರ್ಟ್‌ಗೆ ಹಾಜರಾಗದೆ ಕಳ್ಳನಂತೆ ತಿರುಗಾಡುತ್ತಿರುವವನು ರಾಜೇಶ್ ನಾಯ್ಕ!

ಇಂಥವನನ್ನು ಹಣದ ಮರ್ಜಿಗೆ ಬಿದ್ದ ಪ್ರಭಾಕರ ಭಟ್ಟರು 'ಮೂಡಾ'ದ ಅಧ್ಯಕ್ಷನನ್ನಾಗಿಸಲು ಹೆಣಗಾಡುತ್ತಿರುವುದು ವಿಪರ್ಯಾಸ. ಇದು ಸಾಧ್ಯವಾದದ್ದೇ ಆದರೆ ಮೂಡಾದ ಇದುವರೆಗಿನ ಭಾನಗಡಿಗಳ ದಾಖಲೆಗಳು ಸೃಷ್ಟಿ ಮುರಿದು ಹೊಸ ದಾಖಲೆ ಆಗಬಹುದೇ ವಿನಃ ಮತ್ತೇನೂ ಆಗಲಾರದು!

• ವರದಿಗಾರ

ಭಾಗ 8

‘ಪರ’ ‘ಪರ’ ತುರಿಕೆಯ ಸುಖ



ಪ್ರಿಯ ಕ್ಯಾಷ್ಯನ್,

ಎರಡು ವರ್ಷಗಳ ಹಿಂದೆ ಭೈರಪ್ಪನವರ ‘ಆವರಣ’ ಕಾದಂಬರಿ ಪ್ರಕಟವಾದಾಗ, ನೀವು ಬಹಳ ಕಾಳಜಿಯಿಂದ ‘ಆವರಣ ಎಂಬ ವಿ-ಕೃತಿ’ ವಿಮರ್ಶಾ ಸಂಕಲನವನ್ನು ಸಂಪಾದಿಸಿದಿರಿ. ಅದರಲ್ಲಿ ಬರೆದಿರುವ ಎಲ್ಲ ಬರಹಗಾರರು ತಮ್ಮ ಪ್ರಕಾರ ‘ಆವರಣ’ ಯಾಕೆ ಒಂದು ಕೆಟ್ಟ ಕೃತಿಯಾಗಿದೆ ಎಂಬುದನ್ನು ಭಿನ್ನ ಬಗೆಗಳಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಭೈರಪ್ಪ ತಮ್ಮ ‘ಹಿಂದೂತ್ವವಾದಿ’ ನಿಲುವನ್ನು ಮುಚ್ಚಿಟ್ಟುಕೊಂಡವರಲ್ಲ; ಹಾಗಂತ ವಿಮರ್ಶಾ ಸಂಕಲನದಲ್ಲಿ ಬರೆದಿರುವವರು ‘ಭೈರಪ್ಪ ಒಬ್ಬ ಚಡ್ಡಿ- ಅದಕ್ಕೆ ‘ಆವರಣ’ ಒಂದು ವಿಕೃತಿ’ ಎಂದು ಹೇಳಿ ಕೈತೊಳೆದುಕೊಂಡಿಲ್ಲ. ಪ್ರತಿಯೊಬ್ಬರೂ ಕಾದಂಬರಿಯ ಪಠ್ಯವನ್ನೇ ಆಧಾರವಾಗಿಟ್ಟುಕೊಂಡು, ಅದು ಯಾಕೆ ವಿ-ಕೃತವಾಗಿದೆ ಎಂದು ವಿಶ್ಲೇಷಣೆ ಮಾಡಿದ್ದಾರೆ. ಯಾವುದೇ ಕೃತಿಯ ಬಗ್ಗೆ ಸಹಾನುಭೂತಿ ಇದ್ದರೂ, ಇಲ್ಲದಿದ್ದರೂ ಇದು ವಿಮರ್ಶೆ-ಟೀಕೆ ನಿರ್ವಹಿಸಬೇಕಾದ ‘ಕನಿಷ್ಠ ವಿಮರ್ಶೆಯ ಜವಾಬ್ದಾರಿ’. ‘ದೇಶಕಾಲ’ ವಿಶೇಷಾಂಕವನ್ನು ಕುರಿತು ನಡೆಯುತ್ತಿರುವ ವಾಗ್ವಾದದಲ್ಲಿ ನನ್ನ ಎರಡು ಪ್ರತಿಕ್ರಿಯೆಗಳ ಮೂಲಕ ನಾನು ಸ್ಪಷ್ಟವಾಗಿ ಹೇಳಿದ್ದು: ‘ದೇಶಕಾಲ’ಕ್ಕೆ ಜಾತಿವಾದಿ, ಕೋಮುವಾದಿ, ಸಾಂಸ್ಕೃತಿಕ ಸರ್ವಾಧಿಕಾರಿ ಹುನ್ನಾರಗಳಿವೆ ಎಂದು ಖಂಡಿತವಾಗಿ ಘೋಷಿಸುತ್ತಿರುವವರು ‘ಕನಿಷ್ಠ ವಿಮರ್ಶಾ ಜವಾಬ್ದಾರಿ’ಯನ್ನೂ ತೋರುತ್ತಿಲ್ಲ, ಹಾಗಾಗಿ ಇದು ನನಗೆ ಸಮ್ಮತವಲ್ಲ. ಇಷ್ಟು ಹೇಳಿದ್ದಕ್ಕೆ ವಸಂತ ಬನ್ನಾಡಿಯವರು ನನ್ನ ವೈಚಾರಿಕ ಪ್ರಾಮಾಣಿಕತೆ ಅನುಮಾನಾಸ್ಪದವೆಂದು ಪರಿ ಪರಿಯಾಗಿ ಸಾಧಿಸಲು ಪ್ರಯತ್ನಿಸಿದ್ದಾರೆ. ಈ ಬಗೆಯ ಟೀಕೆಗಳಿಗೆ ಉತ್ತರಿಸುವ ಹುಮ್ಮಸ್ಸು ನನಗೂ ಇಲ್ಲ. ಆದರೆ, ನಾನು ಹಿಂದಿನ ಬರಹಗಳಲ್ಲಿ ಬರಿ ‘ವಾಗ್ವಾದ’ಗಳ ಪಟ್ಟಿ ನೀಡುವ ಮೂಲಕವು, ‘ಶ್ರೇಷ್ಠತೆಯ ವ್ಯಸನ’ ಮತ್ತು ‘ಸಾಂಸ್ಕೃತಿಕ ಅಧಿಕಾರ’ದ ಪರಿಕಲ್ಪನೆಗಳನ್ನು ತಿರುಚುವ ಮೂಲಕವೂ ಓದುಗರನ್ನು ದಾರಿ ತಪ್ಪಿಸುತ್ತಿದ್ದೇನೆಂದು, ‘ಅತಿ ಓದಿನಿಂದ ಬಂದಿರುವ ತನಗೆ ಮಾತ್ರ ಎಲ್ಲ ತಿಳಿದಿದೆ ಎಂಬ ಏಕಪಾತ್ರಾಭಿನಯ ಶೈಲಿ’ಯಲ್ಲಿ ‘ಅನಗತ್ಯ ಧಾರ್ಷ್ಟ್ಯ’ ತೋರುವುದನ್ನು ಬಿಟ್ಟು ಸಾಚಾ ಆಗಬೇಕೆಂದು ಸಲಹೆ ಕೊಟ್ಟಿರುವುದರಿಂದ, ಮಾರ್ಗದರ್ಶನ ಕೋರಿ ಕೆಲವು ಸ್ಪಷ್ಟನೆಗಳನ್ನು ಮಾತ್ರ ಕೇಳುತ್ತೇನೆ:



• ಕೆ.ಫಣಿರಾಜ್

• ತೇಜಸ್ವಿ-ಅನಂತಮೂರ್ತಿ ವಾಗ್ವಾದದಲ್ಲಿ ನಾನು ತೇಜಸ್ವಿ ಪಕ್ಷಪಾತಿ; ಲಂಕೇಶರ ‘ಅಣ್ಣನ ನೆನಪು’ ಟೀಕೆಯ ಸಂದರ್ಭದಲ್ಲಿ ನನ್ನ ಒಲವಿರುವುದು ‘ಅಣ್ಣನ ನೆನಪು’ ಕಡೆಗೆ; ‘ಶ್ರೇಷ್ಠತೆಯ ವ್ಯಸನ’ ಚರ್ಚೆಯಲ್ಲಿ ಲಂಕೇಶರ ನಿಷ್ಠೂರ ನಿಲುವು ನನಗೆ ಪ್ರಿಯ; ಕೋಮುವಾದದ ವಿಷಯಕ್ಕೆ ಬಂದರೆ ತೇಜಸ್ವಿಯವರ ವ್ಯಕ್ತಿನಿಷ್ಠ ನಿಲುವಿಗಿಂತ ಲಂಕೇಶ್ ಮತ್ತು ಅನಂತಮೂರ್ತಿಯವರ ಸ್ಪಷ್ಟವಾದ ಸಾಮಾಜಿಕ ನಿಲುವುಗಳು ನನಗೆ ಮೆಚ್ಚುಗೆ; ಜಾಗತೀಕರಣದ ವಿಷಯದಲ್ಲಿ ತೇಜಸ್ವಿ, ಲಂಕೇಶರ ನಿಲುವುಗಳು ನನಗೆ ಅಪಥ್ಯ, ಅನಂತಮೂರ್ತಿಯವರ ‘ಆದರ್ಶ’ಗಳ ಬಗ್ಗೆ ಅನುಮಾನ; ಇತ್ಯಾದಿ, ಇತ್ಯಾದಿ. ಇಷ್ಟು ಹೇಳಿದರೆ ಏನು ಬಂತು? ಪ್ರತಿ ಸಂದರ್ಭದಲ್ಲಿ ಒಬ್ಬರ ನಿಲುವಿನ ಕಡೆ ವಾಲಿಕೊಂಡಾಗಲೂ, ಮತ್ತೊಬ್ಬರ ಸೂಕ್ಷ್ಮ ಒಳನೋಟಗಳ ಬಗ್ಗೆ ಗೌರವಾದರ ಕಡಿಮೆಯಾಗಿಲ್ಲ, ತೇಜಸ್ವಿ ಮತ್ತು ಲಂಕೇಶ್ ಸಾಮೂಹಿಕ ಚಳವಳಿಗಳ ಬಗ್ಗೆ ಇಟ್ಟುಕೊಂಡ ಅನುಮಾನ ಮತ್ತು ಮಾಡಿರುವ ಟೀಕೆಗಳಲ್ಲಿ ಮುಕ್ಕಾಲುವಾಸಿ ಸರಿಯಾದವು ಎಂದು ಒಪ್ಪಿಕೊಳ್ಳುತ್ತಲೇ ಚಳವಳಿಗಳಲ್ಲಿ ಭಾಗವಹಿಸುವುದು ಸಾಧ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಇವೆಲ್ಲ ಹೇಳಿದಷ್ಟು ಸುಲಲಿತವಲ್ಲ, ‘ದೇಶಕಾಲ’ದಲ್ಲಿ ಪ್ರಕಟವಾಗುವ ಹಲವು ಬರಹಗಳನ್ನು ಮನಸಾರೆ ಮೆಚ್ಚಿದ್ದೇನೆ, ಮತ್ತೂ ಹಲವು ಬರಹಗಳ ಬಗ್ಗೆ ನನಗೆ ತಕರಾರುಗಳಿವೆ; ‘ಲಂಕೇಶ್’ ಸೇರಿದ ಹಾಗೆ, ನಾನು ಓದುವ ಮತ್ತು ಬರೆಯುವ ಪತ್ರಿಕೆಗಳ ಬಗೆಗೂ ನನ್ನ ನಿಲುವು ಇಂಥದ್ದೇ. ಇಲ್ಲಿ ‘ಪರ’ ‘ಪರ’ ಎಂದು ತುರಿಸಿಕೊಂಡು ಸುಖಪಡುವ ಭಾಗ್ಯವನ್ನಂತೂ ನಾನು ಪಡೆದಿಲ್ಲ.

• ಅಡಿಗರು 1971ರ ಲೋಕಸಭಾ ಚುನಾವಣೆಯಲ್ಲಿ ‘ಜನಸಂಘ’ದ ಅಭ್ಯರ್ಥಿಯಾಗಿದ್ದರು. ಸೋತರು. ಆ ಚುನಾವಣೆಯಲ್ಲಿ ಅಡಿಗರ ಸಾಹಿತ್ಯಕ ಆಪ್ತರಲ್ಲಿ ಓಣಿ ಓಣಿ ತಿರುಗಿ ಪ್ರಚಾರ ಮಾಡಿದವರು ಲಂಕೇಶ್. ಅನಂತಮೂರ್ತಿ ಅಡಿಗರು ‘ಜನಸಂಘ’ದ ವತಿಯಿಂದ ಚುನಾವಣೆಗೆ ನಿಲ್ಲುವುದನ್ನು ವಿರೋಧಿಸಿದ್ದರು. ಆ ಸನ್ನಿವೇಶದ ಇಡಿ ಅನುಭವವನ್ನು ಲಂಕೇಶ್ ‘1971-ಕೆಲವು ಟಿಪ್ಪಣಿಗಳು’ ಲೇಖನದಲ್ಲಿ ಬರೆದಿದ್ದಾರೆ. ಪರ-ವಿರೋಧಗಳ ಕುರಿತ ವಿಭಿನ್ನವೂ-ನಿಷ್ಠೂರವೂ ಆಗಿರುವ ವೈಚಾರಿಕ ಬರಹ ವದು. 1977ರ ನಂತರದ ಕಾಲಘಟ್ಟದಲ್ಲಿ ಹಲವಾರು ಕಾರಣಗಳಿಗಾಗಿ ಅಡಿಗರ ವೈಯಕ್ತಿಕ ಸಂಗದಿಂದ ದೂರವಾದುದ್ದರ ಬಗ್ಗೆಯ… ಲಂಕೇಶ್ ಬರೆದಿದ್ದಾರೆ. 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ ‘ಕನ್ನಡ ಸಾಹಿ… ಸಮ್ಮೇಳನ’ದಲ್ಲಿ ಲಂಕೇಶ್ ಭಾಗವಹಿಸಿದ್ದರೋ ಇಲ್ಲವೋ ಎಂಬುದು ಸ… ನನಗೆ ಖಚಿತವಾಗಿ ಗೊತ್ತಿಲ್ಲ; ಆದರೆ ಅದಕ್ಕೆ ವಿರುದ್ಧವಾಗಿ ನಡೆದ ‘ಬಂಡಾಯ… ಸಾಹಿತ್ಯ ಸಮ್ಮೇಳನ’ದಲ್ಲಿ ಅವರು ಭಾಗವಹಿಸಿರಲಿಲ್ಲ, ಮಾತ್ರವಲ್ಲ, ಆ ನಂತರದ… ಬಂಡಾಯ ಸಾಹಿತ್ಯ ಚಳವಳಿಯನ್ನು ಅವರು ‘ದಂಬಾಯ’ ಎಂದೇ ಟೀಕಿಸುತ್ತಿದ್ದ… 1989ರಲ್ಲಿ ತಾವು ‘ಜಾಗೃತ ಸಾಹಿತ್ಯ ಸಮ್ಮೇಳನ’ವನ್ನು ಆಯೋಜಿಸಿದಾ… ಲಂಕೇಶ್ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅಡಿಗರನ್ನೇ ಆಯ್ದುಕೊಂಡರು. ಅಧ… ಭಾಷಣದಲ್ಲಿ ಅಡಿಗರು ಆಡಿದ ಮಾತುಗಳನ್ನು ಎತ್ತಿಹಿಡಿಯಲು ಮ… ‘ಸಾಹಿತ್ಯದಲ್ಲಿ ಶ್ರೇಷ್ಠತೆ’ಯ ಪರಿಕಲ್ಪನೆಯನ್ನು ಸಮರ್ಥಿಸಿಕೊಳ್ಳಲು ‘ಜೀವನ್ಮರಣ… ಪ್ರಶ್ನೆ’ ಎಂಬ ಟೀಕೆ-ಟಿಪ್ಪಣಿಯನ್ನು ಬರೆದರು. ಲಂಕೇಶರಿಗೆ ತಮ್ಮ ಈ ಎ… ಕ್ರಿಯೆಗಳ ಬಗ್ಗೆ ಯಾವ ‘ಪಶ್ಚಾತ್ತಾಪ’ವೂ ಇರಲಿಲ್ಲ. ಅಷ್ಟು ಮಾತ್ರವಲ… ಅಡಿಗರ ‘ಸುವರ್ಣ ಪುತ್ಥಳಿ’ ಕವನಸಂಕಲನಕ್ಕೆ ಬರೆದ ಮುನ್ನುಡಿಯ… ಜಿ.ರಾಜಶೇಖರ್ ಅಡಿಗರ ರಾಜಕೀಯವನ್ನು ಪ್ರಸ್ತಾಪ ಮಾಡಿದ್ದನ್ನೂ ಟೀಕಿಸಿದ್ದರು… ಅಡಿಗರ ವೈಚಾರಿಕತೆಯ ಬಗ್ಗೆ ಬಹಿರಂಗವಾಗಿ ಟೀಕಿಸುತ್ತಲೂ, ತಮ್ಮ ಅಪ್ಪ… ಸಾಹಿತ್ಯನಿಷ್ಠೆಯ ಮೂಲಕ ತಮ್ಮ ರಾಜಕೀಯವನ್ನು ಮೀರಿದವರೆಂಬುದು… ಲಂಕೇಶರ ನಿಲುವಾಗಿತ್ತು. ಲಂಕೇಶರ ನಿಲುವನ್ನು ನಾವು ಒಪ್ಪಿಕೊಳ್ಳಬೇಕಿಲ್ಲ… ಆದರೆ ಕಾಲುಶತಮಾನಗಳ ಕಾಲ ಬರಹವನ್ನೇ ವೃತ್ತಿ ಮಾಡಿಕೊಂಡ ಒಬ… ಲೇಖಕ ಅಡಿಗರನ್ನು ಸರಳ ‘ಪರ-ವಿರೋಧ’ಗಳ ನೆಲೆಯಲ್ಲಿ ಅರ್ಥೈಸಲು… ನಿರಾಕರಿಸಿದರು ಎನ್ನುವುದನ್ನು ನಾನೇಕೆ ಮರೆಯಬೇಕು? ಬೋದಿಲೇರನ ಕಾವ್ಯವನ್ನು… ಉತ್ಕಟತೆಯಲ್ಲಿ ಕನ್ನಡಕ್ಕೆ ತಂದವರು ಲಂಕೇಶ್. ಅವರು ಸಾರ್ತ್ರ್ ಒಬ್ಬ ‘ಗ್ರಾಸ್… ಬರಹಗಾರ’ ಎಂದು ಟೀಕಿಸುತ್ತಿದ್ದರು ಮತ್ತು ಕಾಮುವಿನ ಸಾಹಿತ್ಯವನ್ನು ಮನಸಾರ… ಮೆಚ್ಚಿ ಮತ್ತೆ ಮತ್ತೆ ಆತನ ಬಗ್ಗೆ ಬರೆಯುತ್ತಿದ್ದರು. ನೆರೂಡ ಮತ್ತು ಬ್ರೆಕ್ಟ್… ಸೋವಿಯತ್ ವ್ಯವಸ್ಥೆಯನ್ನು ಬಹಿರಂಗವಾಗಿ ಟೀಕಿಸಿದವರಲ್ಲ ಎಂದು ಗೊತ್ತಿದ್ದೂ… ಈ ಲೇಖಕರು ತಮ್ಮ ಬರಹದ ಅಪೂರ್ವತೆಯಲ್ಲಿ ಸಾಧಿಸಿದ್ದನ್ನು ನೆನೆಯುತ್ತಿದ್ದರು. ತನ್ನ ಪ್ರಜ್ಞೆಯ ಮೇಲೆ ಪ್ರಭಾವ ಬೀರಿದ ಪಾಶ್ಚಾತ್ಯ ಬರಹಗಾರರನ್ನು ‘ಮನಕೆ… ಕಾರಂಜಿಯ ಸ್ಪರ್ಶ’ ನೀಡಿದವರೆಂದೆ ಬಣ್ಣಿಸುವ ಕನ್ನಡದ ದೊಡ್ಡ ಲೇಖಕನ ಒಳನೋಟಗಳನ್ನು ‘ಪರ-ವಿರೋಧ’ಗಳ ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದೋ?

• 1984ರಲ್ಲಿ ಸುಬ್ಬಣ್ಣ ತಮ್ಮ ‘ನೀನಾಸಂ’ ರಂಗ ಸಂಸ್ಥೆಗೆ ಫೋರ್ಡ್ ಫೌಂಡೇಶನ್‌ನಿಂದ ಸಹಾಯಧನ ಸ್ವೀಕರಿಸಿದ್ದು ಗುಟ್ಟಿನ ವಿಷಯವೇನೂ ಆಗಿರಲಿಲ್ಲ. ಅದರ ಬಗ್ಗೆ ಆಗಲೇ ಸಾಕಷ್ಟು ಟೀಕೆಗಳು ಬಂದಿದ್ದವು. ಸುಬ್ಬಣ್ಣ ತಾವು ಪಡೆದ ಹಣವನ್ನು ಯಾವ ಬಗೆಯಲ್ಲಿ ವಿನಿಯೋಗಿಸಿದ್ದೇನೆ ಎಂದು ತಿಳಿಸಿ, ಪೈಸ ಪೈಸ ಲೆಕ್ಕಾಚಾರವನ್ನು ಸಾರ್ವಜನಿಕರ ಅವಗಾಹನೆಗೆ ತಂದರು. ಸುಬ್ಬಣ್ಣ ಫೋರ್ಡ್ ಫೌಂಡೇಶನ್ ನೀಡಿದ ಹಣದಿಂದ ನಡೆಸಿದ ಕಾರ್ಯಕ್ರಮಗಳು ಸಾರ್ವಜನಿಕವಾಗಿಯೇ ನಡೆದಿರುವುದರಿಂದ ಅವು ಅಮೆರಿಕೆಯ ಹುನ್ನಾರಕ್ಕೆ ತಕ್ಕುದಾದ ಭ್ರಷ್ಟ ಕಾರ್ಯಕ್ರಮಗಳಾಗಿದ್ದವೆಯೇ ಎಂದು ಇಂದಿಗೂ ಪರಿಶೀಲಿಸಬಹುದು. ಎರಡನೆಯ ವರ್ಷವೂ ಧನಸಹಾಯ ಮುಂದುವರೆಸುವುದಾಗಿ ಫೋರ್ಡ್ ಫೌಂಡೇಶನ್ ಮುಂದೆ ಬಂದಾಗ ಸುಬ್ಬಣ್ಣ ನಿರಾಕರಿಸಿದರೂ, ಮೊದಲ ಸ್ವೀಕಾರದ ಫಲಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಲು ಯಾವ ಅಡ್ಡಿಯೂ ಇಲ್ಲ. ಇದಕ್ಕೆ ಯಾರೂ ತಯಾರಿದ್ದಂತಿಲ್ಲ, ಬರೀ ಅನುಮಾನ, ಆರೋಪಗಳು ‘ಸಾಂಸ್ಕೃತಿಕ ವಿಮರ್ಶೆ’ಗಳಾಗಲಾರವು ಎಂದಾಕ್ಷಣ ‘ನೋಡಿ ಇವರು ಆ ಕೃತ್ಯಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ’ ಎನ್ನುವ ವರಸೆ ಮಾತ್ರ ಅನಾಯಾಸವಾಗಿ ಪ್ರಕಟವಾಗುತ್ತದೆ. ನನ್ನಿಂದ ಅಥವ ‘ದೇಶಕಾಲ’ದಿಂದ ವಿಮರ್ಶೆಯ ಜವಾಬ್ದಾರಿಯನ್ನು ನಿರೀಕ್ಷಿಸು ವಂತಿಲ್ಲ ಎಂದು ವಸಂತ ಬನ್ನಾಡಿಯವರು ಹೇಳಿದ್ದಾರೆ; ಈ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿಯುತ ಮಂದಿಯನ್ನು ವಸಂತ ಬನ್ನಾಡಿಯವರು ಶೋಧಿಸಿದಂತಿದೆ; ನಿಜಕ್ಕೂ ನಾನು ಕಾತುರದಿಂದ ಕಾದು ಕಲಿಯುವೆ. ●

ದೇಶಕಾಲ ಚರ್ಚೆ

ಪೋಲಾಂಡ ನಾಯಕ! ಹಾಗಂದ್ರೆ ಏನ್ಸಾರ್?

‘ದೇಶಕಾಲ’ ಕುರಿತಾದ ಚರ್ಚೆಯನ್ನು ಓರ್ವ ಓದುಗನಾಗಿ ಗಮನಿಸುತ್ತಿದ್ದೇನೆ. ನನ್ನಲ್ಲಿರುವ ಒಂದೆರಡು ಪ್ರಶ್ನೆಗಳನ್ನು ಕೇಳುವುದು ಮತ್ತು ಒಂದೆರಡು ಅನಿಸಿಕೆಗಳನ್ನು ಹೇಳಿಕೊಳ್ಳುವುದು ನನ್ನ ಉದ್ದೇಶ.

ಎಲ್ಲರಂತೆ ನನಗೂ ಜಿ. ರಾಜಶೇಖರ ಅವರ ಬಗ್ಗೆ ಗೌರವ ಇದ್ದರೂ ಈ ಚರ್ಚೆಯುದ್ದಕ್ಕೂ ರಾಜಶೇಖರ ಅವರು ಯಾರ ಬಗ್ಗೆಯೂ ಗೌರವ ಬಿಡಿ ಕನಿಷ್ಠ ಸೌಜನ್ಯವೂ ಇಲ್ಲದೆ ನಡೆದುಕೊಂಡಿದ್ದಾರೆ ಎಂಬುದು ನನ್ನ ಭಾವನೆ. ಅರುಣ ಜೋಳದಕೂಡ್ಲಗಿ ಎಂಬ ಯುವ ಸಾಹಿತಿಯೋರ್ವರ ಲೇಖನಕ್ಕೆ ಅವರು ಈ ವೇದಿಕೆಯಲ್ಲಿ ಪ್ರತಿಕ್ರಿಯಿಸಿದ ರೀತಿ ನೋಡಿದರೆ ಅದು ಸ್ಪಷ್ಟವಾಗುತ್ತದೆ. ಎಲ್ಲ ವೇದಿಕೆಗಳಲ್ಲಿ ಮಾನವೀಯತೆಯ ಕುರಿತು ಮಾತನಾಡುವ ರಾಜಶೇಖರ ಆ ಲೇಖನದಲ್ಲಿ ಎಷ್ಟೊಂದು ಅಮಾನವೀಯವಾಗಿ ಪ್ರತಿಕ್ರಿಯಿಸಿದ್ದಾರೆ.

‘ದೇಶಕಾಲ’ದ 21ರ ಪಟ್ಟಿಯಲ್ಲಿ ಸ್ವತಃ ಸ್ಥಾನ ಪಡೆದಿರುವ ಅರುಣ್ ‘ದೇಶಕಾಲ’ ತನಗೆ ನೀಡಿದ ಈ ಸರ್ಟಿಫಿಕೇಟ್‌ನ ಹೊರತಾಗಿಯೂ ಹಾಗೆ ಬರೆದಿದ್ದಾರೆ ಎಂದರೆ ಆ ಬರಹದ ಹಿಂದಿನ ಪ್ರಾಮಾಣಿಕತೆ ಮತ್ತು ಕಳಕಳಿಯಾದರೂ ರಾಜಶೇಖರ್‌ಗೆ ಅರ್ಥವಾಯಿತೆ? ಕೋಮುವಾದದ ವಿರುದ್ಧ ರಾಜಶೇಖರ ಅವರು ಮಾತನಾಡುವಾಗ ಬಜರಂಗಿಗಳ ಬಗ್ಗೆ ಅವರಿಗೆ ಬರುವ ಸಿಟ್ಟಿಗಿಂತಲೂ ಹೆಚ್ಚು ಸಿಟ್ಟು ‘ದೇಶಕಾಲ’ವನ್ನು ಟೀಕಿಸುವವರ ಮೇಲೆ ಬರುತ್ತಿದೆ ಎಂದು ಅನಿಸುತ್ತಿದೆ. ‘ದೇಶಕಾಲ’ ಅಷ್ಟು ದೊಡ್ಡದೆ? ‘ದೇಶಕಾಲ’ದ ಪ್ರಶ್ನೆ ಬಂದಾಗ ಸ್ವತಃ ರಾಜಶೇಖರ ಯಾಕೆ ಮೂಲಭೂತವಾದಿಯಾಗುತ್ತಿದ್ದಾರೆ? ಲಕ್ತೆ ಹೈಂ ಔರ್ ಹಾತ್ ಮೆ ತಲ್ವಾರ್ ಭಿ ಸಹಿ.

ಸ್ವತಃ ಭಾಷೆಯ ಬಗ್ಗೆ ಅದನ್ನು ಬಳಸುವ ಬಗ್ಗೆ ನಮಗೆಲ್ಲ ಪಾಠ ಮಾಡುವ ಕೆ.ಫಣಿರಾಜ್ ಮತ್ತು ಜಿ.ರಾಜಶೇಖರ ಅವರು ಮಾತ್ರ ಈ ಮಹತ್ವದ ಚರ್ಚೆಯನ್ನು ಆರಂಭಿಸಿದ ಮಂಜುನಾಥ ಲತಾ-ಚಂದ್ರಶೇಖರ ಐಜೂರ್ ಬರೆದ ಲೇಖನದಲ್ಲಿ ಭಾಷೆಯೇ ಸರಿ ಇಲ್ಲ, ವ್ಯಾಕರಣ ಸರಿ ಇಲ್ಲ ಎಂದು ಆಪಾದಿಸಿ ಅದರಲ್ಲಿ ಇರುವ ಎಲ್ಲ ವಿಮರ್ಶೆಗಳನ್ನು ಮೂಲೆಗುಂಪಾಗಿಸಿ ತಮ್ಮ ಲೇಖನಗಳಲ್ಲಿ ಉಪಯೋಗಿಸಿರುವ ಭಾಷೆಯ ತೀವ್ರತೆ ಮತ್ತು ವ್ಯಂಗ್ಯವನ್ನು ನೋಡಿದರೆ ಅದೇನು ಬಹಳ ಭಿನ್ನವಾಗಿ ಕಾಣಿಸುತ್ತಿಲ್ಲ. ರಾಜಶೇಖರ ಅವರ ಲೇಖನಗಳುದ್ದಕ್ಕೂ ‘ದೇಶಕಾಲ’ದ ಬಗ್ಗೆ ಉಸಿರೆತ್ತಿದರೆ ಹುಷಾರ್, ‘ಅದರ ರಕ್ಷಣೆ ನನ್ನ ಹೊಣೆ’ ಎನ್ನುವ ಭಾವವಿದೆ. ತಮ್ಮ ಲೇಖನಗಳ ಬಗ್ಗೆ ಪ್ರತಿಕ್ರಿಯಿಸುವವರಿಗೆ ಅದೇನು ಮಹಾ ಗೊತ್ತಿದೆ ಎನ್ನುವ ವ್ಯಂಗ್ಯ ಮೂದಲಿಕೆ ಎದ್ದು ಕಾಣುತ್ತದೆ. ರಾಜಶೇಖರರ ಈ ವರಸೆ ಅವರನ್ನು ಹತ್ತಿರದಿಂದ ಬಲ್ಲ ನನಗಂತೂ ಹೊಸತು. ““ದೇಶಕಾಲ’ವನ್ನು ಅದರ ಸಂಪಾದಕರು ಬಿಖಾರಿಸುತ್ತಗೊಳಿಸಿದರೆ ಯಾವ ಪೋಲಾಂಡ ನಾಯಕನೂ ಪ್ರಶ್ನೆ ಮಾಡುವಂತಿಲ್ಲ” ಎಂದು ಅವರು ಬರೆದಿದ್ದಾರೆ. ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ, ಅಧಿನಾಯಕ, ಜನನಾಯಕ ಎಂಬುದೆಲ್ಲ ಗೊತ್ತು. ಈ ಪೋಲಾಂಡ ನಾಯಕ ಎಂಬ ಶಬ್ದ ಹೊಸತು. ಹಾಗಂದ್ರೆ ಏನರ್ಥ? ಪೋಲಂಡಿನ ನಾಯಕ ಎಂತಲೋ? ರಾಜಶೇಖರ ಅವರು ನಮಗೆ ಒದಗಿಸಿರುವ ಈ ಹೊಸ ಶಬ್ದದ ಅರ್ಥ ಏನು ಮತ್ತು ಈ ಶಬ್ದದ ಮೂಲವೆಲ್ಲಿ ಎಂದು ಹೇಳಿದರೆ ಮುಂದೆ ಈ ರೀತಿಯ ವ್ಯಂಗ್ಯ ಮಾಡುವಾಗ ನಮಗೂ ಆ ಶಬ್ದವನ್ನು ಬಳಸಲು ಅನುಕೂಲವಾದೀತು. ರಾಜಶೇಖರ ಅವರು ‘ದೇಶಕಾಲ’ದ ಬಗ್ಗೆ ಮತ್ತು ಈ ಒಟ್ಟು ಚರ್ಚೆಯಲ್ಲಿ ಯಾರು ಏನೇ ಹೇಳಿದರೂ ಎಲ್ಲದರ ಬಗ್ಗೆಯೂ ಸಾಕ್ಷ್ಯಾಧಾರಗಳನ್ನು ಕೇಳುತ್ತಿದ್ದಾರೆ. ಸ್ವತಃ ‘ದೇಶಕಾಲ’ದ ಪಬ್ಲಿಕ್ ಪ್ರಾಸಿಕ್ಯೂಟರ್ ತಾವೆಂಬಂತೆ ವಾದ ಮಂಡಿಸುತ್ತಿರುವ ರಾಜಶೇಖರ ‘ದೇಶಕಾಲ’ದ ಬಗ್ಗೆ ಟೀಕೆ ಮಾಡಿದವರೆಲ್ಲರನ್ನೂ ಅಪರಾಧಿಗಳಂತೆ ಕಾಣುತ್ತಿದ್ದಾರೆ. ಎಲ್ಲದಕ್ಕೂ ಸಾಕ್ಷ್ಯಾಧಾರಗಳನ್ನೇ ಕೊಡಬೇಕಂತೆ! ಅದು ಮೌಖಿಕವಾಗಿದ್ದರೆ ಸಾಕೆ? ಅಥವಾ ಲಿಖಿತವಾಗಿಯೇ ಇರಬೇಕೆ? ಕೋರ್ಟುಗಳೂ ಕೂಡ ಮೌಖಿಕ ಸಾಕ್ಷಿಯನ್ನು ಸ್ವೀಕರಿಸುತ್ತವೆ! ಇನ್ನು ಸಾಕ್ಷ್ಯಾಧಾರಗಳನ್ನು ನೀಡಿ ತೃಪ್ತಿಪಡಿಸಿದರೂ ರಾಜಶೇಖರ ಮತ್ತೆ ಮೇಲ್ಮನವಿಗೆ ಸಿದ್ಧರಾಗುತ್ತಾರೆ. ಯಾರು ಏನೇ ಬರೆದರೂ ರಾಜಶೇಖರ ಅವರ ಬಳಿ ಪ್ರಶ್ನೆಗಳಿವೆ, ಅದೂ ಸಹ ತರಾಟೆಗೆ ತೆಗೆದುಕೊಳ್ಳುವ ರೀತಿಯಲ್ಲಿ!

‘ದೇಶಕಾಲ’ದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡವರು ತಮ್ಮ ಮೇಲೆ ಕಲ್ಲೆಸೆಯುತ್ತಿದ್ದಾರೆ ಎಂದು ರಾಜಶೇಖರ ಅವರು ಅದ್ಯಾಕೆ ಭಾವಿಸುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸದ್ಯ ವಸಂತ ಬನ್ನಾಡಿಯವರು ಕಳೆದ ಸಂಚಿಕೆಯಲ್ಲಿ ಕೆಲವು ಹೊಸ ವಿಷಯಗಳತ್ತ ನಮ್ಮ ಗಮನ ಹರಿಸಿ ಚರ್ಚೆಗೆ ಹೊಸ ಆಯಾಮ ನೀಡಿದ್ದಾರೆ. ಇದು ಈ ಚರ್ಚೆಯ ನಡುವೆ ಸಮಾಧಾನದ ವಿಷಯ.

ಮತ್ತೊಂದು ವಿಚಾರ. ಎಲ್ಲ ಚರ್ಚೆಗಳು, ವಿಮರ್ಶೆಗಳು ಈ ಹಿಂದೆ ನಡೆದ ಯಾವುದೋ ವಾಗ್ವಾದಗಳು, ಯಾವುದೋ ಸಿದ್ಧಾಂತಗಳನ್ನು ಆಧರಿಸಿಯೇ ಇರಬೇಕು, ಅದನ್ನು ಬಿಟ್ಟು ಮಾತನಾಡಿದರೆ ಅದು ವಾಗ್ವಾದವೇ ಅಲ್ಲ (ಫಣಿರಾಜ್ ಪ್ರಕಾರ ವಾಗ್ವಾದ ಭಂಜಕರು) ಎಂದೂ ಇವರು ಹೇಳುತ್ತಾರೆ. ಹಾಗೆ ಎಲ್ಲವನ್ನೂ ಸ್ಥಾಪಿತ ಸಿದ್ಧಾಂತಗಳನ್ನು ಆಧರಿಸಿಯೇ ಮಾಡಬೇಕು ಎನ್ನಲಿಕ್ಕೆ ಇದೇನು ಫಸ್ಟ್ ಪಿ.ಯು.ಸಿಯ ಫಿಸಿಕ್ಸ್ ಪಾಠವೇ? ಕಾಮು, ಕಾಫ್ಕಾ, ರಿಲ್ಕ್ಯ, ದೆರಿದಾ, ಸೈದ್ ಇತ್ಯಾದಿಯವರು ಸಾಹಿತ್ಯದ ನ್ಯೂಟನ್, ಐನ್‌ಸ್ಟೀನ್, ಕಿರ್ಚೋಫ್‌ಗಳೇ? ಪ್ರಸ್ತುತ ಕನ್ನಡದ ಸಂದರ್ಭದಲ್ಲಿ ಸಾಹಿತ್ಯದ ಬಗ್ಗೆ ಮಾತನಾಡಬೇಕು ಅಂದರೆ ಆದಿ ಕವಿ ಪಂಪನಿಂದ ಆಧುನಿಕ ಕವಿ ಡುಂಡಿರಾಜ್ ತನಕ ಎಲ್ಲರನ್ನೂ ಓದಿಕೊಂಡಿರಬೇಕು, ಎಲ್ಲ ವಾಗ್ವಾದಗಳನ್ನೂ ಅರಿತಿರಬೇಕು, ಎಲ್ಲರ ಕಥೆ, ಕಾದಂಬರಿ, ವಿಮರ್ಶೆ ಮತ್ತು ಎಲ್ಲ ಬಗೆಯ ಸಾಹಿತ್ಯ ಓದಿಕೊಂಡು ಅದನ್ನು ಪುಟ ಸಹಿತ ಉಲ್ಲೇಖಿಸಲು ಕೂಡ ನೆನಪಿಟ್ಟುಕೊಳ್ಳಬೇಕು ಎಂದು ಇವರು ಹೇಳುವುದಾದರೆ ಈ ಚರ್ಚೆಯನ್ನು ಭೂಲೋಕದಲ್ಲಿ ನಡೆಸಲು ಸಾಧ್ಯವಿಲ್ಲ ಸ್ವಾಮಿ.

• ಶಶಿಧರ್ ಹೆಮ್ಮಾಡಿ, ಕುಂದಾಪುರ

ಇದು ವಿಮರ್ಶೆಯ ಭಾಷೆ ಅಲ್ಲ

ದ ಸಂಚಿಕೆಯಲ್ಲಿ ಮತ್ತೆ ಬನ್ನಾಡಿ ನನ್ನನ್ನೂ 'ದೇಶಕಾಲ'ವನ್ನೂ ಜೊತೆಗೆ
ಇಂದು, ಹಲವರ ಬಗ್ಗೆ ಮಾಡಿರುವ ಟೀಕೆಗಳಿಗೆ ಉತ್ತರಿಸುವುದಕ್ಕೆ
ಅವರ ಬರಹದಲ್ಲಿರುವ ಒಂದು ಗೊಂದಲದ ಕುರಿತು ಹೇಳಲೇಬೇಕು.
ಲ'ದ ಸ್ವಜಾತಿಪಕ್ಷಪಾತ, ಗುಂಪುಗಾರಿಕೆ ಹಾಗೂ ತಾರತಮ್ಯ ನೀತಿಗಳ
ಳುತ್ತ ಬನ್ನಾಡಿ 'ಸಾಕ್ಷಿ'ಯ ಅಗ್ರೆಸಿವ್ ಸಾಂಸ್ಕೃತಿಕ ರಾಜಕಾರಣವನ್ನೇ
ಮುಂದುವರಿಸುತ್ತಿದೆ ಎಂದು ಅಭಿಪ್ರಾಯಪಡುತ್ತಾರೆ. ಜಾತಿವಾರು
ಣಿಯನ್ನು 'ಸಾಕ್ಷಿ' ಮತ್ತು 'ದೇಶಕಾಲ'ಗಳ ಬಗ್ಗೆ ಕೂಡ ನಡೆಸುವುದಾದರೆ,
ದೂ ಪತ್ರಿಕೆಗಳಲ್ಲೂ ಬ್ರಾಹ್ಮಣರೇ ಜಾಸ್ತಿ ಕಾಣಿಸಿಕೊಂಡಿರಬಹುದು.
ೊತ್ತಿಲ್ಲ, ನಾನು ಆತ ಲೆಕ್ಕ ಮಾಡುವ ಗೋಜಿಗೆ ಹೋಗಿಲ್ಲ. ಆದರೆ
'ದೇಶಕಾಲ' ಎರಡರಲ್ಲೂ ಹಲವು ಭಾರಿ ಕಾಣಿಸಿಕೊಂಡಿರುವ ನನ್ನನ್ನಂತೂ
ವ ಯಾದಿಯಲ್ಲೇ ಸೇರಿಸಬೇಕಾಗುತ್ತದೆ. ಬನ್ನಾಡಿ ಈ ಬಗೆಯ ಜಾತಿವಾರು
ತ್ಯದಲ್ಲಿ ಬ್ರಾಹ್ಮಣ ಮೇಲುಗೈ ಸಾಧಿಸಿದ್ದರ ಬಗ್ಗೆ ಹೇಳುತ್ತಿದ್ದಾರೋ
ಬ್ರಾಹ್ಮಣ ಮೌಲ್ಯಗಳು ಮುನ್ನೆಲೆಗೆ ಬಂದಿವೆ ಎಂದು ಹೇಳುತ್ತಿದ್ದಾರೋ?
ದೇ ಡಾ. ಎಚ್.ಎಸ್.ವಿ. ಬ್ರಾಹ್ಮಣ ಮತ್ತು ಬ್ರಾಹ್ಮಣ್ಯಗಳ ನಡುವೆ
ವ್ಯತ್ಯಾಸಗಳನ್ನು ಇದೇ ಕಾಲಮ್ಮಿನಲ್ಲಿ ಬಸವನ ಉದಾಹರಣೆಯೊಡನೆ
ಸಿದ್ದಾರೆ. ಆದರೆ ಬನ್ನಾಡಿಯವರ ಲೇಖನ ಈ ಎರಡರ ನಡುವೆ
ಇಲ್ಲವೆಂಬಂತೆ, ಒಂದರ ಬದಲು ಇನ್ನೊಂದನ್ನು
ಕೂಲಕ್ಕೆ ತಕ್ಕಂತೆ ಬಳಸಿಕೊಂಡು 'ದೇಶಕಾಲ'ವನ್ನು
ಸ್ಥಾನದಲ್ಲಿ ನಿಲ್ಲಿಸಿದೆ. ಜೊತೆಗೆ ಅದು ಸಮಕಾಲೀನ
ರಿಗೆ, ಸುಧಾರಣೆ, ಪರಿವರ್ತನೆ, ಆಂತರಿಕ
ಮುಗಳ ಸಾಧ್ಯತೆಯೇ ಇಲ್ಲದ, ಎಂದೆಂದಿಗೂ
ದ ಒಂದು ಸ್ಥಿರವೂ ಶಾಶ್ವತವೂ ಆದ ವ್ಯಕ್ತಿತ್ವವನ್ನೂ
ಪಿಸಿಕೊಟ್ಟಿದೆ. ಬಲಪಂಥೀಯ ಪ್ರತಿಗಾಮಿತ್ವವೇ
ಕ್ತಿತ್ವ ದನಿಜ ಸ್ವರೂಪ; ಇದರ ಬಂಡಾಯ
ಲತೆಗಳೇನಿದ್ದರೂ ಬರೇ ಸೋಗಲಾಡಿತನ.
ಮುವರ ಲೇಖನದಲ್ಲಿ ಕಾಣಿಸುವ ಈ ಬಗೆಯ
ರಿಯ ಜೊತೆಗೆ ಅವರ ಈ ತರ್ಕವನ್ನೂ ಸಹ
ಸಮಕಾಲೀನ ರಾಜಕೀಯದಿಂದಲೇ
ಕೊಂಡದ್ದು. ಬನ್ನಾಡಿ 'ಸಾಕ್ಷಿ' 'ದೇಶಕಾಲ'ಗಳ
ದ ಜಾತಿಯ ಮಾತೆತ್ತಿ ಆಡಿಕೊಂಡ ರೀತಿಯಲ್ಲೇ
ಯಾವಾದಿಗಳು ಕಮ್ಯುನಿಸ್ಟ್ ಚಳುವಳಿಯ
ಣ" ನಾಯಕರ ಬಗ್ಗೆಯೂ ಹೇಳುತ್ತಿದ್ದರು.
ಎಸ್. ನಂಬೂದಿರಿಪಾದ್ ಆತ್ಮಕತೆ ಬರೆದು, ತನ್ನ
ಮತ್ತು ಜಾತಿಗಳಿಂದ ತಾನು ಕಳಚಿಕೊಂಡದ್ದನ್ನು
ಸಿದ ಮೇಲೂ ಅವರ ಜಾತಿಯ ಕಾರಣಕ್ಕೆ ಅವರನ್ನು
ವುದು ಮುಂದುವರಿದಿತ್ತು. ಲೋಹಿಯಾವಾದಿಗಳು
ಕ್ಕೆ ಸರಿದ ಮೇಲೆ, ಬನ್ನಾಡಿ ಈಗ ಅವರ ಮಾತಿನ ಎಳೆಯನ್ನು
ಕೊಂಡಿದ್ದಾರೆ. ಅದು ಹಾಗಲ್ಲವಾದರೆ, ಅವರು ನನ್ನ ಪ್ರಾಮಾಣಿಕತೆಯ
ಕಂಡಕ್ಟ್ ಸರ್ಟಿಫಿಕೇಟು ಕೊಡುವ ಅಗತ್ಯವಾದರೂ ಏನಿದೆ?

ಜೂರು-ಲತಾ ಜೋಡಿಯಿಂದ ಹಿಡಿದು ಬನ್ನಾಡಿಯವರೆಗೆ ಹಲವರು
ಲ'ದ ವಿರುದ್ಧ ಮಾಡಿರುವ ಆರೋಪಗಳನ್ನು ನೋಡಿದರೆ, ಅಮಾಯಕರ
ದಾಖಲಾಗುವ ಕ್ರಿಮಿನಲ್ ಕೇಸುಗಳು ನೆನಪಾಗುತ್ತವೆ. ಪೊಲೀಸರು, ಈ ಕೇಸುಗಳನ್ನು ಕ್ರಿಮಿನಲ್ ಕಾಯ್ದೆಯ ಹಲವು ಸೆಕ್ಷನ್ನುಗಳ ಅಡಿಯಲ್ಲಿ–ಒಂದಾದರೂ ಕಚ್ಚಿಕೊಳ್ಳಲಿ ಎಂಬ ಉದ್ದೇಶದಿಂದ–ಬುಕ್ ಮಾಡುತ್ತಾರೆ. 'ದೇಶಕಾಲ'ದ ವಿರುದ್ಧ ಸಲ್ಲಿಸಲಾಗಿರುವ ಆರೋಪ ಪಟ್ಟಿಯಲ್ಲಿ ಮೇಲುಜಾತಿ ವರ್ಗಗಳ ಮರ್ಜಿ ಹಿಡಿಯುವುದು, ನಗರಗಳ ಪ್ರತಿಷ್ಠಿತ ಜನರ ವಾರಾಂತ್ಯದ ತೆವಲು ತೀರಿಸುವುದು, ಐ.ಟಿ., ಎನ್ನಾರೈ ಇತ್ಯಾದಿ ವಿಶೇಷ ಜನಗಳಿಗೆ ಮಣೆ ಹಾಕುವುದು, ಶ್ರೇಷ್ಠತೆಯ ವ್ಯಸನ ಹಿಡಿಸಿಕೊಂಡಿರುವುದು, ಚೆಡ್ಡಿಗಳನ್ನು ಒಳಗೆ ಸೇರಿಸಿಕೊಂಡಿರುವುದು (ಇದು ಬಹುಶಃ ಜಾಮೀನಿಲ್ಲದ ಸೆಕ್ಷನ್)–ಇವುಗಳನ್ನು ಈಗಾಗಲೇ ಕಾಣಿಸಲಾಗಿದೆ. ಇದೀಗ ಬನ್ನಾಡಿ ಗುಂಪುಗಾರಿಕೆಯ ಹೊಸ ಆರೋಪವೊಂದನ್ನು ದಾಖಲಿಸಿದ್ದಾರೆ. ಈ ಆರೋಪಗಳಿಗೆ, ಇದುವರೆಗೂ ಕೊಡಲಾಗುತ್ತಿದ್ದ ಸಾಕ್ಷ್ಯಾಧಾರ 'ದೇಶಕಾಲ ವಿಶೇಷ' ದ 21 ಗುಣಿಸು 2 ರ ಪಟ್ಟಿ. ಇದೀಗ ಬನ್ನಾಡಿಯವರು, ತನ್ನ ಆರೋಪಗಳಿಗೆ ವಿನೂತನ ಸಾಕ್ಷ್ಯವೊಂದನ್ನು ತನ್ನ ಬರಹದ ಮೊದಲಿಗೇ ನಮ್ಮ ಮುಂದೆ ಇಟ್ಟಿದ್ದಾರೆ. 'ದೇಶಕಾಲ'ದ ಬೈಂಡುಗಳ ಹೊರಗೆ ಉಳಿದಿರುವ, ಅಂದರೆ ಸಂಪಾದಕರು ಆಯ್ಕೆ ಮಾಡದ ಬರಹಗಳನ್ನೂ ನಾವು ಪರಿಗಣಿಸಬೇಕಂತೆ! ಅಗೋಚರ ಸಾಕ್ಷ್ಯ! ಬರಗೂರರ ಅಗೋಚರ ಸಂಘಟನೆ ಇದ್ದಂತೆ!





• ಜಿ.ರಾಜಶೇಖರ

ಬನ್ನಾಡಿಯವರ ಬರಹ ಉದ್ದಕ್ಕೂ ಇಂತಹ ಅಗೋಚರ ಸಾಕ್ಷ್ಯಗಳನ್ನೇ ಆಧರಿಸಿದೆ. ಉದಾಹರಣೆಗೆ ಅವರು 'ಸಾಕ್ಷಿ'ಯ ಬಗ್ಗೆ ಬರೆಯುತ್ತ ಅಡಿಗರು "ಕುವೆಂಪು ಕವಿಯಾದರೆ ತಾನು ಕವಿಯೇ ಅಲ್ಲ" ಎಂದು ಹೇಳಿದ್ದನ್ನು ಉಲ್ಲೇಖಿಸಿದ್ದಾರೆ. ಅಡಿಗರ ಈ ಮಾತು ಬನ್ನಾಡಿಯವರಿಗೆ ಜಾತಿ ತಾರತಮ್ಯದ ಹಾಗೆಯೂ, 'ಕುವೆಂಪು ಕೃತಿಗಳ ಜ್ಞಾನಮರೆವಿನಂತೆ'ಯೂ ಕಂಡಿದೆ. ಆದರೆ ಅಡಿಗರು ಕುವೆಂಪು ಬಗ್ಗೆ ತಳೆದ ಧೋರಣೆಯನ್ನೇ ತನಗಿಂತ ಹಿರಿಯರಾದ ಮತ್ತು ತನ್ನ ಓರಗೆಯ ಇತರ ಬ್ರಾಹ್ಮಣ ಕವಿಗಳ ಬಗೆಯೂ ಹೊಂದಿದ್ದರು. "ಪುಷ್ಪಕವಿಯ ಪರಾಕು", "ಹಳೆ ಮನೆಯ ಮಂದಿ", "ಪ್ರಾರ್ಥನೆ" ಮುಂತಾದ ಕವಿತೆಗಳಲ್ಲಿ ನಿರೂಪಿತವಾಗಿರುವ ಅಡಿಗರ ಕಾವ್ಯದೃಷ್ಟಿ, ಕುವೆಂಪು ಮಾತ್ರವಲ್ಲ, ಆ ಕಾಲದ ಇತರ ಕವಿಗಳನ್ನೂ ತಿರಸ್ಕರಿಸುತ್ತದೆ. ಬೇಂದ್ರೆ–ಅಡಿಗರ ಜಗಳದ ಬಗ್ಗೆ ದಂತಕತೆಗಳೇ ಇವೆ. ಈ ಜಗಳ ಮತ್ತು ಓರಗೆಯವರ ಕುರಿತು ತಿರಸ್ಕಾರ ಅಡಿಗರ ಕಾವ್ಯಮೀಮಾಂಸೆ ಮತ್ತು ಜೀವನದೃಷ್ಟಿ, ಎರಡಕ್ಕೂ ಅನಿವಾರ್ಯವಾಗಿದ್ದಿತು. ಆದರೆ ಬನ್ನಾಡಿ ಕುವೆಂಪು ಬಗ್ಗೆ ಅಡಿಗರು ಹೇಳಿದ ಒಂದು ಮಾತನ್ನು ಮಾತ್ರ ಗಟ್ಟಿಯಾಗಿ ಹಿಡಿದುಕೊಂಡು ಆ ಕಾಲದ ಇತರ ವಿದ್ಯಮಾನಗಳನ್ನೆಲ್ಲ ಅಲಕ್ಷಿಸಿದ್ದಾರೆ. ಅಡಿಗರ ಜಾತಿ ಗುಂಪುಗಾರಿಕೆಗೆ ಅವರು 'ಸಾಕ್ಷಿ'ಯಲ್ಲಿ ಅನಂತಮೂರ್ತಿಯವರ 'ಸಂಸ್ಕಾರ'ದ ಬಗ್ಗೆ ಹಲವಾರು ಲೇಖನಗಳನ್ನು ಪ್ರಕಟಿಸಿ, ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಗ್ಗೆ ಕೇವಲ ಒಂದು ಲೇಖನ ಮಾತ್ರ ಹಾಕಿದ್ದನ್ನು ಉದಾಹರಿಸಿದ್ದಾರೆ. ಕಾಗದದ ಪುಟಗಳ ಸಂಖ್ಯೆ ಮತ್ತು ತೂಕ ರದ್ದಿ ವ್ಯಾಪಾರಿಗಳಿಗೆ ಮಾತ್ರ ಮುಖ್ಯವಾಗಿರುವಂತಹದ್ದು ಎಂದು ನಾನು ತಿಳಿದಿದ್ದೆ. ಆದರೆ ಬನ್ನಾಡಿಯವರ ಪ್ರಕಾರ ಲೇಖಕರ ವಿಮರ್ಶಕರ ಜಾತಿವಾರು ಪ್ರಾತಿನಿಧ್ಯದಲ್ಲಿ ಅವರಿಗೆ ತಲಾ ಮೀಸಲಾಗಿರುವ ಪುಟಗಳ ಸಂಖ್ಯೆಯೂ ಪಾತ್ರ ವಹಿಸುತ್ತದೆ. ಬನ್ನಾಡಿಯವರ ವಾದವನ್ನು ಒಪ್ಪಿಕೊಂಡರೂ ಅಡಿಗರು 'ಸಾಕ್ಷಿ'ಯಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಿಂತ 'ಸಂಸ್ಕಾರ'ಕ್ಕೆ ಜಾಸ್ತಿ ಪುಟ ಒದಗಿಸಿದ್ದಕ್ಕೆ ಬೇರೆ ಕಾರಣಗಳೂ ಇರಬಹುದಲ್ಲವೆ? 'ಸಂಸ್ಕಾರ' ಪ್ರಕಟವಾದಾಗ ಉಂಟಾದ ಕೋಲಾಹಲ ಒಂದೋ ಬನ್ನಾಡಿಯವರಿಗೆ ಗೊತ್ತಿಲ್ಲ; ಅಥವಾ ಅದು ಅವರ 'ಜಾಣ ಮರೆವು'. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ವಸ್ತುವಿನ ಬಗ್ಗೆ ಯಾವ ವಿವಾದವೂ ಇರಲಿಲ್ಲ, ಅದರ ಸಾಹಿತ್ಯಕ ಶ್ರೇಷ್ಠತೆಯಂತೂ ಪ್ರಶ್ನಾತೀತವಾಗಿತ್ತು. 'ಸಾಕ್ಷಿ'ಯಲ್ಲಿ ಆ ಕಾದಂಬರಿ ಕುರಿತು ಪ್ರಕಟವಾದ ತನ್ನ ಲೇಖನದಲ್ಲಿ ಎಂ.ಜಿ. ಕೃಷ್ಣಮೂರ್ತಿ, ಕಾದಂಬರಿಯನ್ನು ಓದುವ ಮತ್ತು ಅರ್ಥೈಸುವ ಹೊಸ ಬಗೆಗಳನ್ನು ನಿರೂಪಿಸಿದರು. ಕುವೆಂಪು ಅವರ ವಂದಿಮಾಗಧ ಗಣಕ್ಕಿಂತ ತುಂಬ ಭಿನ್ನವಾದ, ಹೆಚ್ಚು ಅರ್ಥಪೂರ್ಣವಾದ ಕುವೆಂಪು ಕೃತಿಗಳ ಅಧ್ಯಯನದ ಸಾಧ್ಯತೆಗಳನ್ನು ಎಂ.ಜಿ. ಕೃಷ್ಣಮೂರ್ತಿ ತಮ್ಮ ಆ ಲೇಖನದಲ್ಲಿ ತೋರಿಸಿಕೊಟ್ಟಿದ್ದರು. ವಚನಕಾರರು, ಕಾರಂತರ ಕಾದಂಬರಿಗಳು ಮತ್ತು ಲಂಕೇಶರ 'ಬಿರುಕು' ಬಗ್ಗೆ ಕೂಡ ಎಂ.ಜಿ. ಕೃಷ್ಣಮೂರ್ತಿ ಈ ಬಗೆಯ ಮರು ಓದು, ಮರು ಅರ್ಥೈಸುವಿಕೆಗಳ ಮಾರ್ಗದರ್ಶಿ ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಆ ಕಾಲದಲ್ಲಿ ಮರಣ ಹೊಂದಿದ ದಿ. ಎಂ.ಜಿ. ಕೃಷ್ಣಮೂರ್ತಿ ಜಾತಿಯಲ್ಲಿ ಬ್ರಾಹ್ಮಣ ಹಾಗೂ ವೃತ್ತಿಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ, ಅದೂ ಎಲ್ಲಿ? ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯವೊಂದರಲ್ಲಿ! ಐಜೂರು–ಲತಾ, ಬನ್ನಾಡಿ ಇತರರು ತಮ್ಮ ಜಾತಿಯ ಶ್ರೇಣಿಯಲ್ಲಿ ಕೃಷ್ಣಮೂರ್ತಿಯವರನ್ನು ಎಲ್ಲಿ ಇರಿಸುತ್ತಾರೆ? 'ಸಾಕ್ಷಿ'ಯ ಸಂಪಾದಕರಾಗಿ ಅಡಿಗರು ನಡೆಸಿದ ಜಾತಿ ರಾಜಕೀಯದಲ್ಲಿ ಕುವೆಂಪು ಮತ್ತು ತೇಜಸ್ವಿ ಹುತಾತ್ಮರು ಎಂದು ಚಿತ್ರಿಸಲು ಬನ್ನಾಡಿ ಬಹಳ ಶ್ರಮ ಪಟ್ಟಿದ್ದಾರೆ. ಅಡಿಗರು 'ಸಾಕ್ಷಿ'ಯನ್ನು ಸಂಪಾದಿಸುತ್ತಿದ್ದ ದಿನಗಳಲ್ಲಿ ಅವರಿಗಿದ್ದ ಸಾಮಾಜಿಕ ಸ್ಥಾನಮಾನ ಮತ್ತು ಕುವೆಂಪು ಅವರ ಸ್ಥಾನಮಾನಗಳನ್ನು ನೆನಪು ಮಾಡಿಕೊಂಡರೆ ಬನ್ನಾಡಿಯವರ ಮಾತು ಎಷ್ಟು ಅಸಂಬದ್ಧವಾಗಿದೆ ಎನ್ನುವುದು ಹೊಳೆಯುತ್ತದೆ. ಕುವೆಂಪು ಅವರ ಕಾದಂಬರಿಗಳ ಬಗ್ಗೆ ವಿಮರ್ಶಾ ವಲಯಗಳಲ್ಲಿ ಕಂಡುಬಂದ ಸ್ವಾಗತ ಮನ್ನಣೆಗಳು, ಅವರ ಕಾವ್ಯಕ್ಕೆ ದೊರೆಯಲಿಲ್ಲ ಎನ್ನುವುದು ನಿಜ. ಕುವೆಂಪು ಅವರ ಆಧ್ಯಾತ್ಮಿಕತೆ, ಕಾವ್ಯದಲ್ಲಿ ಸಾಕಾರಗೊಳ್ಳದೆ ಹಸಿಹಸಿಯಾಗಿ ಹೇಳಿಕೆಗಳ ರೂಪದಲ್ಲಿ ಅಭಿವ್ಯಕ್ತಗೊಂಡಿರುವುದು ಮತ್ತು ಈ ದೃಷ್ಟಿಯಿಂದ ಅವರ ಗದ್ಯವೇ, ಅವರ ಕಾವ್ಯಕ್ಕಿಂತ ಹೆಚ್ಚು "ಭಾಷೆಯಲ್ಲಿ ಮೈ ತಳೆದ ಜೀವನಾನುಭವ"ವಾಗಿರುವುದು, ವಿಮರ್ಶಕರ ಈ ತಾರತಮ್ಯ ಧೋರಣೆಗೆ ಕಾರಣವಾಗಿದೆ. ಆದರೆ ಬನ್ನಾಡಿಯವರಿಗೆ ಇದು ಜಾತಿ ಪೂರ್ವಗ್ರಹದ ಹಾಗೆ ಕಾಣುತ್ತದೆ! ಸಾಕ್ಷಿಯ "ಅಗ್ರೆಸಿವ್ ಸಾಂಸ್ಕೃತಿಕ ರಾಜಕಾರಣದ" ಸಂತ್ರಸ್ತರಲ್ಲಿ ಬನ್ನಾಡಿ ಕುವೆಂಪು ಜೊತೆ ತೇಜಸ್ವಿಯವರನ್ನೂ ಸೇರಿಸಿದ್ದಾರೆ. ತೇಜಸ್ವಿ ತೀರಿಕೊಂಡಾಗ 'ದೇಶಕಾಲ' ಅವರ ಕುರಿತು ಒಂದು ಸಾಲೂ ಪ್ರಕಟಿಸಲಿಲ್ಲ ಎಂದು ಬನ್ನಾಡಿ ಮೊದಲ ಲೇಖನದಲ್ಲಿ ಹೇಳಿದರೆ, ಈಗ, 'ಸಾಕ್ಷಿ' ತೇಜಸ್ವಿಯವರ "ಅಬಚೂರಿನ ಪೋಸ್ಟಾಫೀಸು" ಸಂಕಲನದ ಬಗ್ಗೆ ಒಂದು ಲೇಖನವನ್ನೂ ಪ್ರಕಟಿಸಿರಲಿಲ್ಲ ಎಂದು ಅಪಾದಿಸಿದ್ದಾರೆ. 'ಸಾಕ್ಷಿ' ಮತ್ತು 'ದೇಶ ಕಾಲ'ದ ಜಾತಿ ರಾಜಕೀಯಕ್ಕೆ ಇವು ಬನ್ನಾಡಿ ಒದಗಿಸುವ ಉದಾಹರಣೆಗಳು! ಆದರೆ ತೇಜಸ್ವಿಯವರ ಕುರಿತು ಒಂದು ಪೂರ್ಣ ಪ್ರಮಾಣದ ಅಧ್ಯಯನವನ್ನೇ ಪ್ರಕಟಿಸಿರುವ ಟಿ.ಪಿ. ಅಶೋಕ ಹಾಗೂ ತೇಜಸ್ವಿ ಬದುಕಿದ್ದಾಗಲೂ, ಆನಂತರವೂ ಅವರ ಕೃತಿಗಳ ಕುರಿತು, ರಾಜ್ಯದ ಹಲವೆಡೆ ಅಭ್ಯಾಸ ಶಿಬಿರಗಳನ್ನು ನಡೆಸಿದ ನೀನಾಸಂಗಳನ್ನು ಬನ್ನಾಡಿ ಗಮನಿಸುವುದೇ ಇಲ್ಲ. ತನ್ನ ವಾದಕ್ಕೆ ಅಪವಾದವಾಗಿ ನಿಲ್ಲುವ ಯಾವ ಸಂಗತಿಯೂ ಕಾಣಿಸದ ಜಾಣ ಕುರುಡು ಅವರದ್ದು!

ಬೇಂದ್ರೆ ಮತ್ತು ಅಡಿಗ ಇಬ್ಬರೇ ಕನ್ನಡದ ಶ್ರೇಷ್ಠ ಕವಿಗಳು ಎಂದು 1959 ರಲ್ಲಿ ತಾನು ಆಡಿದ ಮಾತು ತಪ್ಪು ಎಂದು ಅನಂತಮೂರ್ತಿ 1982ರಲ್ಲಿ ಒಪ್ಪಿಕೊಂಡರಂತೆ. ಇದನ್ನು ಹೇಳುತ್ತ ಬನ್ನಾಡಿ "ಈ ನಡುವಿನ 23 ವರ್ಷಗಳಲ್ಲಿ ಜನಮನದಲ್ಲಿ ಉಂಟಾದ ಗೊಂದಲಕ್ಕೆ ಯಾರು ಹೊಣೆ?" ಎಂದು ಕೇಳುತ್ತಾರೆ. ಅವರ ಮಾತಿನ ಜಲಕ್ ನನ್ನನ್ನು ಬೆಚ್ಚಿ ಬೀಳಿಸುತ್ತದೆ. ವಿಮರ್ಶೆಯ ಯಾವ ಮಾತು ಕೂಡಾ "ಅಳಿಸಲಾಗದ ಲಿಪಿಯಲ್ಲ"; ಧರ್ಮಗುರುಗಳ ಫತ್ವಾ ಅಲ್ಲ; ಸರ್ವಾಧಿಕಾರಿಯ ಕಟ್ಟಪ್ಪಣೆಯೂ ಅಲ್ಲ. "ಜನಮನ" ಮತ್ತು "ಯಾರು ಹೊಣೆ?"–ಇವು ಸಾಹಿತ್ಯ ವಿಮರ್ಶೆಯ ಮಾತುಗಳಲ್ಲ; ರಾಜಕೀಯದ ಈ ನುಡಿಗಟ್ಟುಗಳು ಶಿಕ್ಷೆಯ ಸೂಚನೆಯನ್ನೂ ತಮ್ಮ ಒಡಲಲ್ಲಿ ಇರಿಸಿಕೊಂಡಿವೆ. ಜನಮನದಲ್ಲಿ ಗೊಂದಲ ಉಂಟುಮಾಡಿದ ಲೇಖಕರನ್ನು ಅಧಿಕಾರ ವ್ಯವಸ್ಥೆ ಶಿಕ್ಷೆಗೆ ಒಳಪಡಿಸಿದ ಉದಾಹರಣೆಗಳು ಹೇರಳವಾಗಿವೆ. ಬನ್ನಾಡಿ ತಾವು ಬಳಸುವ ಭಾಷೆಯ ಬಗ್ಗೆ ಹುಷಾರಾಗಿರಬೇಕು! ಅಡಿಗರು ಎಲ್ಲ ಬಗೆಯ ಅಧಿಕಾರದ ಸಂರಚನೆಗಳನ್ನೂ ವಿರೋಧಿಸಿದ್ದರು. ಬನ್ನಾಡಿ ಹೇಳುವ 'ಜನಮನ' ಎಂದರೆ ತಲೆ ಲೆಕ್ಕದಲ್ಲಿ ಎಷ್ಟು? ಅಡಿಗರು ಜನರಿಗೋಸ್ಕರ ಬರೆಯಲಿಲ್ಲ; ಓದುಗರಿಗೋಸ್ಕರ ಕೂಡ ಬರೆಯಲಿಲ್ಲ. "ಯಾವ ಕವಿಯೂ ಓದುಗರಿಗಾಗಿ ಬರೆಯುವುದಿಲ್ಲ; ಯಾವ ಸಂಗೀತಗಾರನೂ ಕೇಳುಗರಿಗಾಗಿ ಹಾಡುವುದಿಲ್ಲ, ಯಾವ ಚಿತ್ರಕಾರನೂ ನೋಡುಗರಿಗಾಗಿ ಚಿತ್ರ ಬರೆಯುವುದಿಲ್ಲ" ಎಂದು ವಾಲ್ಟರ್ ಬೆಂಜಮಿನ್ ಹೇಳಿದ. ವಿಮರ್ಶೆಯಲ್ಲಿ "ಜನಪರ" ಮತ್ತು ಜನಮನದ ಮಾತು ಎಳೆದು ತರುವವರು ಬೆಂಜಮಿನ್ ಹೇಳಿಕೆಯ ಅರ್ಥವೇನು ಎಂದು ಯೋಚಿಸಬೇಕು; ಹಾಗೆ ಯೋಚಿಸುವಾಗ, ಬೆಂಜಮಿನ್ ನಾಝಿ ಜರ್ಮನಿಯಲ್ಲಿ ಜೀವಿಸಿದ್ದ ಹಾಗೂ ನಾಝಿಗಳ ಹಿಂಸೆ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡ ಉದ್ದಾಮ ಮಾರ್ಕ್ಸ್‌ವಾದೀ ವಿಮರ್ಶಕ ಎಂಬುದನ್ನೂ ಸಹ ನೆನಪು ಮಾಡಿಕೊಳ್ಳಬೇಕು. ●

ವಿಶೇಷ ಸಂಚಿಕೆಯವರಿಗೆ

ವು ಗೊರವರು
ಡುಚಿಗಳು
ಮ್ಮ ಮನೆಯ ಬಿದರು ಗೊಂಬೆಗಳು

ಡಿಯ ನಿಮ್ಮ ಮೈವಾಸನೆಯನ್ನು
ವು ಕುಡಿಯುವಂತಿಲ್ಲ
ಮ್ಮ ಛಂದಸ್ಸಿನ ಪಾತಾಳವನ್ನೆಲ್ಲ
ದು ಬಗೆದು
ಮ್ಮ ಲಯಗಳ
ದು ಒಡೆದು
ದಿಯಲ್ಲಿ ಬೆಂಡು ಬತ್ತಾಸು ತಿಂದು
ತ್ರೆ ಮಾಡುವವರು

ಮಾನಗಳ ಶಾಪಗ್ರಸ್ಥರು
ಗಲೂ ನಿಮ್ಮ ಕಣ್ಣುರಿಯ ತಾಪಗ್ರಸ್ಥರು
ವು ಮನೆಯೊಳಗೆ ಸೇರಿಸುತ್ತೀರಿ
ಸ್ಸಿನಿಂದ ಹೊರದೂಡುತ್ತೀರಿ

ಮ್ಮಲ್ಲಿ ಕೆಲವು ಬಾಲಗೊಂಚಿಗಳಿವೆ
ಮ್ಮನ್ನು ಒಡಿದು ತಿರುವಿ ಮುರಿದು
ಓಡಿಸುತ್ತೀರಿ
ಅವು ಓಡುತ್ತವೆ ನಿಮ್ಮ ತಾಳಕ್ಕನುಗುಣವಾಗಿ
ನಿಮ್ಮ ವಾದ್ಯಗಳ ನಾದವಾಗಿ

ನಿಸರ್ಗದ ಅಪಾರ ವೈವಿಧ್ಯತೆಯಲ್ಲಿ
ನಿಮ್ಮ ಏಕತಾನದ ತಂಬೂರಿ ಮೀಟುತ್ತಲೇ ಇದೆ
ವಿಶೇಷ ಸಂಚಿಕೆಯಾಗಿ ಚಾಟುತ್ತಲೇ ಇದೆ

ಹೊರಗೆ
ನಿಮಗೊಂದು ಜಾತಿ ಇಲ್ಲ
ನಿಮಗೊಂದು ಧರ್ಮ ಇಲ್ಲ
ನೀವು ಉದಾರ ಚರಿತರು
ಒಳಗೇ ಮುಳ್ಳು ಬೇಲಿಯ ಸರದಾರರು
ಕಪ್ಪು ಪರದೆಯ ಮಾಲೀಕರು

ನಾವು ಗೊರವರು
ದುಂಡುಚಿಗಳು
ನಿಮ್ಮನ್ನು ಹೀಗೆಲ್ಲ ಹೀಯಾಳಿಸುವಂತಿಲ್ಲ
ಎದುರು ಮಾತಾಡುವಂತಿಲ್ಲ
ಮಾಧ್ಯಮದ ಹಿಡಿತದಲ್ಲಿ ನಮ್ಮನ್ನು ಗಲ್ಲಿಗೇರಿಸುತ್ತೀರಿ
ಏರಿಸಿರಿ
ನಿಮ್ಮದೇ ಹಗ್ಗ
ನಿಮ್ಮದೇ ಕುಣಿಕೆ
ನಮ್ಮ ಪ್ರಾಣದ ಹರಕೆ

• ಚಂದ್ರಶೇಖರ ತಾಳ್ಯ

ಸಂತ್ರಸ್ತರೂ... ಪರಿಹಾರವೆಂಬ ಬಂಗಾರದ ಜಿಂಕೆಯೂ

ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಆದ ಅನಾಹುತಕ್ಕೆ ಈಗ ಒಂದು ವರ್ಷ ತುಂಬುತ್ತಿದೆ. ಈ ಘಟನೆಗೆ ಕರ್ನಾಟಕದ ಎಲ್ಲ ಭಾಗಗಳ ಜನತೆ ಸ್ಪಂದಿಸಿದ ರೀತಿ ಮಾನವೀಯವಾಗಿತ್ತು, ಸರ್ಕಾರಗಳು, ಸ್ವಯಂಸೇವಾ ಸಂಸ್ಥೆಗಳು, ದಾನಿಗಳು- ಹೀಗೆ ಹತ್ತು ಹಲವರು ಮನೆ ಮತ್ತು ಬದುಕು ಕಳೆದುಕೊಂಡ ಜನರಿಗೆ ಆಸರೆಯಾಗುವ ಭರವಸೆ ನೀಡಿದ್ದು, ಪ್ರಮಾಣ ಮಾಡಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಅಂದಿನಿಂದಲೂ ಅತಿವೃಷ್ಟಿಯಿಂದ ಬಸವಳಿದ ಉತ್ತರ ಕರ್ನಾಟಕದ ಹಳ್ಳಿಗಳಿಗೆ ಹೋಗಬೇಕು ಎಂಬ ತುಡಿತ ಆಗೊಮ್ಮೆ ಈಗೊಮ್ಮೆ ಪುಟದು, ಅಲ್ಲಲ್ಲೇ ಬತ್ತಿಹೋಗುತ್ತಿತ್ತು; ಹೀಗೆ ಉತ್ಸಾಹ ಬತ್ತಿದ ಬಳಿಕ ಅಪರಾಧೀಭಾವ ಮೇಲೆದ್ದು ನನ್ನನ್ನು ಚುಚ್ಚುತ್ತಿತ್ತು. ಜುಲೈ ಮೊದಲ ವಾರದಲ್ಲಿ ಕೊನೆಗೂ ಗದಗ್ ಜಿಲ್ಲೆ ರೋಣ ತಾಲೂಕಿನ ಅಮರಗೋಳ, ಹೊಳೆಆಲೂರು, ಹೊಳೆ ಮಣ್ಣೂರ, ಭೋಪಳಾಪುರ, ಬೂದಿಹಾಳ ಮುಂತಾದ ಕೆಲವು ಆಸುಪಾಸಿನ ಹಳ್ಳಿಗಳಿಗೆ ಹೋಗಿಬಂದೆ. ಇದು ಸಾಧ್ಯವಾದದ್ದು ಸ್ನೇಹಿತರಾದ ಶ್ರೀ ಮಕಾನ್‌ದಾರ್ ಮತ್ತು ಶ್ರೀ ಬಸವರಾಜ ಸೂಳೀಭಾವಿ ಅವರಿಂದ. ಅವರಿಗೆ ಸಾಥ್ ನೀಡಿದವರು ಶ್ರೀ ಜಹಾಂಗೀರ್.

'ಹಾಳೂರು' ಪದವನ್ನು ಬೇಕಾದಷ್ಟು ಬಾರಿ ಕೇಳಿದ್ದೆ; ಬಳಸಿಯೂ ಇದ್ದೆ. ಆದರೆ ಹಾಳೂರಿನ ಸಮಗ್ರ ಸ್ವರೂಪ ಮಾತ್ರ ಈ ಹಳ್ಳಿಗಳನ್ನು ಪ್ರತ್ಯಕ್ಷ ಕಾಣುವವರೆಗೆ ನನ್ನ ಗ್ರಹಿಕೆಗೆ ಬಂದಿರಲಿಲ್ಲ. ಮನೆಗಳು ಸಂಪೂರ್ಣ ಕುಸಿದವರಿಗೆ ಅಕ್ಕಪಕ್ಕದಲ್ಲಿ ತಾತ್ಕಾಲಿಕ ಶೆಡ್ ಕಟ್ಟಲಾಗಿತ್ತು. ತಮ್ಮದೇ ಆದ ಮನೆಯಲ್ಲಿ ತಕ್ಕಮಟ್ಟಿಗೆ ಆರಾಮವಾಗಿ ನೆಮ್ಮದಿಯಿಂದ ಇದ್ದ ಆ ರೈತಕುಟುಂಬಗಳು ಈಗ ಬೆಳಗಾದರೆ ಅವಯವಗಳೆಲ್ಲ ಮುರುಟಿಕೊಂಡು ಕುಸಿದುಬಿದ್ದ ಮನೆಯನ್ನು ಅದರೊಳಗೆ ರಾಶಿಬಿದ್ದ ಮಣ್ಣು, ಮಳೆನೀರು ಸುರಿದು ಉಂಟಾದ ಕೆಸರನ್ನು ನೋಡಬೇಕಾಗಿದೆ. ಬಿದ್ದ ಮನೆಗಳೋ ಜೀವತ್ಯಾಗ ಮಾಡಿದ ಯೋಧರಂತೆ ಅನಾಥವಾಗಿವೆ. ಇವನ್ನು ದಿನವೂ ನೋಡನೋಡುತ್ತ ಎಂದೂ ಮರೆಯಲು ಸಾಧ್ಯವಿಲ್ಲದ ಆದರೆ ಮರೆಯಲೇಬೇಕಾದ ಕಹಿಸತ್ಯವನ್ನು ಇವು ರೈತರಿಗೆ ಚುಚ್ಚಿ ಚುಚ್ಚಿ ನೋಯಿಸುವಂತೆ ನಿಂತಿವೆ. ಇನ್ನು ಬೀದಿಗಳೋ, ಮೊದಲೇ ಒಳಚರಂಡಿಯ ಕಲ್ಪನೆ ಇಲ್ಲದವು. ನಡುರಸ್ತೆಯಲ್ಲೇ ಸರ್ವ ಕಸ-ಕೊಚ್ಚೆ-ಕೊಳೆಗಳು ರಾರಾಜಿಸುತ್ತಿವೆ. ಸ್ವಚ್ಛತೆಯ ಬಗ್ಗೆ ಮಾತನಾಡುವ ಮೊದಲು ಅಲ್ಲಿಯವರ ಅನಿವಾರ್ಯತೆಯನ್ನು ಅರ್ಥಮಾಡಿಕೊಂಡಾಗ ನಮ್ಮ ಬಾಯಿ ಮೂಕವಾಗುತ್ತದೆ.

ಅಮರಗೋಳದಲ್ಲಿ ಸಂತ್ರಸ್ತರಿಗೆಂದು ರಸ್ತೆಬದಿಯಲ್ಲಿ ಕಟ್ಟಿದ ತಾತ್ಕಾಲಿಕ ಶೆಡ್‌ಗಳನ್ನು ನೋಡಲೆಂದು ಹೋದೆವು. ನಮ್ಮ ವಾಹನ ನೋಡಿ, ಹಲವು ಪ್ರಶ್ನಾರ್ಥಕ, ಉದಾಸೀನ ಮತ್ತು ನಿರೀಕ್ಷಾ ನೋಟಗಳು ಎದುರಾದವು. ಮಾತಿಗೆ ತೊಡಗಿದಾಗ, ಅವರು ಬಂದು ಈಗಾಗಲೇ ಮೂರು ವರ್ಷಗಳೇ ಉರುಳಿವೆ ಎಂದು ತಿಳಿಯಿತು. 2007ರಲ್ಲಿ ಬಂದ ನೆರೆಯಲ್ಲಿ ಅರೆ-ಬರೆ ಕುಸಿದ ಮನೆಯವರು ಮತ್ತೆ ಮರಳಿ ಊರಿಗೆ ತೆರಳಿದ್ದರೆ, ವಾಸಯೋಗ್ಯವಿಲ್ಲದ ಮನೆಯವರು ಅಂದಿನಿಂದ ಈ ಶೆಡ್ಡಿನಲ್ಲೇ ಉಳಿದಿದ್ದಾರೆ. ದಿನದ ದುಡಿಮೆಗೆ ಊರ ಒಳಗೆಹೋಗಲು ಮೈಲುಗಟ್ಟಲೆ ಅವರು ನಡೆಯಬೇಕಾಗಿದೆ. 'ಇದುವರೆಗೆ ಯಾವ ಪ್ರಗತಿಯೂ ಇಲ್ಲವೆ' ಎಂದಾಗ, 'ಮೊದ್ಲು ಬಂದಾಗ ಬರೀ ನೆಲ ಇತ್ರಿ. ಮಕ್ಕೋಳಾಕ ಆಕ್ಕಿಲ್ಲಿಲ್ರೀ. ನಾವ ಉಬ್ಬೆಉಬ್ಬೇ ಹರಳೆಲ್ಲ ತಗ್‌ದು, ಸಾಫ್ ಮಾಡಿದ್ವಿ. ಮತ್ತೇನ್ ಮಾಡೂದ್ರೀ? ಅಂಥಾದ್ರಾಗ ಮಕ್ಕೊಂಡ್ರ, ಎಂಥಾ ಚಾಪಿ ಆದ್ರೂ ಥಂಡಿ ಏರೂದರೀ. ಬಾಣ್ತಿ, ಎಳೆಮಕ್ಕು ಎಲ್ರೂ ಅದ್ರಾಗ ಇದ್ವಿ ನೋಡ್ರಿ. . . ಬ್ಯಾರೆ ಏನ್ ಮಾಡಬೇಕ್ ಹೇಳ್ರ್ಯಲ್ಲ' ಎಂದಾಗ ಉತ್ತರವಿಲ್ಲದ ನಾವು, 'ಮನೆ ನೋಡ್‌ಬಹುದಾ?' ಎಂದು ಮಾತು ಬದಲಾಯಿಸಿದ್ದಾಯ್ತು. 10x10ಅಡಿ ಚಚ್ಚೌಕದ ತಗಡಿನ ಶೀಟ್‌ನಿಂದ ಆವೃತ್ತವಾದ ಜಾಗವೇ ಅವರ ಮನೆ! ಅದರಲ್ಲೇ ತೊಟ್ಟಿಲಿದೆ, ದೇವರ ಗೂಡಿದೆ, ಬಟ್ಟೆಯ ಪೆಟ್ಟಿಗೆ, ಆಕಡಿಕಾಳು, ಜೋಳ, ಅಕ್ಕಿಯ ಡಬ್ಬಗಳಿವೆ. ಅವುಗಳ ಜೊತೆಗೇ ನಾಲ್ಕರಿಂದ ಆರು ಜನ ವಾಸಮಾಡಬೇಕಾದ ಸ್ಥಿತಿ ಅವರದು. 2009ರಲ್ಲಿ ಬರಿ ನೆಲಕ್ಕೆ ಪಾಟೀಕಲ್ಲು ಹಾಸಿದ್ದೊಂದೇ ಆದ ಬದಲಾವಣೆ.

ಒಂದು, ಎರಡು, ಮೂರು.... ಒಂದೊಂದೇ ಮನೆ, ಊರುಗಳನ್ನು ಒಳಹೊಕ್ಕು ಹೊರಬರುತ್ತಿದ್ದಂತೆ, ಇಂಥ ಎಲ್ಲ ಜನರ ಸಂಕಷ್ಟಕ್ಕೆ ಸ್ಪಂದಿಸಬೇಕಾದ ಆಡಳಿತಶಾಹಿಯ ದಿವ್ಯ ನಿರ್ಲಕ್ಷ್ಯ, ಟೀಕೆಗೆ ಘೇಂಡಾಮೃಗ ಚರ್ಮಾಂಬರಿಯಾದ ಅಧಿಕಾರಿಗಳ ಮತ್ತು ಸರಕಾರದ ಕುರಿತು ನಾಭಿಮೂಲದಿಂದ ಸಿಟ್ಟು, ಆಕ್ರೋಶ ಎಂಥವರಿಗೂ ಹುಟ್ಟಿಬಿಡುತ್ತದೆ. ಪುನರ್‌ವಸತಿಗಾಗಿ ನಿಗದಿಯಾದ ಸ್ಥಳ, ಅಲ್ಲಿ ನಡೆದಿರುವ ಮನೆಗಳ ಕಟ್ಟೋಣದ ಸ್ಥಿತಿಯನ್ನು ಕುತೂಹಲದಿಂದ ನೋಡಹೊರಟೆವು. ವಿಪತ್ತು ಜರುಗಿ ವರ್ಷವೇ ಆಗುತ್ತಿದ್ದರೂ ಕೆಲವೆಡೆ ನೂರಾರು ಮನೆಗಳಿಗೆ ಈಗ ಅಸ್ತಿಭಾರ ಹಾಕಲಾಗುತ್ತಿದೆ! ಇನ್ನು ಕೆಲವಕ್ಕೆ ತಳಪಾಯ ಈಗತಾನೆ ಹಾಕಿ ಮುಗಿದಿದೆ. ಕೆಲವು ಮನೆಗಳು ಲಿಂಟಲ್ ಲೆವೆಲ್‌ವರೆಗೆ ಎದ್ದುನಿಂತಿವೆ. ಹೇಗೆ ಇವೆ ನೋಡೋಣವೆಂದು ಸನಿಹಕ್ಕೆ ಹೋದೆವು. ಅವುಗಳನ್ನು ನೋಡಿ... ಆ ಮನೆಗಳನ್ನು ಕಟ್ಟುತ್ತಿರುವ ಕಂಟ್ರ್ಯಾಕ್ಟರುಗಳಿಗಾಗಲೀ, ನೀಲ ನಕ್ಷೆ ಸಿದ್ಧಪ... ಇಂಜಿನಿಯರುಗಳಿಗಾಗಲೀ, ಅಥವಾ ಇದನ್ನು ಪ್ರಾಯೋಜಿಸುತ್ತಿರುವ ... ಗಾಗಲೀ ಒಕ್ಕಲುತನದ ಮನೆಯವರ ಅವಶ್ಯಕತೆಗಳ ಇನಿತಾದರೂ ಅರಿವಿದೆ... ಎಂಬ ಪ್ರಶ್ನೆ ಮುನ್ನೆಲೆಗೆ ಬಂದಿತು. ಒಟ್ಟು 30x50ಅಡಿ ವಿಸ್ತಾರದ ಸೈ... 8x 10ಅಡಿಯ ಮೂರು ಕೋಣೆಗಳು. ಒಂದು ಮಲಗುವ ಕೊ... ಇನ್ನೊಂದು ಹಾಲ್. ಇನ್ನೊಂದು ಅಷ್ಟೇ ವಿಸ್ತಾರದೊಳಗೆ ಅಡುಗೆ... ಮತ್ತು ಬಚ್ಚಲು! ಮುಂದಿನ ಬಾಗಿಲಿಗೆ ಸರಿ ಎದುರಾಗಿ ಹಿಂದಿನ ಬಾ... ಇಡಲಾಗಿದೆ. ಅಕ್ಕಪಕ್ಕ ಎರಡೂ ಕೋಣೆಗಳ ಬಾಗಿಲು ಮತ್ತು ಕಿಟಕಿಂ... ಹೊಂದಿದ ಹಾಲ್‌ಗೆ ಖಾಸಗಿತನದ ಸಣ್ಣ ಮೂಲೆಯೂ ಇಲ್ಲವಾಗಿದೆ. ಇ... ಸಾವಿರ ಮನೆಗಳನ್ನು ಒಂದು ಸ್ವಯಂಸೇವಾ ಸಂಘ ಕಟ್ಟುತ್ತಿದೆ.


ಡಾ.ಮೋಹನ್ ಆಳ್ವ ಕಟ್ಟಿರುವ ಮನೆಗಳು...


ಸರ್ಕಾರ ನಿರ್ಮಿಸಿರುವ ಶೆಡ್‌ಗಳು

ಇವರು ರೈತರು ಎಂದರೆ ನಗರದ ನಾಜೂಕಿನವರು, ಪೆಟ್ಟಿಗೆಯ... ಗೂಡುಗಳಲ್ಲಿ ವಾಸಿಸುವವರು ಎಂದುಕೊಂಡಂತಿದೆ. ಯಾವ ಗೋಡೆ... ಒಂದೂ ಕಪಾಟಿಲ್ಲ. ಒಂದೊಂದು ಕೋಣೆಗೆ ಒಂದೊಂದು ಕಿ... ಮಾತಾಡಿಸಿದರೆ 'ಇನ್ನೊಂದು ಭಾಗಕ್ಕೆ ವೆಂಟಲೇಷನ್ ಇಡುತ್ತೇವೆ' ಎ... ಸಿದ್ಧ ಉತ್ತರ. ಆ ಗೂಡಂಥ ಮನೆಯಲ್ಲಿ ರೈತರು ತಮ್ಮ ವ್ಯವಸಾ... ಸಂಬಂಧೀ ಪರಿಕರಗಳನ್ನು, ಬೆಳೆದ ದವಸಧಾನ್ಯಗಳನ್ನು, ಮಕ್ಕಳು-ಮರಿಗಳ... ಆಡು, ಹಸು-ಕರುಗಳನ್ನು, ಹೀಗೆ ಎಲ್ಲವನ್ನೂ ಎಲ್ಲಿ ಇರಿಸಿಕೊಳ್ಳಬೇಕೆ... ಕಟ್ಟಿದವರೇ ಹೇಳಬೇಕು.

ಸ್ವಲ್ಪ ಮಾನವೀಯತೆಯಿಂದ, ಕಲಾತ್ಮಕತೆಯಿಂದ, ಜನರ ಆರೋಗ್ಯ... ಕಾಳಜಿಯಿಂದ ಹಾಗೂ ಸಹೃದಯತೆಯಿಂದ ಇವರ ಬದುಕನ್ನು, ಬದು... ಅಗತ್ಯಗಳನ್ನು ಕಂಡರೆ, ಅದಕ್ಕೆ ಬರಬಹುದಾದ ಸ್ಪಂದನಕ್ಕೆ ಭೋಪಳಾಪು... ಗ್ರಾಮದಲ್ಲಿ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಡಾ. ಮೋಹ... ಆಳ್ವಾ ಅವರು ಕಟ್ಟಿದ ಮನೆಗಳು ಉತ್ತರವಾಗಿವೆ. ಇವೂ ಚಚ್ಚೌಕ... ಮನೆಗಳಾದರೂ, ಎದುರಿಗೇ ಒಂದು ಪುಟ್ಟ ಜಗುಲಿ, ಅದರ ಒಳಹೊಕ್ಕ... ಮೂರು ಸಮಾನ ವಿಸ್ತಾರದ ಕೊಠಡಿಗಳು, ಪ್ರತಿಕೊಠಡಿಗೂ ಎರಡೆರಡು... ಕಿಟಕಿಗಳು ಮತ್ತು ಮನೆಗೆ ಅಂಟಿಕೊಂಡಂತೆ ಹೊರಗೆ ಬಚ್ಚಲು ಮತ್ತು... ಕಕ್ಕಸು ಕೋಣೆ. ಪಕ್ಕದ ಜಾಗದಲ್ಲಿ ಶೀಟ್‌ಗಳ... ಕಟ್ಟಿ ದನಕರುಗಳನ್ನು ಕಟ್ಟಲು ಜಾಗ. ನಾಲ್ಕು... ಮನೆಗಳಿಗೆ ಒಂದರಂತೆ ನೀರಿನ ಪೈಪ್‌ಲೈನ್... ನಾಲ್ಕಾರು ಮಂದಿ ಸದಸ್ಯರು ತಮ್ಮೆಲ್ಲ ಸರ... ಸರಂಜಾಮುಗಳನ್ನು ಒತ್ತರಿಸಿಕೊಂಡು, ತಕ್ಕ... ಖಾಸಗಿತನವನ್ನೂ ಉಳಿಸಿಕೊಂಡು, ಕಾಲು... ಚಾಚಿ ಮಲಗಬಹುದಾದ ಜಾಗ ಇಲ್ಲಿದೆ... ಹೀಗೆ ಆಳ್ವರು ಗ್ರಾಮವನ್ನು ದತ್ತು ಸ್ವೀಕರಿಸಿ... ಕಟ್ಟಿ, ಫಲಾನುಭವಿಗಳಿಗೆ ಬಿಟ್ಟುಕೊಟ್ಟ 2... ಮನೆಗಳನ್ನು ಒಳಹೊಕ್ಕು ಬಂದಾಗ, ಸರಕಾರಿ... ಕೆಲಸ, ಪ್ರಚಾರಪ್ರಿಯ ಸಂಘಗಳ ಕೆಲಸ ಮತ್ತು ಕೆಲವು ಖಾಸಗಿ ಸಂಸ್ಥೆಗಳ... ಕೆಲಸಗಳ ನಡುವಿನ ಇಚ್ಛಾಶಕ್ತಿ, ಶ್ರದ್ಧೆ ಮತ್ತು ಸ್ಪಂದನೆಯ ಅಂತರಗಳು ಕಣ್ಣಿಗೆ... ಹೊಡೆದು ಕಂಡವು. ವಾರದ ಹಿಂದಷ್ಟೇ ಮನೆಗಳನ್ನು ಫಲಾನುಭವಿಗಳಿಗೆ... ಹಂಚಿಕೊಟ್ಟ ಸಮಾರಂಭ ನಡೆದಿದ್ದು, ಅಲ್ಲಿಯ ಒಬ್ಬೊಬ್ಬರೂ ಡಾ. ಮೋಹನ್... ಆಳ್ವರ ಔದಾರ್ಯವನ್ನು ಮನದುಂಬಿ ಸ್ಮರಿಸುತ್ತಿದ್ದರು.

• ಡಾ. ಸಬಿಹಾ ಭೂಮಿಗೌಡ

ಹೆಂಗ ಹೇಳಲೋ ಮಣ್ಣಿನಾ ಮಹಿಮೆ

ಮಣ್ಣಿನಾಗ ನೀರು ಹೊಯ್ದು ಕೆಸರು ತುಳಿದ್ಯಲ್ಲೋ
ಕೆಸರು ತುಳಿದು ಗಡಿಗೆ ಮಾಡಿ ಕುಂಬಾರ
ಎನಿಸಿಕೊಂಡ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ

ಮಣ್ಣಿನಾಗ ಕಬ್ಬಿಣ ತೆಗೆದು ಕಾಸಾಕಿಟ್ಯಲ್ಲೋ
ಕಾಸಾಕಿಟ್ಟು ಕೊಡಲಿ ಮಾಡಿ ಕಮ್ಮಾರ
ಎನಿಸಿಕೊಂಡ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ

ಮಣ್ಣಿನಾಗ ಲಾಗಾ ಹೊಡೆದು ನಕ್ಕು ನಲಿದಲ್ಲೋ
ಆಟಕಟ್ಟಿ ಜನರ ನಗಿಸಿ ದೊಂಬರವನು
ಎನಿಸಿಕೊಂಡ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ

ಮಣ್ಣಿನಾಗ ಮಣ್ಣೇ ಆಗಿ ಅನ್ನ ಬೆಳೆದ್ಯಲ್ಲೋ
ಅನ್ನ ಬೆಳೆದು ಬೆನ್ನುಬಾಗಿ ರೈತ ಕೂಲಿ
ಎನಿಸಿಕೊಂಡ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ

ಮಣ್ಣಿನಾಗ ಮೊಳವ ಹಾಕಿ ಅಳತೆ ಮಾಡಿದರಲ್ಲೋ
ಮನೆ ಮಠ ಪ್ಲಾಟು ಅಂತ ರಿಯಲು ಎಸ್ಟೇಟು
ಮಾಡಿಬಿಟ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ


ಮಣ್ಣಿನಾಗ ಒಡಲು ಕೆದರಿ ಅದಿರು ತೆಗೆದ್ರಲ್ಲೋ
ಟ್ರಕ್ಕು ರೈಲು ಹಡಗು ತುಂಬಿ ಗಣಿಧಣಿಗಳು
ಎನಿಸಿಕೊಂಡ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ

ಮಣ್ಣಿನಾಗ ಹುಟ್ಟಿದಂಗೆ ಮಣ್ಣ ಮಕ್ಳು
ಎನಿಸಿಕೊಂಡ್ರಲ್ಲೋ
ಹಳ್ಳಿ ದಿಳ್ಳಿ ಗದ್ದುಗೆ ಹಿಡಿದು ರಾಜರಂಗೆ
ಮೆರೆಯುತವ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ

ಮಣ್ಣೇ ತಾಯಿ ಮಣ್ಣೇ ತಂದೆ ಮಣ್ಣೇ ದೈವ
ಕನಸು ಕಾಣುತ ಮಣ್ಣಾಗ ಕೊಳೆತು ಹೋದ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ

ಮಣ್ಣು ಚಿನ್ನ ಮಣ್ಣು ರನ್ನ ಮಣ್ಣು ವಜ್ರ
ಮಣ್ಣ ಮೆಟ್ಟಿ ಮುಗಿಲತನಕ ಬೆಳೆದು ನಿಂತ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ

ನೀನು ನಾನು ಎಲ್ಲಾ ಮಣ್ಣು ವಿಟು ಬಿತ್ತಲ್ಲೋ
ಕಣ್ಣತುಂಬಾ ಮಣ್ಣು ಬಿತ್ತಲ್ಲೋ, ಎಂಥಾ ವಿಟಲ್ಲೋ,
ಬಾಯಿತುಂಬಾ ಮಣ್ಣು ಬಿತ್ತಲ್ಲೋ, ಏಳಲಾರದಂಥ
ವಿಟಲ್ಲೋ



• ವಿ.ಹರಿನಾಥ ಬಾಬು

ಣಿ ಬಿಲ ಹೊಕ್ಕ ರೆಡ್ಡಿಗಳು ಈಚಿಗೆ ತಲೆಯಿಕ್ಕಲಿಲ್ಲ

ಪ್ರರೂ ಬಳ್ಳಾರಿ ಕಾಲ್ನಡಿಗೆ ವಿಷಯ
ಡಿ ಸಾಕಾದಂತೆ ಕುಳಿತಿರುವಾಗ ಬಂದ

ಸ್ಸು ದ್ವಡಪ್ಪ. ರಿಯಲಿ ವಂಡ್ರುಪುಲ್ಲು"
ಕಾಳಮಾವನಿಂದ ಯಾವ ಉತ್ತರವೂ
. ಆಗ ಜುಮ್ಮಿ,

ಮು ಲು ಸೀ ಮೆ

ಪುಟ್ಟಪುರಾಣಿ

▶ ಬಿ. ಚಂದ್ರೇಗೌಡ

ದೇನು ಅರ್ಥಾಗಂಗೆ ಹೇಳ್ಳ" ಎಂದಳು.
ನು ಆ ರಾಮುಲು, ರೆಡ್ಡಿ ತರ
ದ್ರೆ ಇಲ್ಯಾರಿಗೂ ಅರ್ಥಾಗದಿಲ್ಲ, ಅದೇನು
ಗೇಳೊ" ಎಂದ ಉಗ್ರಿ.
ಂದು ದಿನದ ಮಟ್ಟಿಗೆ ಬಳ್ಳಾರಿ ಹಂಪೆ
ಕಣೊ ಉಗ್ರಿ. ಕೃಷ್ಣದೇವರಾಯನ ಕಾಲ್ದಲಿ
ಹತ್ತು ಲಕ್ಷ ಜನ ಇದ್ರಂತೆ. ಅವತ್ತು
) ಅದರರ್ಧ ಜನಗಳಾದ್ರೂ ಇದ್ರು ಕಣೊ"
ವಾಟಿಸ್ದೆ.
ನ್ನಂಗೋಗಿದ್ದ?" ಎಂದಳು ಜುಮ್ಮಿ.
ಮ್ಮ ಎಮ್ಮೆಲ್ಲೆ ವೆಯಿಕಲ್ ಕಳಿಸಿದ್ರು ಕಣಕ್ಕ.
ದ್ದೆ. ಅದರಲ್ಲೂ ಈ ಬಳ್ಳಾರಿಲಿ ವಸತಿ
ಗದು ಕಷ್ಟ, ಅದ್ಕಲ್ಲನೂ ನೀವೇ
ಬೇಕು ಅಂದಿದ್ರು. ಅದ್ಕೆ ನಾವು ಮೀಲ್ಸ
ತಗಂಡು, ಹೋಗೋವತ್ತಿಗೆ ಬೆಳಕು
ಕು ಆತರ ಹೋಗಿದ್ವೊ, ಅಲ್ಲೊಗಿ
ದ್ರೆ ಹತ್ತು ಗಂಟಿಗೇ ಸ್ಟೇಡಿಯಂ
ವಾಗಿತ್ತು, ಫಂಕ್ಷನ್ ಇದ್ದಿದ್ದು
ಗಂಟಿಗೆ. ಎಲ್ಲಿ ನೋಡು ಜನ, ಜನ.
ಂ ಪಕ್ಕದಲ್ಲಿ ನೋಡಿದ ದೃಶ್ಯನ
ಂಗಿಲ್ಲ."
ದೇನ್ನೊಡಿದೆ ಹೇಳ್ಳ."
ಮ್ಮ ಕಿಡೆ ಯರಡುಕ್ಕೋಗಬೇಕಾದ್ರೆ ಸ್ವಲುಪ
ಹೇಸಿಗೆ ಇರತದೆ. ಆದ್ರೆ ಅಲ್ಲಿ ಮಾತ್ರ
ದು ಇಲ್ಲ, ಸ್ಟೇಡಿಯಂ ಪಕ್ಕದಲ್ಲಿ ಈ
ಹಳೆ ಕ್ಯರೆ ತರ ಒಂದು ಸಣ್ಣ ಕ್ಯರೆ ಇತ್ತು
ಅದರೊಳಗೆ ಬಳ್ಳಾರಿ ಜಾಲಿ ಬ್ಯಾರೆ. ಅಲ್ಲಿ
ಲೈನಿಕ್ಕೊತಗಂಡು ಸಿದ್ದರಾಮಯ್ಯನ ಸುದ್ದಿ
ಚಿಕೊಂಡು ಎಷ್ಟು ಸುಖವಾಗಿ
ಕ್ಕೋಯ್ತ ಕುಂತಿದ್ರು ಅಂತೀ."
ದ ನೋಡಿಕಂಡು ಬರಕ್ಕೋಗಿದ್ದ ನೀನು?"
ನ್ನ ಕಣ್ಣಿಗೆ ಬಿದ್ದ ದೃಶ್ಯ ಹೇಳ್ತಿನಿರಕ್ಕ.
ಆ ಕ್ಯರೆಲಿದ್ದ ಗಳಿನ ತುದಿಲಿ ದೊಡ್ಡ
ಕಾಂಗ್ರೆಸ್ ಬಾವುಟ ಹಾರಾಡತ ಇದ್ದೊ.

ಇದ್ಯಾರಪ್ಪ ತಗಂಡೋಗಿ ಅಲ್ಲಿ ನೆಟ್ಟವುರಲ್ಲ ಅಂತ ನೋಡಿದ್ರೇ, ಬಾವುಟದ ಕ್ಯಳಗಡೆ ಬಹಿರ್ದೆಸೆ ಗಿರಾಕಿಗಳು. ಇನ್ನು ತಮಾಸಿ ಏನಂದ್ರೆ, ಕೆಲುವು ಜನ ಕೂತಿತ್ತಾವುಲೆ ಮೊಬೈಲ್ ಮಾಡದೇನು, ಮೊಬೈಲಲ್ಲಿ ಮೆಸೇಜು ಕಳಸದೇನು, ಅಂತೂ ನಾನು ಸ್ಟೇಡಿಯಂ ಬುಟ್ಟು ಇವುರ ನೋಡದೇ ಆಯ್ತು ಕಣಕ್ಕ."

"ಅಂಗರಲ್ಲಿಗೋಗಲಿಲ್ಲ ಅನ್ನು."

"ಲೀಡ್ರುಗಳು ಬರೋವತ್ತಿಗೆ ಹೋದೆ ಕಣಕ್ಕ. ಪ್ರತಿಭಟನೆಲಿ ಸುಡಕ್ಕೆ ತಂದಿರೊ ಗೊಂಬೆ ತರ ಧರಮುಸಿಂಗು ಇಳದ. ಅವುನಿಂದೆ ಖರ್ಗೆ. ಅಮ್ಯಾಲೆ ಮೊಯ್ಲಿ, ಕೃಷ್ಣ, ಅಂತೂ ಕಾಂಗ್ರೆಸ್ಸಿನ ಓ.ಎ.ಪಿ.ಗಳ್ಯಲ್ಲ ಬಂದ್ರು."

"ಅವುರ್ಯಾರು?"

"ಅವುರು ಕಾಂಗ್ರೆಸ್ಸಿನ ಓಲ್ಡ್ ಏಜ್ ಪೆನ್‌ಶನ್ ಗಿರಾಕಿಗಳು ಕಣಕ್ಕ. ಅವುರು ಬತ್ತರೆ ಅಂದ್ರೆ ಹತ್ತು ಜನ ಬರದಿಲ್ಲ. ಆದ್ರು ಜನ ಸೇರೊ ಸಭೆಗೆ ಬಂದು ಮೂಟೆ ಇಳಿಸಿದಂಗೆ ಕುಂತುಬುಡ್ತರೆ. ಪಾಪ ಈ ಕಾಂಗ್ರೆಸ್ಸಿನ ಹೊಸ ತಲಿಮಾರು ಯಂಗೋ ಸಯಿಸಿಗಂಡು ನಿಭಾಯಿಸ್ತವೆ."

"ಕಾಂಗ್ರೆಸ್ಸಿನಲ್ಲಿ ವಸ ಜನ ಚನಾಗ್ಯವುರೆ" ಎಂದ ಉಗ್ರಿ.

"ಎಸ್, ದ್ಯಪನೆಟ್ಟಿ ಕಣೊ. ಈ ಓ.ಎ.ಪಿ. ಜನ ಹಿಂದಗಡೆ ಕುಂತಗಂಡು, ಅವುರ ಮುಂದಕೆ ಬುಡಬೇಕು. ಆ ಖರ್ಗೆ ಮಗ, ಧ್ರಂಸಿಂಗ್ ಮಗ, ಎಂ.ಪಿ. ಪ್ರಕಾಶನ ಮಗ, ಮಯಿಮಾ ಪಟೇಲ, ಕೃಷ್ಣ ಬೈರೇಗೌಡ, ಗುಂಡೂರಾಯನ ಮಗ, ಯಂತ್ಯಂತ ಜನ ತಯಾರಾಯ್ತಾ ಅವುರೆ ಅಂತೀ. ಅಂತ ಹುಡುಗ್ರ ಮುಂದೆ ಬುಟ್ರೆ ರೆಡ್ಡಿಗಳ ಚಿಂದಿ ಮಾಡ್ತರತ್ತಗೆ."

"ರೆಡ್ಡಿಗಳಿರಲಿಲ್ಲವೇನ್ನ?"

"ಅವುರು ಇದ್ರು ಕಣಕ್ಕ. ಬಳ್ಳಾರಿಗೆ ಬಂದ ಜನ ನೋಡಿ ಗಣಿಬಿಲ ಸೇರಿಕೊಂಡೋರು ಈಚಿಗೆ ಬರಲಿಲ್ಲ. ಸುಮ್ಮನೆ ಕುಂತಿರದ್ಯಾಕೆ ಅಂತ ಪೇಪರ್‌ನವ ಕರದು ಮಾತಾಡಿಸ್ಯವೆ. ಆ ರೆಡ್ಡಿಗಳ ಪೈಕಿ ವಬ್ಬ ಥೇಟ್ ನಮ್ಮ ದ್ಯಾವೇಗೌಡ್ರ ನಾಕನೆ ಮಗನಂಗವುನೆ. ಆ ಬಡೆತ್ತುದ್ದು ಏನಂದದೆ ಗೊತ್ತೆ?"

"ಬೋದಿದ್ದನೆ?"

"ಬೋದಿಲ್ಲ ಕಾಂಗ್ರೆಸ್ಸಿನವುರು ಬಂದು ವಕ್ರದೃಷ್ಟಿಲಿ ನಮ್ಮ ಬಳ್ಳಾರಿ ನೋಡಿ ಹೋಗಿರದ್ರಿಂದ. ವಕ್ರದೃಷ್ಟಿ ಪರಿಯಾರದ ಹೋಮ ಮಾಡುಸ್ತಿನಿ ಅಂತ ಮಾಡ್ಡಿ, ಇಲಾತಿ ಹಸಿನ ಗಂಜಲ ತಗಂಡು ಊರಿಗ್ಯಲ್ಲ ಚುಮುಕುಸ್ತಂತೆ."

"ಅದಿನ್ನಂಥ ತಲಿಕೆಟ್ಟ ಬಡ್ಡೆತ್ತುದ್ದ?" ಎಂದ ಕಾಳಮಾವ.

"ಅದರ ತಲೆ ಹಾಳಾಗ್ಯದೆ ಸರಿ ದ್ವಡಪ್ಪ, ಆದ್ರೆ ಈ ಯಜ್ಞಯಾಗ ಮಾಡೋ ಜನ ದನ ಬಿದ್ದ ಜಾಗಕ್ಕೆ ರಣದ್ದು ಬರಂಗೆ ಕೂಡ್ಲೆ ಅವುನತ್ರಕೋಗಿ ವಕ್ರದೃಷ್ಟಿ ಪರಿಯಾರದ ಸಾಮಗ್ರಿ ಪಟ್ಟಿಕೊಟ್ಟು ಹೋಮ ಮಾಡಿಸ್ಯವುರಲ್ಲ ಹೇಳು."

"ಥೂ, ಥೂ, ಇಂತದು ಇಲ್ಲಿಗಂಟ ನ್ಯಡದಿಲ್ಲ ಬುಡು. ಅದ್ಯಾವುದೊ ತಲೆ ಬೋಳಿಸಿಗತ್ತದೆ. ಇನ್ಯಾವುದೊ ತಲಿಕೆಟ್ಟಂಗಾಡ್ತದೆ."

"ತಲೆ ಬೋಳಿಸಿಗಂಡನು ರಾಮುಲು ದ್ವಡಪ್ಪ. ನಿಜಕ್ಕೂ ಅವುನ ತಲೆಯ ಸರಿಯಾಗಿ ನೋಡಿ, ಬಳ್ಳಾರಿಗೋಯ್ತ ಯಡಗಡೆ ಗುಡ್ಡನೋಡಿದ್ರೆ, ಥೇಟ್ ಅದೇ ತರ ಕಾಣ್ತದೆ. ಬೋಳುಗುಡ್ಡದ ಕ್ಯಳಗಡೆ ಒಂದು ರಸ್ತೆ ಹೋಗ್ಯದೆ. ಅದೇ ತರ ರಾಮುಲು ಬುರುಡೆಲೂ ಒಂದು ಮಾರ್ಕದೆ."

"ಈ ಕುಮಾರಸ್ವಾಮಿ ಯಾಕೆ ರಾಮುಲು ತಮ್ಮನಂಗೆ ಮಾತಾಡ್ತನಲ್ಲ?"


ಒಬ್ಬರೆ ನೋಡು."

"ಅದ್ಯಾರ್ಲ?"

"ಅವುರ್ಯಾರು ಅಂದ್ರೆ ನಿಮ್ಮ ಸಿಸ್ಟರ್ ಮೋಟಮ್ಮ ಕಣಕ್ಕ. ಬಿಸಿಲೇರಿದಂಗೂ ಮೋಟಮ್ಮ ಮಿಂಚತಿದ್ರು. ರಿಯಲಿ ಬಿಸಿಲಿಗೆ ಹೇಳಿಮಾಡಿಸಿದ ಕಲರು ಅಂದ್ರೆ ಬ್ಲಾಕ್. ಬ್ಲಾಕ್ ಈಸ್ ಬ್ಯೂಟಿ. ತುಂಬ ಹೆಲ್ತಿ ಕಲರು. ಬ್ಯಳ್ಳಗಿರೋರು ಬಿಸಿಲಿಗೋದ್ರೇ ಹಣ್ಣುಗೋತಿ ಮಂಗಾಯ್ತರೆ. ಅದೇ ಕಪ್ಪಗಿರೊ ಜನ ಶೈನಿಂಗ್ ಬತ್ತರೆ. ಈ ದೇಶಪಾಂಡೆ ಯಂಗಾಗಿದ್ದ ಅಂದ್ರೆ ಆ ದೇಶಪಾಂಡೆ ಯತ್ಲಗೋದನಪ್ಪ ಅನ್ನಂಗಾಗ್ಯವುನೆ."

"ಕಾಂಗ್ರೆಸ್ಸಿನೋರು ಕಷ್ಟಪಟ್ರು ಏನೂ ಆಗಲಿಲ್ಲವಲ್ಲ ಹೇಳು."

"ಮಿಸ್ಟರ್ ಉಗ್ರಿ, ಮೊಟ್ಟ ಮೊದ್ಲಿಗೆ ಕಾಂಗ್ರೆಸ್ಸಿನೋರು ಒಂದಾದ್ರು. ರೆಡ್ಡಿಗಳೂ ಒಂದಾದ್ರು. ಎಡೂರಪ್ಪನಿಗೆ ನಿಜವಾಗ್ಲು ಈ ಜಾಥ ಬೇಕಾಗಿತ್ತಂತೆ. ಜಾಥಾದಿಂದ ಏನಾರ ಆದ್ರೆ ರೆಡ್ಡಿಗಳ ವದ್ದು ಓಡ್ಸಿ ಸರಕಾರ ನ್ಯಡಸನ ಅಂತ ತಯಾರಾಗಿದ್ದನಂತೆ. ಅಂತ ಪ್ರಯತ್ನ ಇನ್ನು ಮುಂದುವರಿತದಂತೆ."



"ಅವುನಿನ್ನಂಗೆ ಮಾತಾಡಬೇಕೊ ಉಗ್ರಿ? ಅವುನಿಂದ್ಲೆ ತಾನೆ ಇವುರ್ಯಲ್ಲ ಮ್ಯರಿತಾಯಿರದು. ಈಗ ಕಾಂಗ್ರೆಸ್ಸಿನೋರ ಜಾಥಾ ಸಕ್ಸಸ್ ಆಗಿದ್ದ ನೋಡಿ ರೆಡ್ಡಿ ತರ ಅವುನೂ ಪ್ಲಾಪ್ ಅಂತ ಅವುನೆ. ಸುಮ್ಮನಿದ್ರೆ ಮರಿಯಾದಿಯಾದ್ರು ಉಳಿಯದು."

"ಈಗ ಬಳ್ಳಾರಿಗಂಟ ಈ ತರ ಹೋದ್ರಲ್ಲ ಮುಂದೇನೂ?" ಎಂದ ಕಾಳಮಾವ.

"ಮುಂದೇನು ಅನ್ನೊ ಪ್ರಶ್ನೆ ಕಾಂಗ್ರೆಸ್ಸಿನೋರಿಗೂ ಎದುರಾಗ್ಯದೆ ದ್ವಡಪ್ಪಾ. ತಿರಗ ಪಾದಯಾತ್ರೆ ಮಾಡೊ ಸ್ಥಿತಿಲಂತೂ ಅವುರಿಲ್ಲ. ಸುಮಾರು ಜನ ಸುಮಾರುದಿನ ಸುಧಾರಿಸಿಕೋಬೇಕು. ಅದರಲ್ಲೂ ಅವುರು ಮದ್ದಿನ ಕಲರ್ ಬರಬೇಕಾದ್ರೆ ಇನ್ನ ಭಾಳದಿನ ಬೇಕು. ಈ ಜಾಥಾದಲ್ಲಿ ಕಲರ್ ಬದ್ಲಾಗದಂಗಿದ್ದೋರು ಅಂದ್ರೆ

"ಈ ಟೇಮಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜನ ಇರಬೇಕಾಗಿತ್ತಲ್ಲ. ಅವುರ್ಯಲ್ಲ ಯತ್ತಗೋದ್ರು?" ಎಂದ ಉಗ್ರಿ.

"ಸುಮಾರು ಜನ ಹೇಳೊ ಪ್ರಕಾರ ಅವುರ್ಯಲ್ಲ ಗಣಿ ರೆಡ್ಡಿಗಳ ಪ್ರೆಂಡ್ಸಂತೆ. ಅದ್ಕೆ ಗಡಿನಾರ ವತ್ತುವರಿ ಮಾಡಿಕಳ್ಳಿ, ಗುಡಿನಾರ ಬೀಳುಸ್ಲಿ, ನಮಿಗ್ಯಾಕೆ? ನಮಿಗೆ ಈ ಕಡೆ ಹೊಗೇನಕಲ್, ಆ ಕಡೆ ಬೆಳಗಾಂ ಸಮಸ್ಯೆ ಸಾಕು ಅಂತ ಸುಮ್ಮನಿದ್ದರಂತೆ. ಅವುರ್ಯಾಕಂಗವುರೆ ಅಂತ ಇನ್‌ವೆಸ್ಟಿಗೇಷನ್ ಮಾಡಿಕಂಡು ಬತ್ತಿನಿರು" ಎಂದು ವಾಟಿಸ್ದೆ ಹೊರಟ. ●

ಧೂಮಲೀಲೆ...



ಮನುಷ್ಯರು bore ಹೊಡೆಯಲು ಹೊಸಹೊಸ ದಾರಿ ಕಂಡುಕೊಂಡಿರುತ್ತಾರೆ. 'ಗಾಂಧೀಜಿಯಂತೆ ಆಗು, ಅವರಂತೆ ಬದುಕು' ಎಂದು ಹೇಳುವವರೇ ಹೆಚ್ಚು ಜನ. ಹೀಗೆ ಹೇಳುವವರ ಬದುಕನ್ನು ನೀವು ತನಿಖೆಗೆ ಒಳಪಡಿಸಿದರೆ ಸ್ಮಶಾನದಂತೆ ಇರುತ್ತದೆ. ಉತ್ತರ ಭಾರತದಲ್ಲಿ ಎಲ್ಲರೂ ಮಾತಾಡುತ್ತಾ ಕೂತಿದ್ದಾಗ ಹುಕ್ಕಾ ಹತ್ತಿಸಿ ಒಬ್ಬರಿಂದೊಬ್ಬರಿಗೆ ಸಾಗಿಸಿ ಸೇದುತ್ತಾ ಖುಷಿಪಡುವುದು, ಮದ್ರಾಸಿನ ಲೇಖಕ ಜಯಕಾಂತನ್ ಗಾಂಜಾವನ್ನು ರಿಕ್ಷಾವಾಲಾಗಳ ಕಂಪನಿಯಲ್ಲಿ ಸೇದಿ ಖುಷಿಯಿಂದ ಕೆಮ್ಮುವುದು, ಚೈನಾದ ಪ್ರತಿಯೊಂದು ಮುಖ್ಯ ಮೀಟಿಂಗ್‌ನಲ್ಲೂ ಟೀ ಕೊಡುವುದರ ಜೊತೆಗೆ ಎರಡು ಸಿಗರೇಟು, ಬೆಂಕಿಪೊಟ್ಟಣ ಇಟ್ಟಿರುವುದು... ಎಷ್ಟು ಚೆಂದ! ಹಾಗೆಯೇ ತೊಂಭತ್ತು ವರ್ಷದ ಚೈನಾ ನಾಯಕ ಡೆಂಗ್ ಸಿಗರೇಟ್ ಸೇದುತ್ತಲೇ ದೇಶ ಕಟ್ಟುವ ಬಗ್ಗೆ ಸೂಚನೆ ಕೊಡುತ್ತಾ ಓಡಾಡುವುದು ಕೂಡ.....

ಎಲ್ಲ ಪ್ರಬುದ್ಧರಲ್ಲಿ ಶೇಕಡ ಎಪ್ಪತ್ತಕ್ಕಿಂತ ಹೆಚ್ಚು ಜನ ಚೈನೀಯರು, 65 ಕ್ಕಿಂತ ಹೆಚ್ಚು ಜನ ಇಂಡೋನೇಷಿಯಾದವರು, ಬಹುಪಾಲು ಎಲ್ಲಾ ಫ್ರೆಂಚರೂ ಸಿಗರೇಟ್ ಸೇದುತ್ತಾರೆ. ಎಲ್ಲಾ ಕಾಯಿಲೆಗಳನ್ನೂ ಸಿಗರೇಟ್ ಮೇಲೇ ಹಾಕಿ ಬೊಬ್ಬೆ ಹಾಕುವ ವೈದ್ಯರು, ಕಾಂಪೌಂಡರುಗಳು, ಧಾರ್ಮಿಕರು, ಸುಳ್ಳರು ಇದ್ದಾರೆ.... ಇಸ್ರೇಲ್ ಎಂಥ ಕಷ್ಟ ಅನುಭವಿಸುತ್ತಿರುವ ದೇಶ ಎಂಬುದನ್ನು ನೀವು ಬಲ್ಲಿರಿ. ಒಂದೊಂದು ಸಲ ಈ ಇಸ್ರೇಲಿ ಯಹೂದ್ಯರ ಜಾತೀಯತೆ ಕಂಡು ಸಿಟ್ಟು ಬಂದರೂ ಯಾನಿಕ್ ರಾಬಿನ್ ಎಂಬ ಸಮಾಜವಾದಿ ಪ್ರಧಾನಿಯಾದಾಗ ನಾನೆಂದಿದ್ದೆ, "ಈ ಸೋಷಲಿಸ್ಟ್ ಮುದುಕ ಇಸ್ರೇಲಿಗೆ ಶಾಂತಿ ತರುವ ಸಂಭವವಿದೆ!" ಹಾಗೇ ಆಯಿತು. ನೋಡಲು ಗಂಭೀರವಾದ ಆದರೆ ಆಳದಲ್ಲಿ ಮಾರ್ದವತೆಯುಳ್ಳ, ಸ್ನೇಹಕ್ಕಾಗಿ ಪ್ರೀತಿಗಾಗಿ ಹಾತೊರೆವ ಜನ ಈ ಸೋಷಲಿಸ್ಟರು. ನೋಡಲು ಸ್ವಲ್ಪ ಸ್ವೀಡನ್ನಿನ (ವಿಶ್ವಸಂಸ್ಥೆಯ ಮಾಜಿ ಕಾರ್ಯದರ್ಶಿ, ದಿವಂಗತ) ದಾಗ್ ಹ್ಯಾಮರ್‌ಶೀಲ್ಡ್ ತರಹ ಇರುವ ಈ ರಾಬಿನ್ ಹೇಳಿದಂತೆ ಮಾಡುವ ಮನುಷ್ಯ ಸಿಗರೇಟ್ ಬಗ್ಗೆ ಕೂಡ. ಮೊನ್ನೆ ಈ ರಾಬಿನ್‌ನ ಸಂಪುಟ ಇಸ್ರೇಲಿನ ಎಲ್ಲ ಕಚೇರಿ, ಕಾರ್ಖಾನೆಗಳಿಂದ ಸಿಗರೇಟನ್ನು ನಿಷೇಧಿಸಲು ತೀರ್ಮಾನಿಸಿತು. ಈ ತೀರ್ಮಾನವನ್ನು ಪಾರ್ಲಿಮೆಂಟ್‌ನಲ್ಲಿ ಇಡಲು ಎಲ್ಲ ಸಿದ್ಧತೆಗಳಾದವು. ಆದರೆ ಚೈನ್ ಸ್ಮೋಕ್ ಮಾಡುತ್ತಾ ಕೂತಿದ್ದ ರಾಬಿನ್ ಮುಗುಳ್ನಕ್ಕು ಆ ನಿರ್ಣಯಕ್ಕೆ ಸಹಿ ಹಾಕಲು ನಿರಾಕರಿಸಿದ...



ಹೀಗಂದೆ ಅಂತ ನಾನು ಸಿಗರೇಟ್ ಸೇದಲು ಶುರುಮಾಡಿರಬಹುದು ಅಂದುಕೊಳ್ಳಬೇಡಿ. ಇಲ್ಲ, ಸೇದುತ್ತಿಲ್ಲ, ಆದರೆ ಸೇದಿ ಆನಂದಿಸುವವರಿಗೆ 'ಸೇದಬೇಡಿ' ಎಂದು ಬೋರ್ ಹೊಡೆಯುವವ ನಾನಲ್ಲ.

ಈ ಬಗ್ಗೆ ಒಂದು ಹಳೇ ಜೋಕ್ ಇದೆ. ಸಿಗರೇಟ್ ಸೇದುತ್ತಿದ್ದವನನ್ನು ನೋಡಿದ ಬೋರ್ ಒಬ್ಬ, "ನೋಡಿ, ಸಿಗರೇಟ್‌ನಿಂದ ನಿಮ್ಮ ಆರೋಗ್ಯ ಹಣ ನಾಶವಾಗುತ್ತೆ. ನೀವು ಸಿಗರೇಟ್ ಸೇದುವ ಬದಲು ಅದೇ ಹಣವನ್ನು ಕೂಡಿಟ್ಟಿದ್ದರೆ... ಆಗೋ ಅಲ್ಲಿದೆಯಲ್ಲ... ಅಂಥ ಬಿಲ್ಡಿಂಗನ್ನು ನೀವು ಕಟ್ಟಿಸಿಕೊಳ್ಳುತ್ತಿದ್ದಿರಿ."

"ಹೌದಾ? ಆ ಬಿಲ್ಡಿಂಗ್ ನಿಮ್ಮದಾ?" ಅಂದ ಆತ ದಮ್ ಎಳೆಯುತ್ತ.

"ಅಲ್ಲ"


"ಆದರೆ ಅದು ನನ್ನದು" ಅಂದ ಇನ್ನೊಂದು ದಮ್ ಎಳೆಯುತ್ತ!

-ಮೇ 11, 1994

ಬಾಡೂಟ ಬಿರಿಯಾನಿ ಪುಣ್ಯ ಇತ್ಯಾದಿ

ಮುಖ್ಯಮಂತ್ರಿಗಳು ವ್ಯಾಕುಲಗೊಂಡಿದ್ದರು. ಅವರ ಹೃದಯ ಅತೀವ ಯಾತನೆ ಅನುಭವಿಸುತ್ತಿತ್ತು. ಅಹೋರಾತ್ರಿ ಧರಣಿ ಎಂದವು ವಿಪಕ್ಷಗಳು. ಕುಳಿತುಕೊಳ್ಳಲಿ. ಅದೂ ಒಂದು ರೀತಿಯ ಪ್ರತಿಭಟನೆಯೇ ಸರಿ. ಹಾಗೆ ಕುಳಿತವರು ಉಪವಾಸ ಇದ್ದರೆ ಅದೊಂದು ರೀತಿ. ಉಪವಾಸದ ರೀತಿಯಲ್ಲೂ ಹಲವು ರಖಂಗಳಿವೆ ನಿಜ. 'ಏಕಾದಶಿ' ಅಂದ್ರೆ ಶೂದ್ರರಿಗೆ 'ಉಪವಾಸದ ಹಬ್ಬ!' ಅವತ್ತು ಉಪವಾಸ ಇರಬೇಕು. ಉಪವಾಸ ಎಂದರೆ ಉಪವಾಸನೇ ಅಂತಲ್ಲ. ಸಾಬರು ರಂಜಾನ್ ದಿನಗಳಲ್ಲಿ ಮಾಡುವ ಉಪವಾಸದ ರೀತಿಯಲ್ಲ ಇದು.

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಬೇಯಿಸಿದ ಆಹಾರ ಬಳಸುವಂತಿಲ್ಲ, ರಸಾಯನ, ಕೋಸಂಬರಿ, ಹಣ್ಣು ಹಂಪಲು, ಪಾನಕ ಇವುಗಳನ್ನು ಸೇವಿಸಬಹುದು. ಯಾವುದೇ ಕಾರಣಕ್ಕೂ ಬೇಯಿಸಿದ ಆಹಾರ ಸೇವಿಸಬಾರದು. ಬೇಯಿಸದ ಆಹಾರವನ್ನು ಕಂಠಪೂರ್ತಿ ಹೊಡೆಯಬಹುದು! ಇದು ಒಂದು ರೀತಿಯ 'ಉಂಡು ಉಪವಾಸ' ಇದ್ದಂಗೆ. ಒಂದು ರೀತೀಲಿ ಬಳ್ಳಾರಿ ಶ್ರೀರಾಮುಲು ಉಪವಾಸ ಇದ್ದಂಗೆ ಅನ್ನಿ. ಅವರು ಬಳ್ಳಾರಿ ಸ್ವಾಭಿಮಾನಿಯಾಗಲು ತಲೆ ಬೋಳಿಸಿಕೊಂಡದ್ದು, ಕಪ್ಪು ಬಟ್ಟೆ ಧರಿಸಿ ಕರಾಟೆಕಿಂಗ್ ತರಹ ರಂಜಿಸಿದ್ದು ಹಳೆಯ ಸಂಗತಿ. ಅವರು ಸ್ವಾಭಿಮಾನಿ ಪ್ರತಿಜ್ಞೆ ಪ್ರಚುರಗೊಳಿಸಿದ ಸಂದರ್ಭದಲ್ಲಿ ತಾನು ಉಪವಾಸ ಇರುವುದಾಗಿ ಘೋಷಿಸಿದ್ದರು. ಆದರೆ ಇಪ್ಪತ್ತು ದಿವಸ ಉಪವಾಸ ಅಂದ್ರೆ ಹುಡುಗಾಟಾನಾ.... ನಮ್ಮ ನಾಯಕನ ದೇಹ ಸ್ಥಿತಿ ಏನಾಗುತ್ತೋ ಎಂದು ವ್ಯಾಕುಲಗೊಂಡಿದ್ದ ಅವರ ಪರಮ ಶಿಷ್ಯರಿಗೆ.... ಸನ್ಮಾನ್ಯರು ಉಪವಾಸ ಅಂದರೆ ಉಪವಾಸನೇ ಇರಲ್ಲ; ಕಾಳುಕಡ್ಡಿ ತಿಂತೀನಿ ಎಂದು ಹೇಳಿ ತಮ್ಮ ಭಕ್ತರ ಮನಸ್ಸಿಗೆ ನಿರಾಳ ತಂದಿದ್ದರು. ಅವರನ್ನೇ ಅನುಸರಿಸಿದ ಅವರ ಶಿಷ್ಯರನೇಕರು 'ಶ್ರೀರಾಮವೇಷ' ಧರಿಸಲು ಮುಂದಾದರು. ಬಹಿರಂಗವಾಗಿ, ದೃಶ್ಯ ಮಾಧ್ಯಮಗಳ ದಯೆಯಿಂದ. ಆದರೂ ಕೂಡ. ಅವರೂ 'ಕಾಳುಕಡ್ಡಿ ಉಪವಾಸ' ಮಾಡುತ್ತಾರಾ ಅಥವಾ ತಾವು ಪ್ರತಿನಿತ್ಯ ಸೇವಿಸುವ ಆಹಾರವನ್ನೇ ಬೇಯಿಸದೆ ಸೇವಿಸುತ್ತಾರಾ ಎಂಬುದರತ್ತ ದೃಶ್ಯ ಮಾಧ್ಯಮದವರು ಗಮನ ಹರಿಸಲಿಲ್ಲವಾಗಿ ಈ ನಾಡಿನ ಜನತೆ ಇದನ್ನು ತಿಳಿಯುವ ಅವಕಾಶದಿಂದ ವಂಚಿತವಾಯಿತು! ಅವರೂ ತಿನ್ನಲಿ. ಶಾಸಕರೂ ತಿನ್ನಲಿ. ತಿಂದು ಸುಖವಾಗಿರಲಿ. ಅದಕ್ಕಲ್ಲ, ವಿಪಕ್ಷಗಳ ಶಾಸಕರು ತಿನ್ತೀವಿ ತಿನ್ತೀವಿ ಅಂತ ಮಾಂಸದ ಊಟಾನೆ ತರಿಸೋದೆ! ವಿಧಾನಸೌಧವೇ ಒಂದು ದೇವಾಲಯ. ವಿಧಾನಸಭೆ ಸಭಾಂಗಣ ಅಂದ್ರೆ ಅದರ ಗರ್ಭಗುಡಿ ಇದ್ದಂಗೆ. ಅಲ್ಲಿಯೇ ಇಂತಹ ಅಪವಿತ್ರ ಕಾರ್ಯ ನಡೆಸಬಹುದೆ! ಅದೂ ರೋಷನ್ ಬೇಗ್ ಕಳುಹಿಸಿದ್ದ ಬಿರಿಯಾನಿ ಅಂತೆ. ಅದು ಯಾವ ಮಾಂಸ ಹಾಕಿ ತಯಾರಿಸಿದ್ದೊ ಏನು ಕತೆಯೋ... ಗೋಮಾಂಸ ಹಾಕಿ ಮಾಡಿದ್ದರೆ.... ಡಬ್ಬಲ್ ಅಪವಿತ್ರ ಆಗುತ್ತದೆ! ಬೇರೆ ಏನಾದರೂ ತಿಂದು ಹಾಳಾಗಲಿ... ಮಾಂಸದ ಬಿರಿಯಾನಿ ತಿಂದು ಗರ್ಭಗುಡಿ ಅಪವಿತ್ರಗೊಳಿಸಿದರಲ್ಲಾ ಎಂಬುದು ಸನ್ಮಾನ್ಯರ ಚಿಂತೆಯಾಗಿತ್ತು.

ಮನೆಗೆ ಕಾಗೆ ನುಗ್ಗಿದ್ರೆ ಅಪಶಕುನ ಎನ್ನುವ ನಂಬಿಕೆ ಇದೆ. ಯಾರಾದರೂ ಆಗದವರು ಮನೆಗೆ ಬಂದ್ರೆ 'ಹೊಸ ಮನೆಗೆ ಕಾಗೆ ನುಗ್ಗಂಗೆ ಬಂದ' ಅನ್ನುವ ಆಡುಮಾತೇ ಇದೆ. ಕಾಗೆ ಹೊಕ್ಕ ಮನೆಯವರು ಏನ್ಮಾಡ್ತಾರೆ.... ಮನೇನೆ ಖಾಲಿ ಮಾಡ್ತಾರೆ! ಇನ್ನು ಕೆಲವರು 'ಹಾಳುಬಸ್ತೀದು ಹಿಂಗೆ ನುಗ್ಗದಲ್ಲ' ಎಂದು ಶಪಿಸುತ್ತಾ ಪುರೋಹಿತರನ್ನು ಕರೆಯಿಸಿ 'ಪುಣ್ಯ' ಮಾಡಿಸುತ್ತಾರೆ. ಈ 'ಪುಣ್ಯ' ಕ್ರಿಯೆ ಮನೆಗಳಿಗೆ ಮಾತ್ರ ಸೀಮಿತವಾಗಿಲ್ಲ. ದೇವಾಲಯ ಪ್ರವೇಶವನ್ನು ಮಾಡಬಾರದವರು ಮಾಡಿದರೆ... ಅದೂ ಗರ್ಭಗುಡಿಯನ್ನೂ ತಲುಪಿ ದೇವರ ವಿಗ್ರಹವನ್ನು ಸ್ಪರ್ಶಿಸಿದ್ದೇ ಆದರೆ... ದೇವರಿಗೆ ಮೈಲಿಗೆ ಆಗುತ್ತೆ! ಮುಜರಾಯಿ ದೇವಸ್ಥಾನಗಳಾದರೆ ಅಂತಹವರಿಗೆ 'ಪ್ರವೇಶ ನಿಷಿದ್ಧ' ಎನ್ನುವಂತೆಯೂ ಇಲ್ಲ. ಸಂವಿಧಾನ, ಕಾನೂನುಕಟ್ಟಳೆ ಎಂದು ನೂರಾರು ಮಾತನ್ನಾಡುತ್ತವೆ. ಅದಕ್ಕೆ ಅವರೇನು ಮಾಡ್ತಾರೆ 'ದೇವರು ಅಂದ್ರೆ ಎಲ್ರುಗೂ ಒಂದೇಯ. ಬನ್ನಿ... ಬನ್ನಿ.... ಪರಮಾತ್ಮನ ದರ್ಶನ ಮಾಡಿ ಧನ್ಯರಾಗಿ' ಅಂತ ನವಿರಾಗಿ ಹೇಳ್ತಾರೆ. ಅವರು ಹೊರಕ್ಕೆ ಹೋಗುತ್ತಿದ್ದಂತೆಯೇ 'ಗಂಗಾಜಲ' ಪ್ರೋಕ್ಷಿಸಿ 'ಪುಣ್ಯ' ಮಾಡಿ ದೇವರಿಗೆ ಆಗಿರುವ ಮೈಲಿಗೆ ಕಳೆಯುತ್ತಾರೆ! ವಿಧಾನಸಭಾ ಸಭಾಂಗಣಕ್ಕೂ ಇಂತಹ 'ಪುಣ್ಯ' ಮಾಡಿ ಆಗಿರುವ ಅಪವಿತ್ರತೆಯನ್ನು ಹೋಗಲಾಡಿಸಿ ಪಾವಿತ್ರ್ಯತೆಯನ್ನು ತಂದಿದ್ದಾರೋ ಇಲ್ಲವೋ ಎಂಬುದು ತಿಳಿದುಬಂದಿಲ್ಲ. ಪತ್ರಿಕೆಗಳ ಎದುರು ತಮ್ಮ ಮನಸ್ಸಿಗಾದ ನೋವನ್ನು ತೋಡಿಕೊಂಡು ಪರಿತಪಿಸಿದ್ದಾರೆ.

ಈ ಅಹೋರಾತ್ರಿ ಪ್ರತಿಭಟನೆಗಿಂತ ಬಾಡೂಟವೇ ಪ್ರಮುಖ ಸುದ್ದಿ ಆಲ್ವಾ..... ಪತ್ರಿಕೆಯವರು ಮುಖಪುಟದಲ್ಲೇ ಈ ಸುದ್ದಿ ಹಾಕಿ ಬಾಡೂಟ ನಿಷೇಧಕ್ಕೆ ತಮ್ಮ ಅಳಿಲುಸೇವೆ ಸಲ್ಲಿಸಿದರು! ಅದನ್ನು ನೋಡಿದ ಕೆಲವು ಬುದ್ಧಿಜೀವಿಗಳು... ಇದೇನಯ್ಯಾ ಇದು ವಿಪಕ್ಷಗಳ ಕತೆ.... ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸೋದಬಿಟ್ಟು ಬಾಡೂಟ ತಿಂದು ಮಜಾ ಮಾಡ್ತಾಕುಂತವಲ್ಲಾ... ಎಂದೆಲ್ಲ ತಮಗಿರುವ ಸಾಮಾಜಿಕ ಕಾಳಜಿ ಪ್ರದರ್ಶಿಸಿದ್ದೂ ಉಂಟು! ಶಾಸಕರ ಮನೆಯವರೂ 'ಮನೇಗ್ಯಾಕೆ ಬಂದಾರು.... ಅಲ್ಲೇ ಸಖತ್ತಾಗಿ ಬಿರ್ಯಾನಿ ಸಿಕ್ತದಲ್ಲ.... ಗಡದ್ದಾಗಿ ಹೊಡೀತಾ ಕುಂತವ್ರೆ.... ಇಷ್ಟೆಯೋ ಇನ್ನೂ ಏನೇನಿದ್ವತೊ ಯಾರು ಕಂಡಿದ್ದಾರು' ಎಂದು ಉರಿದುಬಿದ್ದದ್ದು ಎಲ್ಲೂ ಕಾಣಿಸಲಿಲ್ಲ. ಒಟ್ಟಿನಲ್ಲಿ 'ಅಕ್ರಮ ಗಣಿಗಾರಿಕೆ' ಮರೆತು 'ಬಾಡೂಟ' ಎಲ್ಲರ ಬಾಯಲ್ಲೂ ಕುಣಿಯುವಂತಾಯ್ತು. ಯಡ್ಯೂರಪ್ಪನವರ 'ಬಾಡೂಟ' ಶ್ರಮ ಭಾಗಶಃ ಪ್ರತಿಫಲ ನೀಡಿತ್ತು!

ನಾಗಮಂಗಲದ ಸಮೀಪ ಮುಳುಕಟ್ಟೆ ಎಂಬ ಗ್ರಾಮ ಇದೆ. ಅಲ್ಲಿನ ಗ್ರಾಮದೇವತೆ ಮುಳುಕಟ್ಟಮ್ಮ. ಅದಕ್ಕೆ ಸಾವಿರಾರು ಒಕ್ಕಲು ಇದ್ದಾವೆ. ಈ ಅಮ್ಮ ಅಂತಿಂತಹ ಅಮ್ಮ ಅಲ್ಲ ಬಲೇಜೋರು. ಕಷ್ಟ ಬಂದಾಗ ಹರಕೆ ಹೊರೋದು, ಕಷ್ಟ ನೀಗಿದ ನಂತರ ಅಮ್ಮನ್ನ ಮರೆಯೋದು ಲಾಗಾಯ್ತಿನಿಂದಲೂ ಬಂದಿರೋ ಸಂಪ್ರದಾಯ. ರೆಡ್ಡಿಗಳ ಜೊತೆ ಸೇರಿ ಯಡ್ಯೂರಪ್ಪನವರ ಪದಚ್ಯುತಿಗೆ ಕೈಜೋಡಿಸಿದ್ದ ಸನ್ಮಾನ್ಯ ರೇಣುಕಾಚಾರ್ಯ ಅವರು ಈಗ ರೆಡ್ಡಿಗಳು ನಮ್ಮ ನಾಯಕರಲ್ಲ, ಯಡ್ಯೂರಪ್ಪನವರೇ ನಮ್ಮ ನಾಯಕ ಎಂದೆಲ್ಲ ಹೇಳಲಾರಂಭಿಸಿದಾಗ... ರೆಡ್ಡಿತ್ರಯರಲ್ಲಿ ಪ್ರಮುಖರಾದ ಸನ್ಮಾನ್ಯ ಜನಾರ್ದನ ರೆಡ್ಡಿಯವರು... ವರ ನೀಡಿದ ಭಗವಂತನನ್ನೇ ಮರೆಯುವುದು ಕೆಲವರ ಸ್ವಭಾವ ಎಂದು ಹೇಳಿದ್ದಾರೆ ಅಲ್ಲವೆ. ಈ ರೆಡ್ಡಿಗಳು ರೇಣುಕಾಚಾರ್ಯರನ್ನ ಮರೀಬಹುದು. ಆದರೆ ಮುಳುಕಟ್ಟಮ್ಮ ಇಂತಹ ಮೋಸ ಸಹಿಸುವವಳಲ್ಲ. ಒಂದು ಸಲ ಹರಕೆ ಕಟ್ಟಿದ ಮೇಲೆ ಅದನ್ನು ತೀರಿಸಲೇಬೇಕು. ಮಾತಿಗೆ ತಪ್ಪಿದರೆ ಆ ಅಮ್ಮ ಕಾಟ ಕೊಡೋದು ಗ್ಯಾರಂಟಿ. ಹರಕೆ ತೀರಿಸೋವರೆಗೂ ಹೊಸಲಲ್ಲೇ ಕಾಯ್ತಾ ಕುಂತು ಕೊಡಬಾರದ ಕಷ್ಟ ಕೊಡ್ತಾಳೆ ಅನ್ನೋದು ಭಕ್ತರ ನಂಬಿಕೆ. ಆ ದೇವತೆ ಹಣ್ಣುಕಾಯಿ ಅರ್ಪಿಸಿದರೆ ಕ್ಯಾರೆ ಅಂತಾನೂ ಅನ್ನಲ್ಲ. ಎರಡು ಕಾಲು ನಾಲ್ಕು ಕಾಲಿನ ಬಲೀನೆ ಆಗಬೇಕು!


ಎರಡು ಕಾಲು, ನಾಲ್ಕು ಕಾಲಿನ ಬಲಿ ಅಂದಾಗ ಸಮಾಜ ಸುಧಾರಕ ಎಸ್. ಹೊನ್ನಯ್ಯ ಹೇಳಿದ ಘಟನೆ ನೆನಪಿಗೆ ಬರುತ್ತೆ. ಮಂಡ್ಯ ಜಿಲ್ಲೆಯ ಒಂದು ಕುಗ್ರಾಮ. ದಲಿತರೇ ಇದ್ದ ಊರದು. ಓರ್ವ ದಲಿತ ವಿಧವೆ ಅಕ್ಷಮ್ಮ ಅಪರಾಧ ಮಾಡಿದ್ದು ಊರ ಪಂಚಾಯಿತಿ ಗಮನಕ್ಕೆ ಬಂದಿತು. ಪಂಚಾಯಿತಿ ಸೇರಿತು. ವಿಧವೆಗೆ ದಂಡ ಹಾಕಲು ತೀರ್ಮಾನಿಸಿದರು. 'ನಾಲ್ಕು ಕಾಲಿನ ಬೇಟೆ ಕೊಡಬೇಕು' ಎಂದು ತೀರ್ಮಾನ ಹೇಳಿದರು ಪಂಚಾಯಿತಿಯವರು. ಊರಿಗೆಲ್ಲ ಸಿಗುವ ಬಾಡೂಟ ನೆನೆದು ಎಲ್ಲರ ಬಾಯಲ್ಲಿಯೂ ನೀರೂರಿತು. ಮರಿ ನೀಡಿದರೆ 'ಅಕ್ಷಮ್ಮ' ಅಪರಾಧವೂ 'ಕ್ಷಮ್ಯ' ಆಗುತ್ತದೆ ಎಂದು ಎಲ್ಲರೂ ಭಾವಿಸಿದರು. ಇಂತಹ ದಿವಸ ತಂದು ಪಂಚಾಯಿತಿಗೆ 'ನಾಲ್ಕು ಕಾಲ ಬೇಟೆ'ಯನ್ನು ಒಪ್ಪಿಸಬೇಕೆಂದು ತಿಳಿಸಿದರು. ಆಯಮ್ಮ ನಿರ್ಗತಿಕಳು. ಅಷ್ಟೊಂದು ಹಣ ತರುವ ಚೈತನ್ಯ ಇರಲಿಲ್ಲ. ಕೊಡದಿದ್ದರೆ ಬಹಿಷ್ಕಾರ. ಆ ರೀತಿಯ ಜೀವನವೂ ಅಸಹನೀಯ. ಅವಳು ಅಳಿದು ಸುರಿದು ಹೊನ್ನಯ್ಯನವರ ಹತ್ತಿರ ಹೋಗಿ ತನ್ನ ಕಷ್ಟ ತೋಡಿಕೊಂಡಳಂತೆ. ಪಂಚಾಯಿತಿ ದಿವಸ ತಾನೂ ಬರುವುದಾಗಿ ಹೇಳಿದ ಅವರು ಹೋದರಂತೆ. ಪಂಚಾಯಿತಿ ಸೇರಿತು. ಯಜಮಾನರು ಹೆಂಗಸನ್ನು ಕೇಳಿದರು: 'ನಾಲ್ಕು ಕಾಲ ಬೇಟೆ ತಂದಿದ್ದೀಯಾ?' ಅವಳು 'ತಂದಿ[...] ಕಣಯ್ಯ' ಅಂದಳು 'ಎಲ್ಲಿ ತಂದು ನಿಲ್ಲಿಸು' ಎಂ[...] ಅವರು. ಅವಳೇನು ಮಾಡಿದ್ಲು-ಎರಡು ಎ[...] ಕೋಳಿಪಿಳ್ಳೆಗಳನ್ನು ಮಡಿಲಲ್ಲಿ ತಂದು ಪಂಚಾಯಿತಿದಾ[...] ಎದುರು ಸುರಿದಳಂತೆ! ಬಾಡೂಟ ಬಯಸಿ ಕುಳಿ[...] ಪಂಚಾಯ್ತಿದಾರರ....

ಹೀಗೆ ಮುಳಕಟ್ಟಮ್ಮನಿಗೆ ಮೋಸ ಮಾಡ[...] ಸಾಧ್ಯವೇ ಇಲ್ಲ. ಎರಡು ಕಾಲಿನ ಬಲಿ ಅಂದ್ರೆ ಎರ[...] ಕಾಲಿನದ್ದೇ ಆಗಬೇಕು. ನಾಲ್ಕು ಕಾಲಿನ ಬಲಿ ಅ[...] ಅದೇ ಆಗಬೇಕು. ಇಂತಹ ಬಲೀ ನೀಡಿದರೆ ಪೂಜಾರಿ[...] ಭಕ್ತರಿಗೆ ತೃಪ್ತಿ! ಮುಳುಕಟ್ಟಮ್ಮನೂ ಪ್ರಸ[...] ಯಡ್ಯೂರಪ್ಪನವರ ಈ ಮನಸ್ಥಿತಿಯೇ ಮುಂದುವರೆ[...] ಮುಳುಕಟ್ಟಮ್ಮನಂತಹ ದೇವತೆಯ ಭಕ್ತರು ವಿಧಾನಸ[...] ಪ್ರವೇಶಿಸಲು ಅನರ್ಹರು ಎಂಬ ಕಾನೂ[...] ಬರಬಹುದೇನೋ!

ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ 'ಹಂದಿ ಮಾಂಸ' ಅಂದರೆ ಬಾಯಿ ನಸಗುಡುತ್ತೆ. ಆದರೆ ಅದು ಮೈಲಿಗೆ ಪದಾರ್ಥ. ಅಡುಗೆ ಮನೆ ಒಳಗ[...] ಬೇಯಿಸಬಾರದು. ಅದಕ್ಕೇನಿದ್ದರೂ ಕೊಟ್ಟಿಗೆಯೇ ಪ್ರಶಸ್ತ ಸ್ಥಳ. ಅಲ್ಲೇ ಮೂರು ಕಲ್ಲಿಟ್ಟು ಬೇಯಿಸುತ್ತಾರೆ. ಊಟವೂ ಅಲ್ಲಿಯೇ. ಉಂಡ ನಂತರವೂ ನೇರವಾಗಿ ಗೃಹಪ್ರವೇಶಿಸುವಂತಿಲ್ಲ! ಮಾಡಿದರೆ ಹಂದಿ ಪ್ರವೇಶಿಸಿದಂತೆ! ಭೂತ ದೆವ್ವಗಳೂ ಒಳನುಗ್ಗಲು ಅವಕಾಶ ನೀಡಿದಂತೆ! ಒಳಗೆಹೋಗುವ ಮುನ್ನ 'ಮಡಿ' ಆಗಬೇಕು. ಅದಕ್ಕಾಗಿ ಸ್ನಾನ. ಅದೂ ಅವರೇ ಹಂಡೆಮುಟ್ಟುವಂತಿಲ್ಲ. ಮುಟ್ಟದರೆ ಅದೂ ಹೊಲಸಾಗುತ್ತದೆ! ಹಂದಿ ಬಾಡನ್ನು ಇನ್ನೂ ತಿನ್ನದವರು ಒಂದೆರಡು ಚೆಂಬು ನೀರನ್ನು ಹುಯ್ಯಬೇಕು. ಅಲ್ಲಿಗೆ 'ಮಡಿ' ಆಯಿತು. ನಂತರ ತಾನೇ ಸ್ನಾನ ಮುಂದುವರೆಸಲು ಪರವಾನಗಿ ಸಿಕ್ಕಿದಂತೆ. ನಂತರವೇ ಗೃಹಪ್ರವೇಶ.

ಮುಖ್ಯಮಂತ್ರಿಗಳು ಇಂತಹ ವ್ಯವಸ್ಥೆಯನ್ನೇನಾದರೂ ಮಾಡುವುದು ಇಂದಿನ ತುರ್ತು ಅಗತ್ಯವಾಗಿದೆ. ವಿಧಾನಸೌಧದ ಒಳಗೆ 'ಅಪವಿತ್ರ', 'ಪವಿತ್ರ' ಎಂದು ವಿಭಾಗಿಸಿ, ಅಪವಿತ್ರ ವಿಭಾಗಕ್ಕೆ ಯಾರಾದರೂ ಪ್ರವೇಶಿಸಬಹುದು. 'ಪವಿತ್ರ' ವಿಭಾಗಕ್ಕೆ ಬರುವ ಮುನ್ನ 'ಸ್ನಾನ' ಮಾಡಿ 'ಅಪವಿತ್ರತೆ' ಕಳೆದುಕೊಳ್ಳುವುದು ಕಡ್ಡಾಯ! ಆಗ ನೋಡಿ... ವಿಧಾನಸೌಧದ ಗರ್ಭಾಂಗಣ ಪವಿತ್ರತೆಯಿಂದ ಕಂಗೊಳಿಸುತ್ತದೆ!

ವಿಧಾನಸಭೆ ಸಭಾಂಗಣದಿಂದ ಮಾಂಸಾಹಾರ ಯಾತ್ರೆ ರಾಜನಾಥ್ ಸಿಂಗ್ ಬಾಯಿಗೆ ಬಂದಿತ್ತು. ಸನ್ಮಾನ್ಯರು ಕಾಂಗ್ರೆಸ್ಸಿನವರ ಪಾದಯಾತ್ರೆ ಅದು ಪಾದಯಾತ್ರೆಯೇ ಅಲ್ಲ..... ಪಿಕ್‌ನಿಕ್ ಪಾರ್ಟಿ ಅದು... ಹಗಲಿನಲ್ಲಿ ಡ್ಯಾನ್ಸು ರಾತ್ರಿ ಬಿರಿಯಾನಿ..... ಎಂದೆಲ್ಲ ಪಾದಯಾತ್ರೆಯನ್ನು ಗೇಲಿ ಮಾಡಿದೆ ಎಂದು ಭ್ರಮಿಸಿದ್ದರೆ....... ಈ ಮಾಂಸ ತಿನ್ನೋವು ಅವಲ್ಲ ಅವು ಏನು ಮಾಡಿದೊ ಅಂದ್ರೆ... ನನ್ಮಕ್ಳ ಮಾಂಸ ತಿನ್ನೋರಿಂದ್ಲೆ ಗೆದ್ದಂದು ಅವರ್ನೇ ಹಂಗಿಸ್ತೀರಾ... ತೋರುಸ್ತೀವಿ ಮಾಂಸ ತಿನ್ನೋರ ತಾಕತ್ತೇನು ಅಂತಾವ... ಬಳ್ಳಾರಿಗೆ ಸಾಗರೋಪಾದಿಯಲ್ಲಿ ಹರಿದುಬಿಡೋದೆ.... ●



'ದೇಶಕಾಲ'ದ ಸುತ್ತ...

ಬಳ್ಳಾರಿ ಅದಿರು ಲೂಟಿ ವಿರುದ್ಧ ಎಲ್ಲರೂ ಪ್ರತಿಭಟಿಸುತ್ತಿದ್ದಾರೆ. ಈ ಹಿಂದೆ ಕನ್ನಡ ವಿ.ವಿ.ಯ ಜಮೀನು ಪರಭಾರೆ ವಿರುದ್ಧ ಹೋರಾಟದ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಅಧ್ಯಾಪಕರು ತಮ್ಮ ಹೊಸ್ತಿಲಾಚೆ ನಡೀತಿರೊ ಈ ದರೋಡೆ ವಿರುದ್ಧವೂ ಹೋರಾಟಕ್ಕಿಳಿದು ನಮಗೆ ನಾಯಕತ್ವ ನೀಡಬೇಕು.

ಇದರೊಂದಿಗೆ ಸದಾ ಸಾಮಾಜಿಕ ಪ್ರಜ್ಞೆ ಬೆಳೆಸುವ ಮತ್ತು ಸಾಮಾಜಿಕ ಹೋರಾಟದ ಮುಂಚೂಣಿಯಲ್ಲಿರುವ, ಇತ್ತೀಚೆಗೆ ಹೊಸ ವೇತನ ಶ್ರೇಣಿ ಪಡೆದು, ಶಕ್ತಿ ಸಾಮರ್ಥ್ಯ ಹೆಚ್ಚಿಸಿಕೊಂಡಿರುವ ಇತರ ಅಧ್ಯಾಪಕರೂ ಈ ಹೋರಾಟ ಸಾಗರಕ್ಕೆ ತುಂಗೆಯೋ ಕಾವೇರಿಯೋ ಆಗಬೇಕು ಎಂದೂ ಪ್ರಾರ್ಥಿಸುವೆ.


- ಕೆ.ಪಿ.ಸುರೇಶ, ಬೆಂಗಳೂರು

ಪ್ರಿಯರೆ,

'ಪತ್ರಿಕೆ'ಯಲ್ಲಿ ಬರ್‍ತಾ ಇರೊ 'ದೇಶಕಾಲ ಚರ್ಚೆ'ಯ ಬಿಡಿ-ಬಿಡಿ ಬರಹಗಳನ್ನು ಬಿಡದೆ ಓದ್ತಾ ಇದೀನಿ. ಪರಸ್ಪರ ಕಲ್ಲು ಹೊಡೆದು ಗಾಯ ಮಾಡ್ಕೊಳ್ಳೋದ್ರಲ್ಲಿ ನಮ್ಮ ಲೇಖಕರು ಯಾರಿಗೂ ಕಡಿಮೆಯಿಲ್ಲ ಅನ್ನಿಸ್ತಿದೆ. ಕಳೆದೆರಡು ವರ್ಷಗಳಿಂದ 'ದೇಶಕಾಲ' ಓದ್ತಾ ಇರೋ ನನಗೆ ಅದರೊಳಗೆ ಜಾತೀಯತೆ ಇದೆ. ಪ್ರತಿಗಾಮಿ ಲೇಖಕರೂ ಇದಾರೆ ಅಂತ ಗೊತ್ತಾಗಿದ್ದೆ ನಮ್ಮ ಪತ್ರಿಕೆಯ ಲೇಖನಗಳನ್ನು ಓದಿದ ಮೇಲೇನೆ. ಯಾಕೆಂದ್ರೆ ಮಲೆನಾಡಿನ ಮೂಲೆಯೊಂದರಲ್ಲಿರೋ ಹಳ್ಳೀಲಿ ಕೂತು ಆಗೀಗ ಸಿಗೋ ಪುಸ್ತಕ ಪತ್ರಿಕೆಗಳನ್ನು ಓದ್ತಾ ಮೂಡು ಬಂದಾಗ ನಾಲ್ಕು ಸಾಲಿನ ಕವಿತೆ ಗೀಚೋ ನನ್ನಂತ ಅಜ್ಞಾನಿಗೆ ಬೆಂಗಳೂರು ಮತ್ತು ಬೆಂಗಳೂರಿನ ಸಾಹಿತ್ಯ ರಾಜಕಾರಣ ಗೊತ್ತಾಗೋ ಸಾಧ್ಯತೆ ಇಲ್ಲ. ಇನ್ನು ನಾನು ಪ್ರೀತಿಸುವ ಜಿ. ರಾಜಶೇಖರರಂಥವರು ಸಹ ಈ ಚರ್ಚೆಯಲ್ಲಿ ಅನವಶ್ಯಕವಾಗಿ ಭಾಗವಹಿಸ್ತಿರೋದು ಅಚ್ಚರಿ ಮೂಡಿಸಿದೆ.

ಆದರೆ ಗೌರಿಯವರೆ, ವಿಮರ್ಶೆ, ಸಂವಾದ, ಚರ್ಚೆಗಳೆಲ್ಲ ಅರ್ಥಪೂರ್ಣವಾಗೇನೋ ಇವೆ. ವಿಷಾದವೆಂದರೆ ಅವೆಲ್ಲ 'ದೇಶಕಾಲ' ಅನ್ನೋ ಪತ್ರಿಕೆಯ ಸುತ್ತ ಕೇಂದ್ರಿತವಾಗಿ ನಡೀತಾ ಇರೋದು. ದಯವಿಟ್ಟು ಯಾವುದೋ ಒಂದು ಗುಂಪು ನಡೆಸುವ ಒಂದು ಪತ್ರಿಕೆಯ ಸುತ್ತ ನಾವು ಗಿರಕಿ ಹೊಡೆಯೋದು ಬೇಡ. ಬದಲಿಗೆ ಇದೇ ವಿಚಾರಗಳನ್ನಿಟ್ಟುಕೊಂಡು ವಿಶಾಲವಾದ ಕಾನ್‌ವಾಸಿನಲ್ಲಿ ಚರ್ಚೆ ಮಾಡೋದು ಪತ್ರಿಕೆ ಮತ್ತು ಓದುಗರ ಆರೋಗ್ಯದ ದೃಷ್ಟಿಯಿಂದ ಒಳ್ಳೇದು. ಪ್ಲೀಸ್, **now stop it.**

-ಮಧು ರಂಗೇನಹಳ್ಳಿ



ಪತ್ರಿಕೆಯಲ್ಲಿ ಕೆಲ ವಾರಗಳಿಂದ 'ದೇಶಕಾಲ'ದವರ ವಿಶೇಷದ ಬಗ್ಗೆ ನಡೆಯುತ್ತಿರುವ ಪರ-ವಿರೋಧಗಳ ಚರ್ಚೆಯನ್ನು ಗಮನಿಸುತ್ತಿದ್ದೇನೆ.

ಜಗತ್ತಿನ ಜ್ಞಾನದಾನಿಗಳ (ದಾಹಿಗಳ) ಶ್ರೇಷ್ಠ ವ್ಯಸನದ ವರಾತಕ್ಕೆ, ನಿನ್ನೆಮೊನ್ನೆ ತಾನೆ ಕಣ್ಣುಬಿಟ್ಟ ಅಕ್ಷರದ ಬೇರುಗಳಲ್ಲಿ ದಾಳಿಯಿಕ್ಕುತ್ತಿರುವ ಚೋಜುಗ ಕಂಡುಬರುತ್ತಿದೆ!

ಇದೇ ಸಂದರ್ಭದಲ್ಲಿ ಎಪ್ಪತ್ತರ ದಶಕದಲ್ಲಿ, ಜೆ.ಪಿ. ಚಳವಳಿ ಮತ್ತು ಯಜಮಾನ ಸಂಸ್ಕೃತಿ ವಿರುದ್ಧದ ಬಂಡಾಯದ ದಿನಗಳಲ್ಲಿ, ರಾಜಶೇಖರ ಕೋಟಿ ಅವರ 'ಆಂದೋಲನ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲಂಕೇಶರ 'ಬ್ರಾಹ್ಮಣರೊಂದಿಗೆ ಮಾತುಕತೆ' ಅಂಕಣ ನೆನಪಾಗುತ್ತಿದೆ. ಆ ಅಂಕಣ ಬರಹಗಳನ್ನು ಸಂಗ್ರಹಿಸಿ ಈಗಿನ ವಿಶೇಷ ಚರ್ಚೆಗೆ ಪೂರಕವಾಗಿ ಪ್ರಕಟಿಸಿದರೆ, ಹಳೆಯದರ ಹೊಸ ಆಯಾಮವೊಂದು ದಕ್ಕಬಹುದೆನಿಸುತ್ತದೆ.

ಹಾಗೆಯೇ ಒಂದು ಜನಾಂಗದ ಕಣ್ಣು ತೆರೆಸಿದ ಕವಿಯ ಸಹವಾಸದಿಂದ ಸಿಡಿದು ಬಂದ ಲಂಕೇಶರು ಬರೆದ 'ಅಡಿಗ ಮಜ್ಜನ' ಕವಿತೆಯನ್ನು ಮತ್ತು ಅದಕ್ಕೆ ಪ್ರಚೋದನೆಯಾದ ಅಡಿಗರ 'ಸ್ನಾನ' ಕವಿತೆಯನ್ನೂ ಪ್ರಕಟಿಸಬಹುದು.

ಮೇಲೆ ಪ್ರಸ್ತಾಪಿಸಿದ ಹಳೆಯ ಮಾಹಿತಿಗಳಾವುವೂ ನನ್ನ ಬಳಿಯಿಲ್ಲ. ಬರೀ ನೆನಪಿನ ಆಧಾರದ ಮೇಲೆ ಬರೆದಿದ್ದೇನೆ.


-ಬಿ. ರಾಜಣ್ಣ, ಬೆಂಗಳೂರು

(ನಾವೂ ಕೂಡಾ ಪಿ.ಲಂಕೇಶರು ಬರೆದಿದ್ದ 'ಬ್ರಾಹ್ಮಣರೊಂದಿಗೆ ಮಾತುಕತೆ' ಎಂಬ ಅಂಕಣದ ಪ್ರತಿಗಳ ಹುಡುಕಾಟದಲ್ಲಿದ್ದೇವೆ. ಅವು ಎಲ್ಲಿ ಸಿಗಬಹುದೆಂದು ಓದುಗರು ಸೂಚಿಸಬೇಕೆಂದು ಕೋರುತ್ತೇವೆ. -ಜೆ.ಎಲ್)

ಕ್ಕೆ ಮುರಿದುಕೊಂಡ ಓಂ ಪ್ರಕಾಶ...

ರ್ದೇಶಕ, ನಟ ಓಂ ಪ್ರಕಾಶ್ ರಾವ್ ಪಕ್ಕೆಲುಬು ಕೊಂಡು ಮಂಚಹಿಡಿದು ಮಲಗಿದ್ದಾರೆ.


ರದ ಹಿಂದೆ ಶಿರಸಿ ಬಳಿ ಪ್ರಯಾಣಿಸುತ್ತಿದ್ದ ಓಂ ಕಾರು ಅಪಘಾತಕ್ಕೀಡಾಗಿತ್ತು. ಅವರ ಜೊತೆಗೆ ಹುಡುಗಿಯರು, ಡ್ರೈವರು ಇದ್ದರೂ ಅವರ್‍ಯಾರಿಗೂ ಗಾಯಗಳೂ ಆಗಿರಲಿಲ್ಲ. ಆದರೆ ಕಾಶ್‌ರ ತಲೆಬುರುಡೆ ತೂತಾಗಿ, ಬುಗಳು ಪುಡಿಪುಡಿಯಾಗಿತ್ತು. ಓಂ ಪ್ರಕಾಶ್‌ರನ್ನು ಬೆಂಗಳೂರಿಗೆ ಚಿಕಿತ್ಸೆ ಕೊಡಿಸಲಾಗಿತ್ತು.


ಸಿದ್ದಾಂತ್

ಪ್ರಕಾಶ್‌ಗೆ ಬಿದ್ದಿರುವ ಏಟು ಪರಿಯದ್ದು ಎಂದರೆ ಅವರ ದ ಮೂಳೆಗಳು ಜೋಡಿಸಲೂ ಗದಷ್ಟು ಮುರಿದುಬಿದ್ದಿವೆಯಂತೆ. ಮೂರು ಹಂತದ ಆಪರೇಷನ್ ಮಾಡಿದರೂ ಓಂ ಪ್ರಕಾಶ್ ಕಾಲೂರಿ ವುದು ಕಷ್ಟಕರ ಎಂದು ವೈದ್ಯರೇ ಹೇಳಿಬಿಟ್ಟಿದ್ದಾರೆ. ಸೊಂಟದ ಕೆಳಗಿನ ಮಾತುಗಳನ್ನು ಉದುರಿಸುತ್ತಾ ವಮಾನವಿಡೀ ಹೆಣ್ಣುಮಕ್ಕಳನ್ನು ಶೋಷಿಸುತ್ತಲೇ ಓಂ ಪ್ರಕಾಶ್‌ಗೆ ಇಂಥ ದುರ್ಗತಿ ಬರುತ್ತದೆ ಎಂದು ಎಣಿಸಿರಲಿಲ್ಲ.

ತನಿಂದ ಬಾಧೆಗೊಳಗಾದ ಹೆಣ್ಣುಮಕ್ಕಳು ಥವರ ಶಾಪದಿಂದಾನೇ ಅವನಿಗೆ ಹೀಗಾಗಿರೋದು' ಶಪಿಸುತ್ತಿದ್ದಾರೆ. ಉದ್ಯಮದವರು ಕೂಡಾ ಗಲೂ ಹೆಂಗಸರ ಹಿಂದೆ ಬಿದ್ದು ಸಾಯುತ್ತಿದ್ದ. ಪ್ಪೊತ್ತ ಅವರತ್ತ ನೋಡದ ಹಾಗೆ ಆಗಿಬಿಟ್ಟದೆ' ಎಂಬ ಗಳನ್ನಾಡುತ್ತಿದ್ದಾರೆ. ತೀರಾ ಮೈ ಮುರಿದುಕೊಂಡು ಮುಲ್ಲಿ ಮಲಗಿರುವ ಮನುಷ್ಯನ ಬಗ್ಗೆ ಹೀಗೆಲ್ಲಾ ಡುವುದು ಮಾನವೀಯತೆ ಅಲ್ಲ. ಆದರೆ ಓಂ ನಿಂದ ಘಾಸಿಗೊಳಗಾದವರು ಕಡಿಮೆಯೇ?

ನ್ನೆಮೊನ್ನೆ 'ಹುಲಿ' ಚಿತ್ರದ ಪತ್ರಿಕಾಗೋಷ್ಠಿಯೊಂದಕ್ಕೆ ನ್ನಿಫರ್ ತಡವಾಗಿ ಬಂದಳು ಎಂಬ ಒಂದೇ ., ಹತ್ತಾರುಜನ ಪತ್ರಕರ್ತರು, ಮಾಧ್ಯಮದ




ಾಗಳ ಮುಂದೆಯೇ ಆಕೆಗೆ 'ಅ..ನ್ ಅ...ನ್' ಎಗರಾಡಿದ್ದ ಓಂ ಪ್ರಕಾಶ್. ಆತನ ಬಳಿ ಕೆಲಸ ುವ ಯಾವೊಬ್ಬ ನಟಿಗೂ ಆತನ ಬಗ್ಗೆ ಕಿಂಚಿತ್ತೂ ಬಿರಲು ಸಾಧ್ಯವಿಲ್ಲ. ಹೆಣ್ಣುಮಕ್ಕಳ ವಿಚಾರದಲ್ಲಿ ೊಂದು ಹೀನಚರಿತ್ರೆಯೇ ಈತನ ನೆತ್ತಿಮೇಲಿದೆ.

ಾಸಗಿ ಜೀವನದಲ್ಲೂ ಓಂ ಪ್ರಕಾಶ್‌ದು ಇದೇ ೋ. ಈತ ಈ ತನಕ ಅಧಿಕೃತವಾಗಿ ವೆಯಾಗಿರುವವರ ಸಂಖ್ಯೆಯೇ ನಾಲ್ಕು. ನಟಿ ಾಸ್ ಸೇರಿದಂತೆ ಇತರೆ ಮೂವರು ಪತ್ನಿಯರಿಗೂ ಚೀಟಿ ಕೊಟ್ಟಿರುವ ಓಂ ಪ್ರಕಾಶ್‌ಗೆ ನಾಲ್ಕು ಹಿಂದೆ ಚಿತ್ರೀಕರಣದ ವೇಳೆ ಜೂನಿಯರ್ ಆರ್ಟಿಸ್ಟ್ ಡೆನ್ನಿಸಾ ಎಂಬ ಹುಡುಗಿಯ ಪರಿಚಯವಾಗಿತ್ತು. ಆಕೆಯನ್ನು ತಿರುಪತಿಗೆ ಕರೆದೊಯ್ದು ಓಂಪ್ರಕಾಶ್ ಮದುವೆಯಾದನಂತೆ. ಅದೆಷ್ಟು ಅಧಿಕೃತವೋ ಗೊತ್ತಿಲ್ಲ ಸದ್ಯಕ್ಕೆ ಡೆನ್ನಿಸಾಳೊಂದಿಗೆ ಓಂ ಪ್ರಕಾಶ್ ಜೀವನ ತ್ತಿದ್ದಾನೆ. ಹೀಗೆ ಮನಬಂದಂತೆ ಮದುವೆಯಾಗಿ

ಆನಂತರ ಸೋಡಾಚೀಟಿ ಕೊಡುವ ಓಂ ಪ್ರಕಾಶ್ ಒಂದು ವಿಚಾರದಲ್ಲಿ ಒಳ್ಳೆಯವರು. ಅದೇನೆಂದರೆ ಆತ ಎಂದಿಗೂ ತನ್ನ ಮಕ್ಕಳ ಕೈಬಿಟ್ಟಿಲ್ಲ. ಹಿಂದಿನ ಮೂವರು ಪತ್ನಿಯರ ಮಕ್ಕಳನ್ನೂ ಈಗ ಡೆನ್ನಿಸಾ ಅವರೇ ಸಾಕಿ ಸಲುಹುವಂತೆ ವ್ಯವಸ್ಥೆ ಮಾಡಿಕೊಟ್ಟಿದ್ದಾರಂತೆ.

ವಿಕಟವೆಂದರೆ, ಯಾವ ಮಗು ಯಾವ ಪತ್ನಿಯದ್ದು ಎಂಬುದು ಸ್ವತಃ ಓಂ ಪ್ರಕಾಶ್‌ಗೂ ಗೊತ್ತಿಲ್ಲವಂತೆ! ವರ್ಷದ ಹಿಂದೆ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಓಂ ಪ್ರಕಾಶ್ ಮಗನನ್ನು ಯಾರೋ ಕಿಡ್ನಾಪ್ ಮಾಡಿದ್ದರು. ಆಗ ದೂರು ದಾಖಲಿಸುವ ಸಂದರ್ಭದಲ್ಲಿ ಓಂ ಪ್ರಕಾಶ್ ಕುಟುಂಬದವರಿಗೆ ಆ ಮಗುವಿನ ತಾಯಿ ಯಾರು ಎಂಬುದೇ ಗೊತ್ತಿರಲಿಲ್ಲ. ಓಂ ಪ್ರಕಾಶ್‌ರ 'ಘೋರ' ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಇಂಥ ನೂರಾರು ಪ್ರಕರಣಗಳು ಉದುರುತ್ತವೆ...


ಸಂದೇಶ್ ನಾಗರಾಜ್

ಈಗ ಓಂ ಪ್ರಕಾಶ್ ಹಾಸಿಗೆ ಹಿಡಿದು ಮಲಗಿರುವುದರಿಂದ ಕನ್ನಡ ಚಿತ್ರರಂಗಕ್ಕೆ ಏನಿಲ್ಲವೆಂದರೂ ಇಪ್ಪತ್ತು ಕೋಟಿ ರೂಪಾಯಿಗಳ ಲಾಸ್ ಗ್ಯಾರೆಂಟಿ ಎಂದು ಗಾಂಧಿನಗರದ ಲೆಕ್ಕ ಪರಿಶೋಧಕರು ಶರಾ ಬರೆಯುತ್ತಿದ್ದಾರೆ. ಏಕೆಂದರೆ ಓಂ ಪ್ರಕಾಶ್ ಒಪ್ಪಿಕೊಂಡಿದ್ದ ಕೆಲಸಗಳಲ್ಲಿ ಸದ್ಯ ಮುಗಿಸಿರುವುದು 'ಹುಲಿ' ಚಿತ್ರವನ್ನು ಮಾತ್ರ. ಈಗಾಗಲೇ ಐದು ಕೋಟಿ ಖರ್ಚು ಮಾಡಲಾಗಿರುವ 'ಎ.ಕೆ. 56' ಚಿತ್ರ ಆರಂಭವಾಗಿ ಒಂದು ವರ್ಷ ಕಳೆದರೂ ಅದಿನ್ನೂ ಅರ್ಧಕ್ಕೇ ನಿಂತಿದೆ. ಮಾಜಿ ಮಿನಿಸ್ಟರ್ ಜಿ. ಪರಮೇಶ್ವರ್ ಅವರ ಸಂಬಂಧಿ ಸಿದ್ದಾಂತ್ ಈ ಚಿತ್ರದ ಹೀರೋ. ಹಿಂದೆ 'ಮಿಂಚು' ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ ಈ ಹುಡುಗನನ್ನು ಆಕ್ಷನ್ ಹೀರೋ ಮಾಡ್ತೀನಿ ಎಂದು ಆತನ ತಲೆ ಮೇಲೆ ಕೈಯಿಟ್ಟು ಆಣೆ ಮಾಡಿದ್ದರು ಓಂ ಪ್ರಕಾಶ್. ತನಗೆ ಇಂತಹ ಡೈರೆಕ್ಟರ್ ಸಿಕ್ಕಿದ ಎಂಬ ಖುಷಿಯಲ್ಲಿ ಸಿದ್ದಾಂತ್ ತನ್ನ ಚಿತ್ರದ ಮುಹೂರ್ತದ ಆಹ್ವಾನ ಪತ್ರಿಕೆಗೇ ಹತ್ತು ಲಕ್ಷ ರೂಪಾಯಿ ಖರ್ಚು ಮಾಡಿದ್ದ. ಈಗಾಗಲೇ ಈ ಹುಡುಗ ತನ್ನ ಎರಡು ಮನೆಗಳನ್ನು ಮಾರಿದ್ದರೂ ಸಿನಿಮಾ ಅರ್ಧಕ್ಕೆ ನಿಂತಿದೆ. ಈಗ ಓಂ ಪ್ರಕಾಶ್ ಈ ಸಿನಿಮಾ ಮುಗಿಸಲು ಇನ್ನೂ ಮೂರು ಕೋಟಿ ಬೇಕು ಎಂದಿದ್ದಾರಂತೆ.

ಒಂದು ಸಿನಿಮಾಕ್ಕೆ ಹೆಚ್ಚೆಂದರೆ ಬೇಕಿರುವುದು 14 ಸಾವಿರ ಅಡಿಗಳ ರಾ ಸ್ಟಾಕ್ ಮಾತ್ರ. ಆದರೆ ಓಂ ಪ್ರಕಾಶ್ ತನ್ನ ಚಿತ್ರಗಳಿಗೆ ಒಂದು ಲಕ್ಷ ಅಡಿಗಳಷ್ಟು ರೀಲು ಸುತ್ತುತ್ತಾರೆ. ಓಂ ಪ್ರಕಾಶ್ ನಿರ್ದೇಶಿಸಿದ ಸಿನಿಮಾ ಥಿಯೇಟರಿನಲ್ಲಿ ನೂರು ದಿನ ನಿಲ್ಲದಿದ್ದರೂ, ಚಿತ್ರೀಕರಣ ಮಾತ್ರ ನೂರಾರು ದಿನ ನಡೆಯುತ್ತದೆ. ಈ ಕಾರಣಕ್ಕೆ ಪ್ರೊಫೆಷನಲ್ ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್, ರಾಮು ತರಹದವರು 'ಇವನ ಸಹವಾಸವೇ ಬೇಡ' ಎಂದು ಸುಮ್ಮನಿರುತ್ತಾರೆ.

ಹೀಗಾಗಿ ಹೊಸ ನಿರ್ಮಾಪಕರಿಗೆ ಬಲೆ ಬೀಸುವುದು ಓಂ ಪ್ರಕಾಶ್‌ಗೆ ಅನಿವಾರ್ಯವಾಗಿಬಿಟ್ಟಿದೆ. ಇತ್ತೀಚೆಗೆ ಬಿಡುಗಡೆಯಾಗಿ ಉತ್ತರ ಕರ್ನಾಟಕದಲ್ಲಿ ಭರ್ಜರಿಯಾಗಿ ಓಡುತ್ತಿರುವ ಥ್ರಿಲ್ಲರ್ ಮಂಜುನ 'ಜಯಹೇ' ಚಿತ್ರದಲ್ಲಿ ಆಕ್ಷನ್ ಹೀರೋಯಿನ್ ಆಗಿ ನಟಿಸಿರುವ ಆಯೇಶಾಳನ್ನು 'ಕನ್ನಡದ ವಿಜಯಶಾಂತಿ ಮಾಡಿಸ್ತೀನಿ' ಎಂದು ಪೂಸಿ ಹೊಡೆದ ಓಂ ಪ್ರಕಾಶ್ ಆಕೆಯ ತಂದೆ ಆಂಧ್ರದ ಹಬೀಬ್‌ರಿಂದ ಇಪ್ಪತ್ತೆಂಟು ಲಕ್ಷ ರೂಪಾಯಿ ಗೆಬರಿದ್ದಾರೆ. ಹೀಗೆ ಓಂ ಪ್ರಕಾಶ್ ಅವರಿವರಿಂದ ಪಡೆದಿರುವ ಅಡ್ವಾನ್ಸ್ ಹಣವೇ ಸಾಕಷ್ಟಿದೆ...



ಈ ಮಧ್ಯೆ ಸಂದೇಶ್ ನಾಗರಾಜ್ ನಿರ್ಮಾಣದಲ್ಲಿ, ದರ್ಶನ್ ನಟಿಸಲಿರುವ 'ಪ್ರಿನ್ಸ್' ಎಂಬ ದುಬಾರಿ ಸಿನಿಮಾವೂ ಆರಂಭವಾಗಿತ್ತು. ಅಷ್ಟೊತ್ತಿಗೆ ಸರಿಯಾಗಿ ಪಕ್ಕೆ ಮುರಿದುಕೊಂಡ ಓಂ ಪ್ರಕಾಶ್ ಈಗ ಅಡ್ಡಡ್ಡ ಮಲಗಿಬಿಟ್ಟಿದ್ದಾರೆ. ಇಂಥ ಯಡವಟ್ಟು ಓಂ ಪ್ರಕಾಶ್ ಸ್ವಲ್ಪ ಮಟ್ಟಿಗಾದರೂ ಚೇತರಿಸಿಕೊಳ್ಳಲು ಕಡೇಪಕ್ಷ ಒಂದು ವರ್ಷವಾದರೂ ಬೇಕು. ಆ ವೇಳೆಗೆ ಈತನನ್ನು ನಂಬಿರುವ ನಿರ್ಮಾಪಕರು, ಕೋಟಿಗಟ್ಟಲೆ ಸಾಲ ನೀಡಿರುವ ಫೈನಾನ್ಶಿಯರುಗಳ ಗತಿ ಏನಾಗಿರುತ್ತದೋ? ಪರಮಾತ್ಮಾ....

ಆದರೆ ಈ ಸ್ತ್ರೀ ಶೋಷಕ ನಿರ್ದೇಶಕನ ಅಂಗಾಂಗಗಳು ಸದ್ಯ ಸ್ಕ್ರಾಪ್ ಆಗಿ ಗುಜರಿ ಸೇರಿರುವುದರಿಂದ ಇನ್ನಾವತ್ತೂ ಆತ ಹೆಣ್ಣುಮಕ್ಕಳತ್ತ ಕಣ್ಣೆತ್ತಿ ನೋಡಲೂ ಸಾಧ್ಯವಿಲ್ಲ. ಆದರೆ ನಿರ್ಮಾಪಕರ ದೃಷ್ಟಿಯಿಂದ ಓಂಪ್ರಕಾಶ್ ಬೇಗ ಚೇತರಿಸಿಕೊಳ್ಳಲಿ!!

• ಅರುಣ್.ಜಿ

arunodayagc@gmail.com




ಕನ್ನಡದ ಕುಡಿಯ ತಮಿಳು ಚಿತ್ರ!

ಕನ್ನಡದ ಕುಡಿಯ ಮೊದಲ ಸಿನಿಮಾವೊಂದು ಬಿಡುಗಡೆಯಾಗುತ್ತಿದೆ.

ಅದು ತಮಿಳಿನಲ್ಲಿ!

ಅದು ಹಿರಿಯ ನಿರ್ದೇಶಕ ಸಿದ್ದಲಿಂಗಯ್ಯನವರ ಮೊಮ್ಮಗ ಮತ್ತು ತಮಿಳಿನ ಖ್ಯಾತ ನಟ ಅಥರ್ವ ನಟಿಸಿರುವ 'ಬಾನ ಕತಾಡಿ' ಚಿತ್ರ. 'ಭೂತಯ್ಯನ ಮಗ ಅಯ್ಯು' ಸೇರಿದಂತೆ ಕನ್ನಡದಲ್ಲಿ ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸಿದ್ದಲಿಂಗಯ್ಯ ತಮ್ಮ ಮೊಮ್ಮಗನ ಮೊದಲ ಸಿನಿಮಾ ಬಿಡುಗಡೆಯಾಗುತ್ತಿರುವುದರಿಂದ ಕನ್ನಡದ ಸಿನಿಮಾ ಪತ್ರಕರ್ತರನ್ನೆಲ್ಲಾ ಕರೆದು ಆತನನ್ನು ಪರಿಚಯಿಸಿದ್ದಾರೆ.

ಸಿದ್ದಲಿಂಗಯ್ಯನವರು 1982ರಲ್ಲಿ 'ಪ್ರೇಮಪರ್ವ' ಚಿತ್ರವನ್ನು ಮಾಡಿ ತಮ್ಮ ಮಗ ಮುರಳಿಯನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದರು. ಮೊಮ್ಮಗ ಕೂಡಾ ಕನ್ನಡದಿಂದಲೇ ಲಾಂಚ್ ಆಗಬೇಕು ಎಂಬುದು ಅವರ ಬಯಕೆಯಾಗಿತ್ತು. ಆದರೆ ತಮಿಳಿನಲ್ಲೇ ಅವಕಾಶಗಳು ಬಂದಿದ್ದರಿಂದ ಅದು ಸಾಧ್ಯವಾಗಲಿಲ್ಲವಂತೆ. ಈಗ ತಮ್ಮ ಮಗನಿಗಾಗಿ ತಾವೇ ಸಿನಿಮಾವೊಂದನ್ನು ನಿರ್ಮಿಸಲು ಮುಂದಾಗಿರುವ ಮುರಳಿ ಅಕ್ಟೋಬರ್ ವೇಳೆಗೆ ಆ ಚಿತ್ರವನ್ನು ಆರಂಭಿಸುತ್ತಾರಂತೆ.


ಅಥರ್ವ


'ಸೈಕೋ' ರಮೇಶ್



ಯಾವಾಗಲೂ ತ್ಯಾಗಜೀವಿ ಪಾತ್ರಗಳಲ್ಲೇ ವಿಜೃಂಭಿಸುತ್ತಿದ್ದ ನಾಯಕ ರಮೇಶ್ ಈಗ ಒಂದು ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲು ನಿರ್ಧರಿಸಿದ್ದಾರೆ. ಸದ್ಯದಲ್ಲೇ ಸೆಟ್ಟೇರಲಿರುವ ಹೊಸ ಚಿತ್ರವೊಂದರಲ್ಲಿ ರಮೇಶ್ 'ಸೈಕೋ' ಆಗಿ ನಟಿಸಲಿದ್ದಾರೆ.

ಎಲ್ಲರಿಗೂ ಗೊತ್ತಿರುವಂತೆ ಮಧ್ಯಮವರ್ಗದ ವಿದ್ಯಾವಂತ ಜನರೇ ರಮೇಶ್ ಅಭಿಮಾನಿಗಳು. ರಮೇಶ್ ಎಂದೂ ದರ್ಶನ್ ಅಥವಾ ಸುದೀಪ್ ತರಹ ಪಡ್ಡೆ ಹುಡುಗರ ಡಾರ್ಲಿಂಗ್ ಆಗಿದ್ದೇ ಇಲ್ಲ. ಅವರು ಚಿತ್ರದ ಪಾತ್ರಗಳನ್ನು ಆಯ್ಕೆ ಮಾಡುವಾಗಲೂ ತನ್ನ ಸುಸಂಸ್ಕೃತ ಇಮೇಜಿಗೆ ಧಕ್ಕೆ ಬರದಂತೆ ಎಚ್ಚರ ವಹಿಸುತ್ತಿದ್ದರು. ಆದರೆ ಇತ್ತೀಚೆಗೆ ಅವರ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗೋತಾ ಹೊಡೆದಿದ್ದು ನೋಡಿ ಅವರು ಈಗ ಈ ಬದಲಾವಣೆ ಮಾಡಿಕೊಳ್ಳಲು ನಿರ್ಧರಿಸಿರಬೇಕು.

ಈಗಾಗಲೇ ಹಿಂದಿಯಲ್ಲಿ ಶಾರೂಕ್ ಖಾನ್ ಮತ್ತು ಕನ್ನಡದಲ್ಲಿ ಉಪೇಂದ್ರ ಈ ತರಹದ ಸೈಕೋ ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಪ್ರೀತಿ ಮತ್ತು ಅಭಿಮಾನಕ್ಕೆ ಪಾತ್ರರಾಗಿದ್ದರು. ಆದರೆ ರಮೇಶ್ ಅಭಿಮಾನಿಗಳಿಗೆ ಅದು ಇಷ್ಟವಾಗುತ್ತದೋ ಇಲ್ಲವೋ, ಕಾದು ನೋಡಬೇಕು...


ಂಗರಾಜ್

ಮತ್ತೊಂದು ಸಿನಿಮಾ ಡೈರಿ

ಕನ್ನಡದ ಸಿನಿಮಾ ಮತ್ತು ಟಿ.ವಿ ಲೋಕದ ಸಮಸ್ತರ ಸಂಪರ್ಕದ ಮಾಹಿತಿ ನೀಡುವ 'ಸಿನಿಮಾ-ಟಿವಿ ಡೈರೆಕ್ಟರಿ'ಗಳನ್ನು ಎಂ.ಜಿ. ಲಿಂಗರಾಜ್ ಕಳೆದ ಹತ್ತು ವರ್ಷಗಳಿಂದ ತಮ್ಮ 'ನಂದಿನಿ ಪಬ್ಲಿಕೇಷನ್ಸ್' ಮುಖಾಂತರ ಹೊರತರುತ್ತಿದ್ದಾರೆ. ಸಿನಿಮಾ-ಟಿ.ವಿ ರಂಗದ ಎಲ್ಲಾ ಪ್ರತಿಷ್ಠಿತ ಸಂಘ-ಸಂಸ್ಥೆಗಳ ಪ್ರೋತ್ಸಾಹದಿಂದ ಇಂತಹ ಡೈರೆಕ್ಟರಿ ತರಲು ಸಾಧ್ಯವಾಗಿದೆ ಎನ್ನುವ ಅವರು ಈಗಾಗಲೇ ಐದು ಡೈರೆಕ್ಟರಿಗಳನ್ನು ಬಿಡುಗಡೆ ಮಾಡಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಬಿಡುಗಡೆಯಾದ ಡೈರಿಯಲ್ಲಿ ಈ ಎರಡೂ ಮಾಧ್ಯಮದ 50 ವಿಭಾಗಗಳ, ಸಾವಿರಾರು ವಿಳಾಸ, 5 ಸಾವಿರಕ್ಕೂ ಹೆಚ್ಚು ಫೋನ್-ಮೊಬೈಲ್ ಸಂಖ್ಯೆಗಳು, ಸುಮಾರು 500 ಇ-ಮೇಲ್ ಸಂಪರ್ಕಗಳನ್ನು ನೀಡಿದ್ದರು. ಲಿಂಗರಾಜ್ ಅವರ 'ನಂದಿನಿ ಪಬ್ಲಿಕೇಷನ್ಸ್' ಸಂಸ್ಥೆ ಹುಟ್ಟಿ ಈಗ ಹತ್ತು ವರ್ಷಗಳಾಗಿವೆ. ಈ ದಶಕದ ನೆನಪಿಗಾಗಿ ಅವರು ಪರಿಷ್ಕೃತ (ರಿವೈಸ್) ಡೈರೆಕ್ಟರಿಯನ್ನು ಸಿದ್ಧಪಡಿಸಿ ನವೆಂಬರ್ ಒಂದರ ರಾಜ್ಯೋತ್ಸವ ದಿನದಂದು ಅದನ್ನು ಬಿಡುಗಡೆ ಮಾಡಲಿದ್ದಾರೆ. ಸಂಬಂಧಪಟ್ಟವರು ತಮ್ಮನ್ನು ಕುರಿತ ಮಾಹಿತಿಯನ್ನು ಲಿಂಗರಾಜ್ ಅವರಿಗೆ ನೀಡಬಹುದು.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly

ಸ್ನೇಹ ಬೆಸೆದ ಟ್ವೆಂಟಿ-20

ಸಿನಿಮಾ ಬಿಟ್ಟರೆ ಈ ದೇಶದ ಜನರಿಗೆ ಹುಚ್ಚು ಇರುವುದು ಕ್ರಿಕೆಟ್ ಬಗ್ಗೆ ತಾನೇ? ಅಂತಹ ಸಂದರ್ಭದಲ್ಲಿ ಸಿನಿಮಾ ನಟ-ನಟಿಯರೇ ಕ್ರಿಕೆಟ್ ಆಡಿದರೆ ಜನರು ಇನ್ನೆಷ್ಟು ಕ್ರೇಜಿ ಆಗಬಹುದು? ಆ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಮೊನ್ನೆ ಬೆಂಗಳೂರಿನ ಕಂಠೀರವ ಸ್ಟೇಡಿಯಂಗೆ ನೀವು ಬರಬೇಕಿತ್ತು.

ಅಂದು ಕಂಠೀರವ ಕ್ರೀಡಾಂಗಣ ಬೆಳ್ಳಂಬೆಳಗ್ಗೆಯೇ ಪ್ರೇಕ್ಷಕರಿಂದ ತುಂಬಿ ತುಳುಕುತ್ತಿತ್ತು. ಅಷ್ಟೇ ಅಲ್ಲ; ಕ್ರೀಡಾಂಗಣದ ಹೊರಗಡೆ ಟಿಕೆಟ್ ಸಿಗದೆ ನಿರಾಶೆಗೊಂಡಿದ್ದ ಅಭಿಮಾನಿಗಳು ಅಲ್ಲಲ್ಲೇ ಜಮಾಯಿಸಿದ್ದರು. ನೃತ್ಯಗಾರರ ಸಂಘ ಏರ್ಪಡಿಸಿದ್ದ ಸಿನಿಮಾ ತಾರೆಯರ ಟ್ವೆಂಟಿ-20 ಕ್ರಿಕೆಟ್ ಪಂದ್ಯದ ಎರಡು ಸೆಮಿ ಫೈನಲ್ಸ್ ಮತ್ತು ಫೈನಲ್ಸ್ ಪಂದ್ಯ ಅಂದು ನಡೆಯುವುದಿತ್ತು. ಎಂ.ಎಸ್.ರಮೇಶ್ ನೇತೃತ್ವದ ನಿರ್ದೇಶಕರ ತಂಡ, ಇಂದ್ರಜಿತ್ ಲಂಕೇಶ್ ನೇತೃತ್ವದ ಕ್ಯಾಮರಾಮೆನ್ ತಂಡ, ಸುದೀಪ್ ನೇತೃತ್ವದ ನೃತ್ಯಗಾರರ ತಂಡ ಹಾಗೂ ನಾಗೇಂದ್ರ ಅರಸ್ ನೇತೃತ್ವದ ಸಂಕಲನ ಕಾರರ ತಂಡ - ಹೀಗೆ ಚಿತ್ರರಂಗದ ನಾಲ್ಕು ತಂಡಗಳು ಅಂದು ನೆರೆದಿದ್ದ ಪ್ರೇಕ್ಷಕರಿಗೆ ಕ್ರಿಕೆಟ್ ರಸದೌತಣವನ್ನು ನೀಡಿದವು







ವಾಸ್ತವವಾಗಿ ದಾವಣಗೆರೆಯಲ್ಲಿ ನಡೆಯ ಬೇಕಾಗಿದ್ದ ಈ ಸೆಮಿ ಮತ್ತು ಫೈನಲ್ಸ್ ಪಂದ್ಯ ವನ್ನು ಮಳೆಯ ಕಾರಣಕ್ಕಾಗಿ ಬೆಂಗಳೂರಿಗೆ ವರ್ಗಾಯಿಸಲಾಗಿತ್ತು. ಬೆಂಗಳೂರಿನಲ್ಲಿ ಪಂದ್ಯ ನಡೆಸಿದರೆ ಅಷ್ಟೊಂದು ಸಂಖ್ಯೆಯಲ್ಲಿ ಪ್ರೇಕ್ಷಕರು ಬರಲಾರರು ಎಂಬ ಅಂಜಿಕೆಯಿಂದಲೇ ನೃತ್ಯಗಾರರ ಒಕ್ಕೂಟದ ರಾಜೇಶ್ ಬ್ರಹ್ಮಾವರ್ ಮತ್ತು ಫೈವ್‌ಸ್ಟಾರ್ ಗಣೇಶ್ ಈ ಕ್ರಿಕೆಟ್ ಟೂರ್ನಮೆಂಟನ್ನು ಜಿಲ್ಲಾ ಕೇಂದ್ರವಾದ ದಾವಣಗೆರೆಯಲ್ಲಿ ಆಯೋಜಿಸಿ ದ್ದರು. ಅದಕ್ಕೆ ಕಾರಣ ಜಿಲ್ಲಾ ಕೇಂದ್ರಗಳಲ್ಲಿ ಸಿನಿಮಾ ನಟನಟಿಯರನ್ನು ನೋಡಲು ಅಭಿಮಾನಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಬರ ಬಹುದು ಎಂಬ ಅವರ ಲೆಕ್ಕಾಚಾರ. ಆದರೆ ನಿಜವಾಗಿ ನಡೆದದ್ದೇ ಬೇರೆ. ಯಾವುದೇ ಪ್ರಚಾರ ವಿಲ್ಲದಿದ್ದರೂ ಬೆಂಗಳೂರಿನಲ್ಲಿ ನಡೆದ ಪಂದ್ಯಕ್ಕೆ ಒನ್‌ಡೇ ಮ್ಯಾಚ್‌ಗೆ ಬಂದಂತೆ ಪ್ರೇಕ್ಷಕರು ಮುಗಿಬಿದ್ದರು.

ಈ ಪಂದ್ಯಾವಳಿಯಲ್ಲಿ ನಾಗೇಂದ್ರ ಅರಸ್ ನೇತೃತ್ವದ ಸಂಕಲನಕಾರರ ತಂಡ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಎರಡನೇ ಸ್ಥಾನ, ಎಂ.ಎಸ್.ರಮೇಶ್ ನೇತೃತ್ವದ ನಿರ್ದೇಶಕರ ತಂಡಕ್ಕೆ ದೊರೆತಿತ್ತು, ಹೇಗೆ ಒಂದು ಚಿತ್ರಕ್ಕೆ ನಿರ್ದೇಶಕ ಮತ್ತು ಸಂಕಲನಕಾರ ಜೊತೆಗೂಡಿ ಅಂತಿಮ ರೂಪ ಕೊಟ್ಟು ತಮ್ಮ ಕೈಚಳಕ ತೋರಿಸುತ್ತಾರೋ ಹಾಗೆಯೇ ಕ್ರೀಡಾಂಗಣದಲ್ಲೂ ಇವರೇ ಕೈಚಳಕ ಪ್ರದರ್ಶಿಸಿ ತಮ್ಮ ಸಾರ್ವಭೌಮವನ್ನು ಪ್ರದರ್ಶಿಸಿದರು.


ಆದರೆ ಅವರೆಲ್ಲರಿಗೂ ಪ್ರಶಸ್ತಿ ಗೆಲ್ಲುವುದಕ್ಕಿಂತ ಮುಖ್ಯವಾಗಿದ್ದದ್ದು ಚಿತ್ರರಂಗದವರ ನಡುವಿನ ಸ್ನೇಹ. ಪಂದ್ಯ ಆರಂಭವಾಗುವ ಮುನ್ನ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕ್ರೀಡಾಂಗಣದಲ್ಲಿ ಸುಮಾರು 20 ದಿನಗಳ ಕಾಲ ಈ ತಾರೆಯರು, ನಿರ್ದೇಶಕರು, ಸಂಕಲನಕಾರರು, ಛಾಯಾಗ್ರಾಹಕರು, ನೃತ್ಯಗಾರರು, ಗೀತರಚನಕಾರರು... ಎಲ್ಲರೂ ಬೆಳಗ್ಗಿನ ಜಾವ 6 ರಿಂದ 9ರ ತನಕ ನಿತ್ಯವೂ ಪ್ರಾಕ್ಟೀಸ್ ಮಾಡುತ್ತಿದ್ದರು. ಅಲ್ಲಿ ಬಂದವರಿಗೆಲ್ಲ ಬೆಳಗ್ಗೆ ಟೀ-ಕಾಫಿ, ಬಿಸ್ಕೆಟ್, ಸ್ಯಾಂಡ್‌ವಿಚ್ ವ್ಯವಸ್ಥೆ ಇರುತ್ತಿತ್ತು, ಆಟ ಮುಗಿದು ಮನೆಗೆ ಹೋಗುವ ಹೊತ್ತಿಗೆ ಬಿರಿಯಾನಿಗೂ ವ್ಯವಸ್ಥೆ ಮಾಡಿರಲಾಗುತ್ತಿತ್ತು, ಅಲ್ಲಿ ಎಲ್ಲರೂ ತಮ್ಮೆಲ್ಲ ಹಮ್ಮು-ಬಿಮ್ಮುಗಳನ್ನು ಮರೆತು ಒಂದೇ ತಟ್ಟೆಯಿಂದ ಊಟ ಮಾಡುತ್ತಿದ್ದದ್ದನ್ನು ನೋಡಿದ ಅಭಿಮಾನಿಗಳು ಆಶ್ಚರ್ಯಪಡುತ್ತಿದ್ದರು.

ಇಂತಹ ಬಾಂಧವ್ಯದಿಂದಾಗಿಯೇ ಈ ಕ್ರಿಕೆಟ್ ಪಂದ್ಯ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಮತ್ತು ಗೆಳೆತನ ಬೆಳೆಸಿಕೊಳ್ಳಲು ತುಂಬಾ ಸಹಕಾರಿಯಾಯಿತು. ಕಳೆದ ವರ್ಷ ಜಯಮಾಲ ನೇತೃತ್ವದಲ್ಲಿ ಅಮೃತ ಮಹೋತ್ಸವದ ಸಮಾರಂಭಕ್ಕಾಗಿ ನಡೆದ ಮನೋರಂಜನಾ ಕಾರ್ಯಕ್ರಮದ ಸಿದ್ಧತೆಯ ಸಂದರ್ಭದಲ್ಲೂ ಇಷ್ಟೊಂದು ಸೌಹಾರ್ದ ಮಯ ವಾತಾವರಣವಿರಲಿಲ್ಲ.

ಈ ಟೂರ್ನಮೆಂಟ್‌ನಲ್ಲಿ ಯುವಕರು ಹೆಚ್ಚು ಉತ್ಸಾಹದಿಂದ ಆಟವಾಡಿದರೂ ರವಿಚಂದ್ರನ್, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್ ಕುಮಾರ್ ಮೊದಲಾದವರು ಕ್ರೀಡಾಂಗಣಕ್ಕೆ ಬಂದು ಯುವಕರನ್ನು ಹುರಿದುಂಬಿಸಿದರು. ಇವರಂತೆ ಉದ್ಯ ಮದ ಉಳಿದ ಹಿರಿಯ ನಟನಟಿಯರು ಒಮ್ಮೆ ಕ್ರೀಡಾಂಗಣಕ್ಕೆ ಕಾಲಿಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಕನ್ನಡ ಚಿತ್ರರಂಗದ ಇತಿಹಾಸವನ್ನು ಒಮ್ಮೆ ಕೆದಕಿ ನೋಡಿದರೆ ಹಳೆ ತಲೆಮಾರಿನ ನಾಯಕನಟರುಗಳ ನಡುವೆ ದೊಡ್ಡ ಕಂದಕವೇ ಇತ್ತು ಎಂಬುದು ಗೊತ್ತಾಗುತ್ತದೆ. ಅವರೆಲ್ಲ ಒಂದೇ ವೇದಿಕೆಯಲ್ಲಿ ಒಟ್ಟಾಗಿ ಕಾಣಿಸಿಕೊಂಡ ಉದಾಹರಣೆಗಳೇ ಇಲ್ಲ, ಹೀಗಾಗಿ ಕನ್ನಡ ಚಿತ್ರರಂಗವೆಂದರೆ ಜಯನಗರದ ಗುಂಪು, ಸದಾಶಿವನಗರದ ಗುಂಪು, ರಾಜಾಜಿನಗರದ ಗುಂಪು ಹಾಗೂ ಬನಶಂಕರಿ ಗುಂಪು ಎಂದು ಛಿದ್ರವಾಗಿತ್ತು. ಇಂತಹ ಬಿರುಕುಗಳಿಂದಾಗಿಯೇ ಚಿತ್ರರಂಗದ ಅನೇಕ ಸಮಸ್ಯೆಗಳು ಪರಿಹಾರ ಕಾಣದೆ ಕೊಳೆತುಹೋಗಿದ್ದವು.

ಆದರೀಗ ನಾಯಕ ನಟ ಸುದೀಪ್ ನೇತೃತ್ವದಲ್ಲಿ ನಡೆದ ಈ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಯುವ ತಾರೆಯರು, ತಂತ್ರಜ್ಞರೆಲ್ಲಾ ಒಟ್ಟು ಸೇರಿದ್ದು ಮೆಚ್ಚುವಂತಹದ್ದು. ಸುದೀಪ್ ಹೆಗಲಿಗೆ ಹೆಗಲು ಕೊಟ್ಟು ಟೂರ್ನಮೆಂಟ್ ಯಶಸ್ಸಿಗೆ ಕಾರಣರಾದರು ಲೂಸ್‌ಮಾದ ಖ್ಯಾತಿಯ ಯೋಗೇಶ್, 'ಜಾಲೀ ಡೇಸ್' ಪ್ರದೀಪ್, 'ಹಾಗೇ ಸುಮ್ಮನೆ' ಕಿರಣ್, ಧರ್ಮಕೀರ್ತಿ ರಾಜ್, ಧ್ರುವ, ಸೃಜನ್ ಲೋಕೇಶ್, ತರುಣ್‌ಶ್ರೀಧರ್, ಅರುಣ್ ಸಾಗರ್, ತರುಣ್, ನಿರ್ದೇಶಕರಾದ ಮಹೇಶ್, ಇಂದ್ರಜಿತ್ ಲಂಕೇಶ್, ದಿನಕರ್ ತೂಗುದೀಪ್, ನಾಗಶೇಖರ್, ಪ್ರೀತಂ ಗುಬ್ಬಿ, ನಿರ್ಮಾಪಕರಾದ ಬಾ.ಮ.ಹರೀಶ್, ಶಂಕರೇಗೌಡ,. ನೃತ್ಯಗಾರರಾದ ಚಂದ್ರಮೋಹನ್, ಸಂಕಲನಕಾರರಾದ ನಾಗೇಂದ್ರ ಅರಸ್, ಛಾಯಾಗ್ರಾಹಕರಾದ 'ಮುಂಗಾರು ಮಳೆ' ಕೃಷ್ಣ... ಇನ್ನೂ ಅನೇಕರು.



ಇವರೆಲ್ಲರೂ ಕನ್ನಡ ಚಿತ್ರರಂಗದ ಭವಿಷ್ಯದ ತಾರೆಯರು ಮತ್ತು ತಂತ್ರಜ್ಞರು. ಈ ಕ್ರಿಕೆಟ್ ಪಂದ್ಯ ಅವರ ನಡುವೆ ಒಂದು ಸ್ನೇಹದ ಸರಪಳಿಯನ್ನು ಹೊಸೆದಿದೆ. ಹೀಗಾಗಿ ಯಾವುದೇ ಅಸೂಯೆ, ದ್ವೇಷ, ಗಾಳಿಸುದ್ದಿ... ಮೊದಲಾದವುಗಳು ಇವರ ನಡುವಿನ ಸಂಬಂಧವನ್ನು ಕೆಡಿಸಲಾರದು. ಇವರೆಲ್ಲ ಕ್ರೀಡಾಂಗಣದಲ್ಲಿ ತೋರಿದ ಉತ್ಸಾಹ ಮತ್ತು ಕ್ರೀಡಾ ಮನೋಭಾವವನ್ನು ತಮ್ಮ ವೃತ್ತಿಜೀವನದಲ್ಲೂ ತೋರಿಸುತ್ತಾರೆ ಎಂಬುದರಲ್ಲಿ ಸಂಶಯವೇ ಇಲ್ಲ. ಕ್ರಿಕೆಟ್ ಆಟ ಅಜನ್ಮ ಶತ್ರುಗಳಂತೆ ಕಾದಾಡುವ ಭಾರತ ಮತ್ತು ಪಾಕ್ ನಡುವಿನ ಸಂಬಂಧವನ್ನೇ ಸುಧಾರಿಸಬಹುದಾದರೆ ಗಾಂಧಿನಗರದ ಗುಂಪುಗಾರಿಕೆ -ವೈಮನಸ್ಸನ್ನು ಬದಲಾಯಿಸದಿರುವುದೇ?

ಇಷ್ಟಕ್ಕೂ ಈ ಕ್ರಿಕೆಟ್ ಪಂದ್ಯಾವಳಿಯನ್ನು ತಾರೆಯರ ಶೋಕಿ ಆಟ ಎಂದು ಹೀಯಾಳಿಸುವಂತಿರಲಿಲ್ಲ. ಈಗಿನ ಜಮಾನದ ಯುವ ನಾಯಕರಲ್ಲಿ ಅನೇಕರು ಲೀಗ್ ಅಥವಾ ತಮ್ಮ ಯುನಿವರ್ಸಿಟಿ ಪರವಾಗಿ ಆಡಿದ ಅನುಭವವನ್ನು ಹೊಂದಿದವರಾಗಿದ್ದಾರೆ. ಹೀಗಾಗಿ ಬಹುತೇಕ ಪಂದ್ಯಗಳು ಕುತೂಹಲಭರಿತವಾಗಿ ಸಾಗಿದ್ದರಿಂದ ಅಭಿಮಾನಿಗಳಿಗೆ ರೋಮಾಂಚನವನ್ನು ನೀಡಿತು. ಉದಾಹರಣೆಗೆ ಮೊದಲ ಪಂದ್ಯದಲ್ಲಿ ಸುದೀಪ್ ಭರ್ಜರಿ ಸಿಕ್ಸರ್ ಮತ್ತು ಬೌಂಡರಿಗಳ ನೆರವಿನೊಂದಿಗೆ ಬಾರಿಸಿದ 93 ರನ್ ಈ ಟೂರ್ನಮೆಂಟ್‌ನ ಹೈಲೆಟ್. ಅದೇ ತಂಡದಲ್ಲಿ ಆರಂಭದ ಆಟಗಾರನಾಗಿ ಸುದೀಪ್‌ಗೆ ಜೊತೆಗಾರನಾಗಿದ್ದ 'ಜಾಲಿ ಡೇಸ್' ನಾಯಕ ಪ್ರದೀಪ್ ಸಿಡಿಸಿದ ಅರ್ಧಶತಕ ಸುಲಭವಾಗಿ ಮರೆಯುವಂತಹದ್ದಲ್ಲ, ಮೂಗ ಮತ್ತು ಕಿವುಡನಾದರೂ ನಾಯಕನಟನಾಗಿ ನಟಿಸಿ ಕರ್ನಾಟಕದ ಜನರ ಮನಸ್ಸನ್ನು ಗೆದ್ದ ನಾಯಕ ಧ್ರುವ ಅತ್ಯುತ್ತಮ ಗುಣವಂಟ್ಟದ ಕ್ರಿಕೆಟ್ ಆಡಿ ಮತ್ತೊಮ್ಮೆ ಎಲ್ಲರನ್ನೂ ಬೆಚ್ಚಬೀಳಿಸಿದ್ದ! ಈತ ಮೂಗ ಮತ್ತು ಕಿವುಡರಿಗಾಗಿ ನಡೆದ ವಿಶ್ವಕಪ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಆಟಗಾರನೆಂಬುದೇ ವಿಶೇಷ. ಫೈನಲ್ಸ್ ಪಂದ್ಯದಲ್ಲಿ 'ವಿಸ್ಮಯ ಕಾರಿ'ಯಾಗಿ ಆಡಿದ 'ಒಲವೇ ವಿಸ್ಮಯ' ಚಿತ್ರದ ನಾಯಕ ಧರ್ಮಕೀರ್ತಿರಾಜ್ ಏಕಾಂಗಿಯಾಗಿ ಸಂಕಲನಕಾರರ ತಂಡಕ್ಕೆ ಜಯ ತಂದುಕೊಟ್ಟದ್ದು ಟೂರ್ನಮೆಂಟ್‌ನ ಮರೆಯಲಾಗದ ಕ್ಲೈಮ್ಯಾಕ್ಸ್, ಹಾಗೆಯೇ ಕ್ಯಾಮರಾ ತಂಡದ ನಾಯಕ ಇಂದ್ರಜಿತ್ ಲಂಕೇಶ್‌ರ ಸೂಪರ್ ಬ್ಯಾಟಿಂಗ್, ನೃತ್ಯಗಾರರ ತಂಡದ 'ಗೆಳೆಯ' ಖ್ಯಾತಿಯ ತರುಣ್, ಲೂಸ್ ಮಾದ, ದಿಗಂತ್, ಸೃಜನ್ ಲೋಕೇಶ್, ಮಹೇಶ್, ನಾಗೇಂದ್ರ ಅರಸ್, ಪ್ರೀತಂ ಗುಬ್ಬಿ ರಾಕೇಶ್, ರಾಜು... ಇವರೆಲ್ಲಾ ಗಮನ ಸೆಳೆದರು.

ಈ ಟೂರ್ನಮೆಂಟ್ ನಡೆಯುತ್ತದೆಯೋ ಇಲ್ಲವೋ ಎಂಬ ಗುಮಾನಿ ಆರಂಭದಲ್ಲಿ ಉದ್ಯಮದವರನ್ನು ಕಾಡಿತ್ತು, ಇದಕ್ಕೆ ಮುಖ್ಯ ಕಾರಣ ಕಲಾವಿದರ ಸಂಘದ ಅಧ್ಯಕ್ಷ ಅಂಬರೀಶ್ "ಈ ಪಂದ್ಯಾವಳಿಯಲ್ಲಿ ಯಾರೂ ಆಡಬಾರದು. ನವೆಂಬರ್‌ನಲ್ಲಿ ಕಲಾವಿದರ ಸಂಘವೇ ಟೂರ್ನಮೆಂಟ್ ವ್ಯವಸ್ಥೆ ಮಾಡುತ್ತದೆ. ಅದರಲ್ಲಿ ಎಲ್ಲರೂ ಆಡಬೇಕು" ಎಂದು ಫತ್ವಾ ಹೊರಡಿಸಿದ್ದು. ಆದರೆ ರೆಬೆಲ್ ಸ್ಟಾರ್ ಮಾತಿಗೆ ಸುದೀಪ್ ನೇತೃತ್ವದ ಯುವ ನಾಯಕರುಗಳು ಕ್ಯಾರೇ ಅನ್ನದೇ ರೆಬೆಲ್ ಆಗಿ ಆಟವಾಡಿದ್ದು ಉದ್ಯಮದ ದೃಷ್ಟಿಯಿಂದ ಒಂದು ಹೊಸ ಬೆಳವಣಿಗೆ. ಸ್ವತಃ ಕ್ರಿಕೆಟ್ ಪ್ರೇಮಿಯಾದ ಅಂಬರೀಶ್ ಈ ಬಾರಿ ಯಾಕೆ ಎಡವಿದರೋ ಗೊತ್ತಾಗುತ್ತಿಲ್ಲ.

ದಾವಣಗೆರೆಯಲ್ಲಿ ಈ ಪಂದ್ಯಾವಳಿಯ ಆರಂಭದ ಮ್ಯಾಚ್‌ಗಳು ನಡೆದಾಗ ಬೆಳಗ್ಗೆ ಕ್ರೀಡಾಂಗಣದಲ್ಲಿ ವೀರಕಲಿಗಳಂತೆ ಹೋರಾಡುತ್ತಿದ್ದ ತಾರೆಯರು ಸಂಜೆ ಹೊತ್ತಿಗೆ ಅದೆಲ್ಲವನ್ನೂ ಮರೆತು ಪಾರ್ಟಿಗಳಲ್ಲಿ ಕುಣಿದುಕುಪ್ಪಳಿಸುತ್ತಿದ್ದರು. ಅಲ್ಲಿ ತಾವು ತಾರೆಯರು ಎಂಬುದನ್ನು ಮರೆತು ಕುಣಿಯುತ್ತಾ ಕೇಕೆ ಹಾಕುತ್ತಾ ಜೋಕ್ಸ್‌ಗಳನ್ನು ಸಿಡಿಸುತ್ತಾ ಎಲ್ಲರನ್ನೂ ರಂಜಿಸುತ್ತಿದ್ದರು. ಒಟ್ಟಾರೆಯಾಗಿ ಮೂರು ದಿನಗಳ ಕಾಲ ಕ್ರಿಕೆಟ್ ನೆಪದಲ್ಲಿ ಆಟ-ಮೋಜಿನಲ್ಲಿ ತಮ್ಮನ್ನು ತಾವು ನಾಯಕರು ಮರೆತರು. ಜೊತೆಗೆ ಕ್ರಿಕೆಟ್ ಆಟವಾಡಿ ತಂತ್ರಜ್ಞರಿಗಾಗಿ ಧನಸಹಾಯವನ್ನು ಮಾಡಿದರು. ಈ ಟೂರ್ನಮೆಂಟ್ ಯಶಸ್ಸನ್ನು ನೋಡಿದಾಗ ಕ್ರಿಕೆಟ್ ಬಗ್ಗೆ ಅಪಾರವಾದ ಕ್ರೇಜ್ ಇರಿಸಿಕೊಂಡಿದ್ದ ಸಾಹಸಸಿಂಹ ವಿಷ್ಣುವರ್ಧನ್ ಈಗಿದ್ದಿದ್ದರೆ ಸಂತೋಷಪಡುತ್ತಿದ್ದರು ಎಂದು ಬಹುತೇಕರಿಗೆ ಅನ್ನಿಸಿತು. ಯುವನಾಯಕರ ಜೊತೆಗೆ ವಿವಿಧ ತಂಡಗಳ ಅಂಬಾಸಡರ್‌ಗಳಾಗಿ ಕ್ರೀಡಾಂಗಣದಲ್ಲಿದ್ದ ನಾಯಕಿಯರಾದ ಅಂದ್ರಿತಾ ರೇ, ರಾಧಿಕಾ ಪಂಡಿತ್, ನೀತೂ, ಸೋನು ಮೊದಲಾದವರು ಕೂಡಾ ತಮ್ಮ ಕ್ರೀಡಾ ಪ್ರೇಮವನ್ನು ಪ್ರದರ್ಶಿಸಿದರು.

ಈಗ ಟೂರ್ನಮೆಂಟ್ ಮುಗಿದಿದೆ. ಇದರ ಯಶಸ್ಸನ್ನು ನೋಡಿ ಖುಷಿಪಟ್ಟಿರುವ ವ್ಯವಸ್ಥಾಪಕರಾದ ರಾಜೇಶ್ ಬ್ರಹ್ಮಾವರ್, ಫೈವ್‌ಸ್ಟಾರ್ ಗಣೇಶ್ ಮತ್ತು ಸುದೀಪ್ ಇನ್ನು ಮುಂದೆಯೂ ಪ್ರತಿ ವರ್ಷ ಈ ತಾರಾ ಕ್ರಿಕೆಟ್ ಹಬ್ಬವನ್ನು ನಡೆಸಲು ನಿರ್ಧರಿಸಿದ್ದಾರೆ. ಮುಂಬರುವ ದಿನಗಳಲ್ಲಿ ಇದು ಕೆಪಿಎಲ್ ಕ್ರಿಕೆಟ್ ಟೂರ್ನಮೆಂಟ್ ಗಿಂತಲೂ ಹೆಚ್ಚು ಜನರನ್ನು ಆಕರ್ಷಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಏನೇ ಇರಲಿ ಈ ತರುಣರ ಆಟ-ತುಂಟಾಟಕ್ಕೆ ಜೈ ಎನ್ನೋಣ....

• ಶೆಣೈ

shenoylankesh@gmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44